“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತಾರನೆಯ ಅಧಿವೇಶನ

16ನೇ ಫೆಬ್ರವರಿ 2022

ಬುಧವಾರ

## ವಿಷಯಾನುಕ್ರಮಾಣಿಕೆ (Index)

**01. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸಾವ "ರಾಷ್ಟ್ರ ಧ್ವಜಕ್ಕೆ ಸಚಿವರೊಬ್ಬರು ಅಗೌರವ ತೋರಿದ್ದಾರೆ ಎನ್ನುವ ಬಗ್ಗೆ"**

- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು)
- *ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)*
- *ಶ್ರೀ ಸಿ.ಎಂ.ಇಬ್ರಾಹಿಂ*
- *ಶ್ರೀ ಕೆ.ಟಿ.ಶ್ರೀಕಂಠೇಗೌಡ*
- ಶ್ರೀ ಸಲೀಂ ಅಹಮದ್

**(ಪ್ರಸಾವನೆಯನ್ನು ತಿರಸ್ಕರಿಸಲಾಯಿತು)**

**02. ಸಂತಾಪ ಸೂಚನೆ**

**"ಡಾ:ಹೆಚ್.ಡಿ.ಚೌಡಯ್ಯ ಮತ್ತು ಡಾ:ಚೆನ್ನವೀರ ಕಣವಿ ನಿಧನದ ಬಗ್ಗೆ"**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)

**03.ಪ್ರಕಟಣೆ**

**04. ನಿಯಮ 59ರಡಿಯಲ್ಲಿ ಪ್ರಸ್ತಾಪಿಸಿದ ವಿಷಯದ ಮೇಲೆ ಮಾನ್ಯ ಸಭಾಪತಿಯವರು ನೀಡಿರುವ ತೀರ್ಪನ್ನು ಪುನರ್ ಪರಿಶೀಲಿಸುವ ಬಗ್ಗೆ.**

- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಸಲೀಂ ಅಹಮದ್

**೦5. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**110 – ಗೋಮಾಳ ಜಾಗದ ಬಗ್ಗೆ.**

- ಶ್ರೀ ಎನ್.ರವಿಕುಮಾರ್
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**127 – 500 ಕೋಟಿ ಬೆಲೆ ಬಾಳುವ ಜಮೀನು ಬಲಾಢ್ಯರ ಪಾಲು**

- ಶ್ರೀ ರಘುನಾಥ್ ರಾವ್ ಮಲ್ಕಾಪೂರೆ
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**134 – ರಾಜ್ಯದ ಕಂದಾಯ ಇಲಾಖೆಯಲ್ಲ್ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಬಗ್ಗೆ.**

- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**130 – ಭಾರೀ ಮಳೆ ಮತ್ತು ಪ್ರವಾಹದಿಂದಾದ ಬೆಲೆ ಹಾನಿ ಬಗ್ಗೆ**

- ಶ್ರೀ ಸಿ.ಎನ್.ಮಂಜೇಗೌಡ
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**194 – ವಸತಿ ಯೋಜನೆಗಳ ಬಗ್ಗೆ**

- ಶ್ರೀ ಡಿ.ಎಸ್.ಅರುಣ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರ ಪರವಾಗಿ)

**153 – ಬಗರ್ ಹುಕುಂ ಯೋಜನೆ ಬಗ್ಗೆ.**

- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ**

– – –

(043) 16-2-2022/11-00/ಎಸ್.ಕೆ-ಬಿಎನ್ಎಸ್

# ಕರ್ನಾಟಕ ವಿಧಾನ ಪರಿಷತ್ತು

**ಬುಧವಾರ, 16ನೇ ಫೆಬ್ರವರಿ, 2022**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 11 ಗಂಟೆ 06 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು**

**ಸಭಾಪತಿಯವರು:–** ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

**1. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**
**"ರಾಷ್ಟ್ರ ಧ್ವಜಕ್ಕೆ ಸಚಿವರೊಬ್ಬರು ಅಗೌರವ ತೋರಿದ್ದಾರೆ ಎನ್ನುವ ಬಗ್ಗೆ"**

---

**ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಿಯಮ 59 ರಡಿಯಲ್ಲಿ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ದಯವಿಟ್ಟು, ಅದನ್ನು ಪರಿಗಣಿಸಬೇಕೆಂದು, ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಮೊದಲು ಪ್ರಶ್ನೋತ್ತರ ಅವಧಿ ಮುಗಿದ ನಂತರ ಈ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಲಾಗುವುದು ಎಂದು ತಮಗೆ ಗೊತ್ತಿರಬೇಕು.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆ ಏನಿದೆ ಎಂಬುದರ ಬಗ್ಗೆ ತಾವು ಕೇಳಿ.  ತಮ್ಮ ತೀರ್ಮಾನ ಏನೆಂಬುದು ಹೇಳಬೇಕು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ,  ಪ್ರಶ್ನೋತ್ತರ ಅವಧಿ ಮುಗಿದ ನಂತರ ಇದನ್ನು ತೆಗೆದುಕೊಳ್ಳಲಾಗುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿ ಮುಗಿದ ನಂತರ ಇದರ ಬಗ್ಗೆ ಚರ್ಚೆಯಾಗಲಿ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ದಯವಿಟ್ಟು, . . .

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿ ಮುಗಿದ ನಂತರ ತೆಗೆದುಕೊಳ್ಳೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾವೇ ಮಾಡಿಕೊಂಡ ನಿಯಮದ ಪ್ರಕಾರ ಪ್ರಶ್ನೋತ್ತರ ಅವಧಿ ಮೊದಲು ತೆಗೆದುಕೊಂಡು ನಂತರ ಇದರ ಬಗ್ಗೆ ಪರಿಶೀಲನೆ ಮಾಡಲು ಅವಕಾಶವಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಈ ವಿಷಯ ಸಂವಿಧಾನಕ್ಕೆ ಸಂಬಂಧಪಟ್ಟಂತಹ ವಿಷಯವಾಗಿದೆ.

**ಡಾ. ವೈ.ಎ. ನಾರಾಯಣ ಸ್ವಾಮಿ (ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿ ಮುಗಿದ ನಂತರ ಇದರ ಬಗ್ಗೆ ಚರ್ಚೆಯಾಗಲಿ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಮೊದಲು ಪ್ರಶ್ನೋತ್ತರ ಅವಧಿ ಮುಗಿಯಲಿ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಇದು ಸಂವಿಧಾನದ ವಿಚಾರಕ್ಕೆ ಸಂಬಂಧಪಟ್ಟಿದ್ದಾಗಿದೆ. ಇದರ ಬಗ್ಗೆ ಒಂದು ನಿಮಿಷ ಕೇಳಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರು ಯಾರೂ ಮಾತನಾಡಬೇಡಿ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನನ್ನ ಮಾತನ್ನು ದಯವಿಟ್ಟು ಕೇಳಿ. ಭಾರತ ದೇಶದ ರಾಷ್ಟ್ರ ಧ್ವಜವನ್ನು ...

**(ಗೊಂದಲ)**

**ಸಭಾಪತಿಯವರು:–** ನನ್ನ ಮಾತನ್ನು ಸ್ವಲ್ಪ ಕೇಳಿ.

**(ಗೊಂದಲ)**

**ಡಾ॥ ವೈ. ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರ ಮಾತಿನ ಮೇಲೆ ಗೌರವ ಇರಲಿ.

**(ಗೊಂದಲ)**

**ಸಭಾಪತಿಯವರು:–** ನನ್ನ ಮಾತನ್ನು ಸ್ವಲ್ಪ ಕೇಳಿ. ನಮ್ಮಲ್ಲಿರುವ procedure ಪ್ರಕಾರ ಪ್ರಶ್ನೋತ್ತರ ಅವಧಿ ನಂತರ adjournment motion, ಈ ತರಹದ್ದೆಲ್ಲಾ ತೆಗೆದುಕೊಳ್ಳಲಾಗುವುದು. ಪ್ರಶ್ನೋತ್ತರ ಅವಧಿ ಮುಗಿಯಲಿ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಇದು ಗಂಭೀರವಾದ ಪ್ರಶ್ನೆಯಾಗಿದೆ. ಇದು ಸಂವಿಧಾನದ fundamental duties ಬಗ್ಗೆ ಇರುವ ವಿಚಾರ. ಪ್ರಶ್ನೋತ್ತರ ಅವಧಿಯಲ್ಲಿ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಮಂತ್ರಿಗಳು ತಮ್ಮ ಜವಾಬ್ದಾರಿಗಳನ್ನು ಬಿಟ್ಟು, ರಾಷ್ಟ್ರ ಧ್ವಜದ ವಿರುದ್ಧ ಹೇಳಿಕೆಯನ್ನು ಕೊಡುವಾಗ, ಈ ಸದನದಲ್ಲಿ ಅವರ ಜವಾಬ್ದಾರಿ ಏನು ಎಂಬುದರ ಬಗ್ಗೆ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಸದನದ ನಿಯಮವನ್ನು .....

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ತಾವು ruling ಕೊಡಿ. ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿರತಕ್ಕಂತಹ ಮಂತ್ರಿಗಳು ಬಂದು ಉತ್ತರ ಕೊಡಬಹುದೇ ಎಂಬುದು ಬಹಳ ಮುಖ್ಯ.

**(ಗೊಂದಲ)**

**ಡಾ॥ ವೈ.ಎ. ನಾರಾಯಣಸ್ವಾಮಿ:–** ಅವರ ಹೇಳಿಕೆಯನ್ನು ಇವರು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ.

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಒಟ್ಟಿಗೆ ಮಾತನಾಡಬೇಡಿ. ಒಬ್ಬಬ್ಬರಾಗಿ ಮಾತನಾಡಿ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಇಷ್ಟೇ. ಈ ದೇಶದ ರಾಷ್ಟ್ರ ಧ್ವಜಕ್ಕೆ ಅವಮಾನ ಮಾಡಿರುವ ಮಂತ್ರಿಗಳು ಬಂದು ಈ ಸದನದಲ್ಲಿ ಉತ್ತರ ಕೊಡಬಹುದಾ ಎಂಬ ಬಗ್ಗೆ ತಾವು ದಯವಿಟ್ಟು ಸ್ವಲ್ಪ ಹೇಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿ ಮುಗಿದ ನಂತರ ನಿಲುವಳಿ ಸೂಚನೆ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಅದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ತಮಗೆ ಅಧಿಕಾರವಿದೆ.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಚಿವರು ಈ ತರಹ ಹೇಳಿಕೆಯನ್ನು ಕೊಡಬಹುದೇ? ಕೆಂಪು ಕೋಟೆಯ ಮೇಲೆ ಕೇಸರಿ ಧ್ವಜ ಹಾರಿಸುತ್ತೇವೆ ಎಂದು ಹೇಳುತ್ತಾರಲ್ಲವೇ, ......ಅವರಿಗೆ ನಾಚಿಕೆಯಾಗಬೇಕು. ...

**(ಗೊಂದಲ)**

**(ಮುಂದು)**

**(044) 16.02.2022, 11.10, ಟಿಸಿಹೆಚ್-ಕೆಎಸ್**

(ಮಾನ್ಯ ಸಭಾಪತಿಯವರು)

**ಸಭಾಪತಿಯವರು:-** ಈಗ ಪ್ರಶ್ನೋತ್ತರ ಅವಧಿ, ಪ್ರಶ್ನೋತ್ತರ ಅವಧಿಯ ನಂತರ ಅವಕಾಶ ಮಾಡಿಕೊಡುತ್ತೇನೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಿ.

**(ಗೊಂದಲ)**

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೇ ಆಗುವುದಿಲ್ಲ. ಈಗ ಹೆಚ್.ಎಂ.ರಮೇಶ್‌ಗೌಡರವರೇ ತಾವು ಪ್ರಶ್ನೆ ಕೇಳಿ.

**(ಗೊಂದಲ)**

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿ ಮುಗಿಯುವವರೆಗೆ ಅವಕಾಶ ಕೊಡುವುದಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಪ್ರಶ್ನೋತ್ತರ ಅವಧಿಯ ನಂತರ ಪ್ರಸ್ತಾಪ ಮಾಡಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾವು ಹೇಳುವುದನ್ನು ಸ್ವಲ್ಪ ಕೇಳಿ. ತಮ್ಮ ತೀರ್ಮಾನವನ್ನು ಪ್ರಶ್ನೋತ್ತರ ಆದ ನಂತರ ಕೊಡಿ.**(ಗೊಂದಲ)** ಮಾನ್ಯ ಸಭಾಪತಿಯವರೇ, ರಾಷ್ಟ್ರ ಧ್ವಜಕ್ಕೆ ದ್ರೋಹ ಮಾಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಹೇಳುವುದನ್ನು ಕೇಳಿ. ನಮ್ಮಲ್ಲಿ ಒಂದು ಪ್ರೊಸೀಜರ್ ಇದೆ. ನಿಲುವಳಿ ಸೂಚನೆಯನ್ನು ಪ್ರಶ್ನೋತ್ತರ ಅವಧಿ ಮುಗಿದ ನಂತರ ಪ್ರಸ್ತಾಪ ಮಾಡುವುದಕ್ಕೆ ಅನುಮತಿ ಕೊಡುತ್ತೇನೆ. ಆಗ ತಾವು ಮಾತನಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾವು ಸಂವಿಧಾನದ ಚೌಕಟ್ಟಿನಲ್ಲಿ ಈ ನಿಯಮಾನುಸಾರ ಈ ಸದನವನ್ನು ನಡೆಸುತ್ತಿದ್ದೇವೆ. ಆ ಸಂವಿಧಾನವನ್ನೇ ಗಾಳಿಗೆ ತೂರಿರುವಾಗ ಸರ್ಕಾರದ ನಿಲುವು ಏನೆಂದು ಹೇಳಬೇಕು.

**(ಗೊಂದಲ)**

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿ ಮುಗಿದ ನಂತರ ನಿಮಗೆ ಪ್ರಸ್ತಾಪ ಮಾಡುವುದಕ್ಕೆ ಅನುಮತಿ ಕೊಡುತ್ತೇನೆ. ಈಗ ನಾನು ಅನುಮತಿ ಕೊಡುವುದಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ವಿಚಾರ.

**ಸಭಾಪತಿಯವರು:-** ಮಾನ್ಯ ಹೆಚ್.ಎಂ.ರಮೇಶ್‌ಗೌಡರವರೇ ತಾವು ತಮ್ಮ ಪ್ರಶ್ನೆ ಕೇಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈಗ ಪ್ರಶ್ನೋತ್ತರ ಅವಧಿಯನ್ನು suspend ಮಾಡಿ, ಈ ವಿಚಾರವನ್ನು ತೆಗೆದುಕೊಳ್ಳುವಂತೆ ಹೇಳುತ್ತಿದ್ದೇವೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಈ ರಾಷ್ಟ್ರಕ್ಕೆ ಅವಮಾನವಾಗಿದೆ. ಇದಕ್ಕಿಂತ ದೊಡ್ಡ ಅವಮಾನ ಬೇಕೆ?

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಪ್ರಶ್ನೋತ್ತರ ಅವಧಿಯ ನಂತರ ತೆಗೆದುಕೊಳ್ಳಿ.

**(ಗೊಂದಲ)**

**ಸಭಾಪತಿಯರು:-** ದಯವಿಟ್ಟು ಯಾರಾದರೂ ಒಬ್ಬರು ಮಾತನಾಡಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈಗ ನಮ್ಮ ನಿಲುವಳಿ ಸೂಚನೆ ಏನಿದೆಯೋ ಅದನ್ನು ಸ್ವಲ್ಪ ಕೇಳಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೊಧ ಪಕ್ಷದ ನಾಯಕರೇ, ಮಾನ್ಯ ಸಭಾಪತಿಯವರು ಹೇಳಿದ್ದನ್ನೂ ಕೂಡ ಗಮನದಲ್ಲಿಟ್ಟುಕೊಳ್ಳಿ. ನಮ್ಮಲ್ಲಿ ನಿಯಮಗಳಿವೆ, ಪ್ರಶ್ನೋತ್ತರ ಅವಧಿ ಮುಗಿದ ನಂತರ ಅದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಆಗ ತಾವು ಪ್ರಸ್ತಾಪ ಮಾಡಿ. ನಾನು ಈಗ ನಾನು ಅದಕ್ಕೆ ಅವಕಾಶ ಕೊಡುವುದಿಲ್ಲ.

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ನಾವು ಯಾವ ಕಾರಣಕ್ಕೂ ನಾವು ಒಪ್ಪುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಅದು ನಿಮಗೆ ಬಿಟ್ಟಿದ್ದು.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಜಮೀರ್ ಅಹಮದ್ ರವರ ಹೇಳಿಕೆ ಮೇಲೂ ಕೂಡ ಚರ್ಚೆಯಾಗಲಿ.

**(ಗೊಂದಲ)**

**ಸಭಾಪತಿಯವರು:–** ಡಾ.ವೈ.ಎ.ನಾರಾಯಣಸ್ವಾಮಿಯವರೇ, ತಾವು ದಯವಿಟ್ಟು ಕುಳಿತುಕೊಳ್ಳಬೇಕು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ದಯವಿಟ್ಟು ನಮ್ಮ ನಿಲುವಳಿ ಸೂಚನೆಯನ್ನು ಓದುವುದಕ್ಕಾದರೂ ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರದ ನಂತರ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕು.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ದಯವಿಟ್ಟು ತಾವು ತಿಳುವಳಿಕೆ ಹೊಂದಿರತಕ್ಕಂಥವರು ಹಾಗೂ ಬಹಳ ಅನುಭವಸ್ಥರು ಇದ್ದೀರಿ, ಆದ್ದರಿಂದ ಪ್ರಶ್ನೋತ್ತರ ಅವಧಿ ಮುಗಿದ ನಂತರ ನಾನು ನಿಮಗೆ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಇರುವುದು ಇಷ್ಟೆ. ನಾನು ನೀವು ಪ್ರಶ್ನೋತ್ತರ ಅವಧಿಯನ್ನು ನಡೆಸಬೇಡಿ ಎಂದು ಹೇಳುತ್ತಿಲ್ಲ. ಆದರೆ ನಾನು ನನ್ನ ನಿಲುವಳಿ ಸೂಚನೆಯನ್ನು ಓದುತ್ತೇನೆ. ಆನಂತರ ತಾವು ತೀರ್ಮಾನ ತೆಗೆದುಕೊಳ್ಳಿ.

**(ಗೊಂದಲ)**

**ಸಭಾಪತಿಯವರು:–** ನಾನು ಪ್ರಸ್ತಾಪ ಮಾಡಲು ಅನುಮತಿ ಕೊಟ್ಟಿದ್ದೇನೆ. ಆದರೆ ಈಗ ಪ್ರಸ್ತಾಪ ಮಾಡಲು ಅನುಮತಿ ಕೊಡುವುದಿಲ್ಲ. ಪ್ರಶ್ನೋತ್ತರ ಅವಧಿಯ ನಂತರ ತಾವು ಪ್ರಸ್ತಾಪ ಮಾಡಬಹುದು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಈ ರಾಷ್ಟ್ರದ ಸಂವಿಧಾನದ ಪ್ರಶ್ನೆ. ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ. ..

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಈ ವಿಷಯ ಈ ಸದನದಲ್ಲಿ ಚರ್ಚೆಯಾಗದಿದ್ದರೆ, ಇನ್ಯಾವ ಸದನದಲ್ಲಿ ಚರ್ಚೆಯಾಗಬೇಕು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಎದ್ದು ನಿಂತು ಮಾತನಾಡಿದರು)**

**ಸಭಾಪತಿಯವರು:–** ದಯವಿಟ್ಟು ತಾವೆಲ್ಲರೂ ಕುಳಿತುಕೊಳ್ಳಿ. ನಮ್ಮ ಸದನದಲ್ಲಿ ನಿಯಮಗಳಿವೆ, ಆ ನಿಯಮಗಳ ಪ್ರಕಾರ ಯಾವುದೇ adjournment motion ಬಂದರೆ, ಅದನ್ನು ಪ್ರಶ್ನೋತ್ತರ ಅವಧಿ ಮುಗಿದ ನಂತರ ತೆಗೆದುಕೊಳ್ಳುತ್ತೇವೆ. ಆಗ ನಾನು ಮಾತನಾಡಲು ಅನುಮತಿ ಕೊಡುತ್ತೇನೆ ಮಾತನಾಡಿ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಇದನ್ನು ವಿಶೇಷ ಪ್ರಕರಣದಲ್ಲಿ ತೆಗೆದುಕೊಳ್ಳಬೇಕು.

**(ಗೊಂದಲ)**

**ಸಭಾಪತಿಯವರು:–** ಪ್ರಶ್ನೋತ್ತರ ನಂತರ ನಾನು ಅವಕಾಶ ಕೊಡುತ್ತೇನೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಅವಕಾಶ ಕೊಡಬೇಕು.

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸದನದ ಪೀಠಕ್ಕೆ ಗೌರವ ಕೊಡದೇ ಇರುವವರು ಸಂವಿಧಾನ ಬಗ್ಗೆ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಒಂದು ಬಾರಿ ಮಾನ್ಯ ಸಭಾಪತಿಯವರು ಹೇಳಿದ ನಂತರ, ಅದನ್ನು ದಯಮಾಡಿ overrule ಮಾಡಬೇಡಿ. ಸಭಾಪತಿಯವರು ಒಂದು ಬಾರಿ ತೀರ್ಮಾನ ತೆಗೆದುಕೊಂಡಾಗ ತಾವು ಅದರಂತೆ ನಡೆದುಕೊಳ್ಳಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ತಾವು ಹೇಳಿರತಕ್ಕಂಥದ್ದಕ್ಕೆ ನಮಗೆ ಸಂಪೂರ್ಣವಾದ ಗೌರವವಿದೆ. ಆದರೆ ಈ ರಾಷ್ಟ್ರದಲ್ಲಿ ರಾಷ್ಟ್ರಧ್ವಜಕ್ಕೆ ಯಾರಾದರೂ ಅವಮಾನ ಮಾಡಿದರೆ ನಾವು ಸಹಿಸುವುದಿಲ್ಲ. ಈ ಸದನವು ಕೂಡ ಅದನ್ನು ಸಹಿಸಲೂಬಾರದು. **(ಗೊಂದಲ)** ದಯವಿಟ್ಟು ಅದರ ಬಗ್ಗೆ ಚರ್ಚೆ ಆಗಬೇಕು. **(ಗೊಂದಲ)** ಈ ಸದನದ ಪಾವಿತ್ರ್ಯತೆ ಉಳಿಯಬೇಕಾದರೆ ಚರ್ಚೆಯಾಗಬೇಕು. ತ್ರಿವರ್ಣ ಧ್ವಜಕ್ಕೆ ಅವಮಾನ ಮಾಡಿದ್ದಾರೆ ಅದರ ಬಗ್ಗೆ ಇಲ್ಲಿ ಚರ್ಚೆಯಾಗಬೇಕು.

**(ಗೊಂದಲ)**

**ಸಭಾಪತಿಯವರು:–** ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(45) ಎಸ್‌ಪಿಆರ್/ಜಿಆರ್/11:30/16/02/2022**

**(ಪೂರ್ವಾಹ್ನ 11 ಗಂಟೆ 16 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು**

**ಪುನಃ ಪೂರ್ವಾಹ್ನ 11 ಗಂಟೆ 36 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠಾಸೀನರಾದರು)**

## ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ

**ವಿಷಯ:-** ರಾಷ್ಟ್ರಧ್ವಜಕ್ಕೆ ಸಚಿವರೊಬ್ಬರು ಅಗೌರವ ತೋರಿದ್ದಾರೆ
ಎನ್ನುವ ಬಗ್ಗೆ

* * *

**ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರವನ್ನು ಬದಿಗಿಟ್ಟು ಇದನ್ನು ತೆಗೆದುಕೊಳ್ಳಬೇಕೆಂದು ನಾವು ಈಗಾಗಲೇ ತಮಲ್ಲಿ ಮನವಿ ಮಾಡಿದ್ದೇವೆ. ಏಕೆಂದರೆ, ಇದು ಬಹಳ ಮಹತ್ವವಾದ ವಿಚಾರವಾಗಿದೆ. ನಮ್ಮ ರಾಷ್ಟ್ರಕ್ಕೆ ಅವಮಾನ ಮಾಡುವಂತಹ ಹೇಳಿಕೆಯನ್ನು ಕೊಟ್ಟಿರುವ ಮಂತ್ರಿಯವರೇ ಇವತ್ತಿನ ದಿವಸ ಇಲ್ಲಿಗೆ ಬಂದು ಉತ್ತರಿಸುತ್ತಾರೆಯೋ ಅಥವಾ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ.... ಇದು ನಮ್ಮ ಸಂವಿಧಾನದ ಎಲ್ಲಾ ಅಂಶಗಳನ್ನು ಗಾಳಿಗೆ ತೂರಿ, ಈ ರೀತಿಯ ಹೇಳಿಕೆಯನ್ನು ನೀಡಿದ್ದಕ್ಕಾಗಿ, ತಾವು ಪ್ರಶ್ನೋತ್ತರ ಕಲಾಪವನ್ನು ಬದಿಗಿರಿಸಿ, ವಿರೋಧ ಪಕ್ಷದ ನಾಯಕರಿಗೆ ನಿಲುವಳಿ ಸೂಚನೆಯನ್ನು ಪ್ರಸ್ತಾಪಿಸಲು ಅವಕಾಶ ನೀಡಬೇಕು.

**ಸಭಾಪತಿಯವರು:-** ಒಂದು ನಿಮಿಷ ಕುಳಿತುಕೊಳ್ಳಿ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಇದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು. 'Sedition' ಪ್ರಕರಣವನ್ನು ದಾಖಲಿಸಬೇಕು. ಏಕೆಂದರೆ ಇಷ್ಟು ದಿನಗಳಾದರೂ ಸಹ ಯಾವುದೇ ನಿಯಮದಡಿ ....

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರಗಳ ನಂತರ ಅವಕಾಶ ನೀಡಲು ನಿಯಮಗಳಲ್ಲಿ ಅವಕಾಶವಿದೆ. ನಿಯಮಗಳನ್ನು ಗಾಳಿಗೆ

ತೂರುವುದಕ್ಕಾಗುವುದಿಲ್ಲ. ಹೀಗಾಗಿ ಇದನ್ನು ಪ್ರಶ್ನೋತ್ತರ ಕಲಾಪವಾದ ಮೇಲೆ ಚರ್ಚೆಗೆ ತೆಗೆದುಕೊಳ್ಳಿ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ರಾಷ್ಟ್ರ ದ್ರೋಹದ ಕೆಲಸವಾಗಿದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಏನು ಉತ್ತರ ಕೊಡಲಿಕ್ಕಾದರೂ ಸಹ ಸರ್ಕಾರ ಸಿದ್ಧವಿದೆ.

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ನೀವು 10 ನಿಮಿಷಗಳ ಕಾಲ ಮಾತನಾಡಿ, ನನಗೆ ಮನವರಿಕೆ ಮಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ–59 ರನ್ವಯ ನಿಲುವಳಿ ಸೂಚನೆಯನ್ನು ಮಂಡಿಸಲು ನಾನು ಪ್ರಸ್ತಾವನೆಯನ್ನು ನೀಡಿದ್ದೆನು. ಭಾರತ ದೇಶದ ರಾಷ್ಟ್ರ ಧ್ವಜವಾದ ತ್ರಿವರ್ಣ ಧ್ವಜವು ಈ ದೇಶದ ಹಲವು ಹಿರಿಯ ಹೋರಾಟಗಾರರ ದೀರ್ಘ ಹೋರಾಟ, ತ್ಯಾಗ ಮತ್ತು ಬಲಿದಾನಗಳಿಂದ ಕೂಡಿದೆ. ಇಂತಹ ರಾಷ್ಟ್ರ ಧ್ವಜಕ್ಕೆ ಅವಮಾನ ಮಾಡಿ, ರಾಷ್ಟ್ರದ ಕೆಂಪು ಕೋಟೆಯ ಮೇಲೆ, ಕೇಸರಿ ಧ್ವಜವನ್ನು ಹಾರಿಸುತ್ತೇವೆ ಎಂಬ ಪ್ರಚೋದನಾಕಾರಿ ಮತ್ತು ವಿವಾದಾತ್ಮಕವಾದ ಹೇಳಿಕೆಯು ದೇಶದ ಏಕತೆಯನ್ನು ಛಿದ್ರಗೊಳಿಸುವ ಹುನ್ನಾರವಾಗಿದೆ. ರಾಷ್ಟ್ರಕ್ಕೆ ಅಗೌರವ ತೋರಿಸುವ ಮತ್ತು ರಾಜ್ಯದ ಸಂವಿಧಾನಿಕ ಹುದ್ದೆಯನ್ನು ಹೊಂದಿರುವ ಮಂತ್ರಿಯವರ ಹೇಳಿಕೆಯು ದೇಶಕ್ಕೆ ಅಪಚಾರವೆಸಗಿದಂತಾಗಿದ್ದು, ಅಸಂವಿಧಾನಿಕವಾಗಿರುವ ಈ ವಿಷಯವು ಸಾರ್ವಜನಿಕವಾಗಿ ಮಹತ್ವವಾಗಿರುವುದರಿಂದ ಇವತ್ತಿನ ದಿವಸ ಈ ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾನು ಕೋರುತ್ತೇನೆ. ಸಂವಿಧಾನಿಕ ಚೌಕಟ್ಟಿನೊಳಗೆ ಮಂತ್ರಿಗಳು ಪ್ರಮಾಣ ವಚನವನ್ನು ಸ್ವೀಕರಿಸುತ್ತಾರೆ. ಅದರಲ್ಲಿ ಸಂವಿಧಾನವನ್ನು ಎತ್ತಿ ಹಿಡಿಯುವ ಕೆಲಸವನ್ನು ಮಾಡುತ್ತಾರೆ. ಅದರಲ್ಲಿ ಪ್ರಮುಖವಾಗಿರುವುದು

Fundamental Duties. Article 51A of the Constitution of India reads thus:

> "51A. **Fundamental duties**.—It shall be the duty of every citizen of India—
>
> (a) to abide by the Constitution and respect its ideals and institutions, the National Flag and the National Anthem; ……"

ರಾಷ್ಟ್ರ ಧ್ವಜ ಮತ್ತು ರಾಷ್ಟ್ರ ಗೀತೆ ಎಂದು ಹೇಳಿದಾಗ, ಅದು ತ್ರಿವರ್ಣ ಧ್ವಜ. ಆದರೆ ಇವತ್ತಿನ ದಿವಸ ತ್ರಿವರ್ಣ ಧ್ವಜಕ್ಕೆ ಯಾವ ಸ್ಥಿತಿ ತಂದಿದ್ದಾರೆ ಎಂದು ಹೇಳಿದರೆ, ಇದು ಹೊಸದೇನೂ ಅಲ್ಲ. ಅದು ಭಾರತೀಯ ಜನತಾ ಪಕ್ಷ, ಜನಸಂಘ ಅಥವಾ ಆರ್.ಎಸ್.ಎಸ್., ಆಗಿರಬಹುದು, ಎಲ್ಲವೂ ಸಹ…. ಅವರುಗಳೆಲ್ಲರೂ ಮೊದಲಿನಿಂದಲೂ ಸಹ ಈ ತ್ರಿವರ್ಣ ಧ್ವಜವನ್ನು ಒಪ್ಪಿಕೊಂಡಿಲ್ಲ. ಹೀಗಾಗಿ ಇದು ಹೊಸದೇನೂ ಅಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರೇ, ….

**(ಗೊಂದಲ)**

**(ಮುಂದು)**

**(46) 11.40 16-02-2022 ಸಿಎಸ್:ಜಿಆರ್**

**ಸಭಾಪತಿಯವರು:-** ಸಭಾನಾಯಕರೆ, ನೀವು ನಿಮ್ಮ ಕಡೆಯವರನ್ನು ನಿಯಂತ್ರಿಸಬೇಕು.

**(ಗೊಂದಲ)**

**ಸಭಾಪತಿಯವರು:-** ಈಗ ಮಾತನಾಡಿರುವುದು ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಈ ಹಂತದಲ್ಲಿ ನಡೆದ ಸದನದ ಕಲಾಪವನ್ನು ದಾಖಲಿಸಿರುವುದಿಲ್ಲ.)**

**ಸಭಾಪತಿಯವ**ರು:-ಈ ಸದನದಲ್ಲಿ ಕೆಲವು ನಿಯಮಗಳು ಇವೆ. ಇದು ಹಿರಿಯರ ಮನೆ. ದಯಮಾಡಿ ಪದೇ ಪದೇ ಹೇಳಿಸಿಕೊಳ್ಳಬೇಡಿ. ಸಚಿವರುಗಳು ಸದಸ್ಯರ ಹಾಗೆ ಮಾತನಾಡಬಾರದು. ವಿರೋಧ ಪಕ್ಷದ ನಾಯಕರು ಮಾತನಾಡಲಿ, ನಂತರ ಸರ್ಕಾರ ಉತ್ತರ ಕೊಡುತ್ತದೆ. ಆಮೇಲೆ ನಾನು ನಡವಳಿಯನ್ನು ಪರಿಶೀಲಿಸಿ, ಅವರು ಮಾತನಾಡಿದ್ದನ್ನು ಕಡತದಿಂದ ತೆಗೆಯಬೇಕಾದ್ದಲ್ಲಿ ತೆಗೆಸುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರು ಆರ್.ಎಸ್.ಎಸ್., ನವರಿಗೆ ಏನಾದರೂ ಸಾಕ್ಷಿ ಇದೆಯೇ ಎಂದು ಕೇಳುತ್ತಿದ್ದಾರೆ. ಈ **XXX** ಕಚೇರಿಯಲ್ಲಿ 52 ವರ್ಷ ತ್ರಿವರ್ಣ ಧ್ವಜ ಹಾರಾಡಿರಲಿಲ್ಲ. 17-07-1947ನೇ ಸಾಲಿನಲ್ಲಿ **XXX** ಸಂಘಟನೆಯ.....

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಹಾವಿನಪುರ ಎಲ್ಲಿದೆ, ಪಾಕಿಸ್ತಾನದಲ್ಲಿದೆಯೇ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಗಳೇ, ನಾನೇನಾದರೂ unparliamentary ಪದ ಹೇಳಿದ್ದರೆ ಅದನ್ನು ಕಡತದಿಂದ ತೆಗೆಯಿರಿ, **XXX** ಎನ್ನುವುದು unparliamentary ಪದ ಅಲ್ಲ.

**(ಗೊಂದಲ)**

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರು ಏನು ಮಾತನಾಡುತ್ತಾರೋ ಅದನ್ನು ಮಾತನಾಡಲಿ, ಅದು ಕಡತದಿಂದ ತೆಗೆಸುವಂತಹ unparliamentary ಪದ ಆದಲ್ಲಿ ನಂತರ ತೆಗೆಸುತ್ತೇನೆ.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಗಳೇ, ಸಂವಿಧಾನಬದ್ಧವಾಗಿ ಪ್ರಮಾಣ ಸ್ವೀಕರಿಸಿ ಮಂತ್ರಿಯಾಗಿ ಈ ಸದನಕ್ಕೆ ಬಂದಿರುವವರಿಗೆ parliamentary ಪದ ಯಾವುದು, unparliamentary ಪದ ಯಾವುದು ಎನ್ನುವುದು ಗೊತ್ತಿಲ್ಲದೇ ಇರುವುದಕ್ಕೆ ನಮ್ಮ ರಾಜ್ಯಕ್ಕೆ ಈ ಸ್ಥಿತಿ ಬಂದಿರುವುದು.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಭಾರತಾಂಬೆಯ ಹಾಲನ್ನು ಕುಡಿದವರಾದ ನಾವು ಅಲ್ಲಿ ಹೋಗಿ ಧ್ವಜವನ್ನು ಹಾರಿಸಿದ್ದೇವೆ.

**(ಗೊಂದಲ)**

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೆ, ನೀವು ವಿಷಯಕ್ಕೆ ಸೀಮಿತವಾಗಿ ಮಾತನಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಗಳೇ, ಆಡಳಿತ ಪಕ್ಷದವರು ಸಾಕ್ಷಿಯನ್ನು ಕೇಳಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೇ, ವಿರೋಧ ಪಕ್ಷದ ನಾಯಕರಿಗೆ ನೀವು ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಅವರಿಗೆ ಮಾತನಾಡಲು ಆಡಳಿತ ಪಕ್ಷದವರು ಅವಕಾಶ ಕೊಡುವುದಿಲ್ಲ ಎಂದರೆ ಹೇಗೆ?

**(ಗೊಂದಲ)**

ಸಭಾಪತಿಯವರು:- ನನ್ನ ಅನುಮತಿ ಇಲ್ಲದೇ ಯಾರೂ ಮಾತನಾಡಬಾರದು. ನಡುವೆ ನಡುವೆ ಎದ್ದು ಮಾತನಾಡಿದರೆ ಸದನಕ್ಕೆ ಗೌರವ ಇರುವುದಿಲ್ಲ. ಯಾರು ಕೈ ಎತ್ತುತ್ತಾರೋ ಅವರಿಗೆ ನಾನು ಅವಕಾಶ ಕೊಡುತ್ತೇನೆ. ಅವರು ಮಾತ್ರ ಮಾತನಾಡಲಿ. **(ಮುಂದು)**

**(047)/16-2-2022/11-50/ಎಲ್‌ಎಂ/ಎಂಡಿ**

**ಶ್ರೀ ಬಿ.ಕೆ.ಹರಿಪ್ರಸಾದ್( ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಗಳೆ, ಮಾನ್ಯ ಸ್ನೇಹಿತರು ಸಾಕ್ಷಿಯನ್ನು ಕೇಳಿದ್ದಾರೆ. 17 ಜುಲೈ 1947ರಲ್ಲಿ ಆರ್‌ಎಸ್‌ಎಸ್ ನ ಮುಖವಾಣಿ "Organiser" ನಲ್ಲಿ ಏನು ಹೇಳುತ್ತಾರೆ ಎಂದರೆ *"The people who have come to power by the kick of fate may give in our hands the Tricolour but it will never be respected and owned by Hindus. The word three is in itself an evil, and a flag having three colours will certainly produce a very bad psychological effect and is injurious to a country."* ಇದು "Organiser" ಎನ್ನುವ ಆರ್‌ಎಸ್‌ಎಸ್ ಮುಖವಾಣಿಯಲ್ಲಿ ಬಂದಿರುವುದು.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)**:- ಮಾನ್ಯ ಸಭಾಪತಿಗಳೆ, In Practice and Procedure of Parliament – M.N.Kaul and S.L.Shakdher, it is mentioned as:

> *"If an adjournment motion is sought to be moved on the basis of statement by any Minister, it must set out either the statement in full or at least give a substance of the statement; otherwise, it could not be a definite matter for discussion for which the House should be adjourned."*

ಮಾನ್ಯ ಹರಿಪ್ರಸಾದ್‌ರವರು ಕೊಟ್ಟಿರುವ ವಿಷಯಕ್ಕೆ ಸೀಮಿತವಾಗಿ ಚರ್ಚೆಯಾಗಬೇಕು. 1935/1942/1949ನೇ ಸಾಲಿನಲ್ಲಿ ಏನಾಯಿತು, Representative Assembly ಬಗ್ಗೆ ಚರ್ಚೆಯನ್ನು ಅವರು ಮಾಡಬೇಕಾದರೆ ಅದನ್ನು ಬೇರೆ ರೂಪದಲ್ಲಿ ತಂದು ಚರ್ಚೆ ಮಾಡಲಿ. We have no objection. The Government is capable to answer. ಇವತ್ತಿನ

Adjournment Motion ಬಗ್ಗೆ ಅವರು clear cut ಆಗಿ writing ನಲ್ಲಿ ಏನು ಕೊಟ್ಟಿದ್ದಾರೆ ಅಷ್ಟಕ್ಕೆ ಸೀಮಿತವಾಗಿ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ ತಾವು ದಯಮಾಡಿ ವಿಷಯದ ಬಗ್ಗೆ ಮಾತನಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ** ಮಾನ್ಯ ಮಂತ್ರಿಗಳು ವಿಷಯಕ್ಕೆ ಸೀಮಿತವಾಗಿ ಮಾತನಾಡಬೇಕು ಎಂದು ಹೇಳುತ್ತಿದ್ದಾರೆ. ನಮ್ಮ ವಿಷಯ ಇರುವುದೇ ರಾಷ್ಟ್ರಧ್ವಜಕ್ಕೆ ಸೀಮಿತವಾಗಿ. ಅದನ್ನು ಬಿಟ್ಟು ನಾನು ಏನನ್ನು ಮಾತನಾಡುತ್ತಿಲ್ಲ. The Hon'ble Minister is capable.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:–** ಸಾಕ್ಷಿ ಕೇಳಿದ್ದಕ್ಕೆ ಇದು ಬಂದಿದ್ದು.

**Sri B.K.HARIPRASAD:–** Golwalkar while denouncing the choice of Tricolour as National Flag in an essay entitled 'Drifting and Drifting' in the book "Bunch of Thoughts" wrote:…

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:–** ಮಂತ್ರಿಗಳು ಬೇಕಾದರೆ ಮಾತನಾಡಲಿ. ಆದರೆ ಎಲ್ಲರೂ ಎದ್ದು ನಿಂತು ಮಾತನಾಡಿದರೆ ಹೇಗೆ?

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಗಳೆ, ರಾಷ್ಟ್ರದ ಐಕ್ಯತೆ ಮತ್ತು ಸಾರ್ವಭೌಮತ್ವದ ಮೇಲೆ ದಾಳಿಯಾಗಿದೆ, ಸಂವಿಧಾನದ ಉಲ್ಲಂಘನೆಯಾಗಿದೆ, ಇದಕ್ಕೆ ಕಾರಣರಾದ ಮಾನ್ಯ ಸಚಿವರಾದ ಈಶ್ವರಪ್ಪನವರ ಮೇಲೆ ಯಾವುದೆ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. So, you are confined only to the Minister's statement. ಈ ನಿಯಮವನ್ನು general Adjournment Motion ನಿಯಮದ ಅಡಿಯಲ್ಲಿ ರೆಫರ್ ಮಾಡುತ್ತಿಲ್ಲ. ಮಂತ್ರಿಗಳ ಹೇಳಿಕೆಯ ಮೇಲೆ ಒಂದು Adjournment Motion ಬಂದಮೇಲೆ ಏನು ಮಾಡಬೇಕು, Sri B.K.Hariprasad is a senior member and he

has experience in many Houses. ಅಲ್ಲಿ confine ಆಗಿದೆ. ಅದನ್ನು ನಿಯಮ 69ರಲ್ಲಿ ತೆಗೆದುಕೊಂಡಿ ನಮ್ಮದೇನು ತಕರಾರು ಇಲ್ಲ. Adjournment Motion has to be confined to the concerned subject only.

**ಸಭಾಪತಿಯವರು:-** ಮಂತ್ರಿಗಳು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ ಅದರ ಮೇಲೆ ಮಾತನಾಡಿ. ಬೇರೆ ವಿಚಾರ ಇಲ್ಲಿ ತರುವುದು ಬೇಡ.

**ಶ್ರೀ ಮರಿತಿಬ್ಬೇಗೌಡ:-** ಆಡಳಿತ ಪಕ್ಷದವರು ಸಾಕ್ಷಿ ಕೇಳಿದಾಗ ವಿರೋಧ ಪಕ್ಷದ ನಾಯಕರು ಹೇಳಬೇಕೊ ಬೇಡವೊ.

**(ಗೊಂದಲ)**

**ಡಾ: ವೈ.ಎ.ನಾರಾಯಣಸ್ವಾಮಿ:-** ಬೇರೆ ವಿಚಾರದಲ್ಲಿಯು ನಾವು ಸಾಕ್ಷಿಯನ್ನು ಕೇಳಿದ್ದೇವೆ. ಎಲ್ಲದಕ್ಕೂ ಅವರು ಸಾಕ್ಷಿಯನ್ನು ಕೊಟ್ಟಿದ್ದಾರೆಯೇ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ನೀವು ಮಾತನಾಡಬೇಡಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮಂತ್ರಿಗಳಾದ ಈಶ್ವರಪ್ಪನವರ ಹೇಳಿಕೆ ಏನು ಇದೆ, ದಯಮಾಡಿ ಅದರ ಬಗ್ಗೆ ಮಾತನಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಗಳೆ, ತ್ರಿವರ್ಣ ಧ್ವಜದ ಬಗ್ಗೆಯೇ ಅವರ ಹೇಳಿಕೆ ಇರುವುದು. ನನ್ನ ಸೀನಿಯಾರಿಟಿ ಎನ್ನುವುದು ಗಾಳಿಗೆ ಹೋಗಲಿ, ನಾನು ಜೀವಂತವಾಗಿ ಇರುವುದು ಬೇಕಾಗಿಲ್ಲ. ರಾಷ್ಟ್ರಧ್ವಜದ ಬಗ್ಗೆ ಯಾರಾದರೂ ಅವಮಾನ ಮಾಡಿದಾಗ ನಮ್ಮ ಪೂರ್ವಜನರು ಸಾವಿರಾರು ಜನರು ಹೋರಾಟ ಮಾಡಿ ಜೀವವನ್ನು ಅರ್ಪಿಸಿದ್ದಾರೆ. ಆ ಅಗೌರವವನ್ನು ನಾವು ತಡೆಯುವುದಿಲ್ಲ.

**(ಗೊಂದಲ)**

ತ್ರಿವರ್ಣ ಧ್ವಜ ದುಡ್ಡು ಕೊಟ್ಟು ತಂದಿರುವುದಲ್ಲ. ಅದಕ್ಕಾಗಿ ನಮ್ಮ ಎಷ್ಟೋ ಪೂರ್ವಜರು ಪ್ರಾಣ ಬಿಟ್ಟಿದ್ದಾರೆ ಎನ್ನುವುದನ್ನು ಬೇಕಾದರೆ ಹೇಳುತ್ತೇನೆ. ಮಂತ್ರಿಗಳು ಹೇಳಿರುವುದು ತ್ರಿವರ್ಣ ಧ್ವಜದ ಬಗ್ಗೆ. ರಾಷ್ಟ್ರಧ್ವಜದ ಬಗ್ಗೆ ಗೊತ್ತಿರುವವರು ಯಾರು ಈ ರೀತಿ ಮಾತನಾಡುವುದಿಲ್ಲ. ಅದರ ಬಗ್ಗೆ ನಾನು ಹೇಳಬೇಕಾಗುತ್ತದೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಗಳೆ, ನಾನು ’Zero Hour’ ನಲ್ಲಿ ಈ ವಿಷಯವನ್ನು ನಿನ್ನೆಯೇ ಕೊಟ್ಟಿದೆ. ನಿನ್ನೆಯೇ ಇದಕ್ಕೆ ಅನುಮತಿ ಕೊಟ್ಟಿದ್ದರೆ ಅದು ನಿನ್ನೆಯೇ ಮುಗಿದು ಹೋಗುತ್ತಿತ್ತು. ಇವತ್ತು ಈ ರಾದ್ಧಾಂತವೆ ಇರುತ್ತಿರಲಿಲ್ಲ. ಇದೊಂದು ದೊಡ್ಡ ವಿಷಯವಾಗಿದೆ. ಸಭಾನಾಯಕರು ಮಂತ್ರಿಗಳಿಂದ ವಿವರಣೆಯನ್ನು ಕೇಳಿ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿಬಿಟ್ಟಿದರೆ ನಿನ್ನೆಯೇ ಮುಗಿದು ಹೋಗುತ್ತಿತ್ತು. ಇವತ್ತು ಅದನ್ನು ಇಷ್ಟು ಚೌಡಾ-ಚೌಡಾ ಮಾಡಿ ಚೌಡೇಶ್ವರಿ ಮಾಡಿಬಿಟ್ಟಿದ್ದೀರಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು)**:- ಮಾನ್ಯ ಸಭಾಪತಿಗಳೆ, ತ್ರಿವರ್ಣ ಧ್ವಜದ ಬಗ್ಗೆ ಹೇಳುತ್ತೇನೆ, ಕಾಶ್ಮೀರದಲ್ಲಿರುವ ಉಗ್ರಗಾಮಿಗಳು ಅವರು ನಿಮಗೂ-ನಮಗೂ ಎಲ್ಲರಿಗೂ ಉಗ್ರಗಾಮಿಗಳು. ಆ ಉಗ್ರಗಾಮಿಗಳು ಹೇಳುತ್ತಾರೆ *“ಭಾರತೀಯರೆ ಬನ್ನಿ, ನಿಮ್ಮ ತಾಯಿ ಎದೆ ಹಾಲನ್ನು ನೀವು ಕುಡಿದಿದ್ದರೆ ಕಾಶ್ಮೀರದ ಲಾಲಚೌಕ ನಲ್ಲಿ ನಿಮ್ಮ ತ್ರಿವರ್ಣ ಧ್ವಜವನ್ನು ಹಾರಿಸಿ ತಿರುಗಿ ಹೋಗಿ ನೋಡೋಣ”* ಎಂದು ಹೇಳಿದ್ದರು. ಅಂತಹ ಸಮಯದಲ್ಲಿ ಅಲ್ಲಿ ಇರುವ 370ಅನ್ನೆ ರದ್ದು ಮಾಡಿ ಇವತ್ತು ಕಾಶ್ಮೀರದ ಪ್ರತಿಯೊಂದು ಸರ್ಕಾರಿ ಕಚೇರಿ ಮೇಲೆ ತ್ರೀವರ್ಣ ಧ್ವಜವನ್ನು ಹಾರಿಸಿದ ಕೀರ್ತಿ ಯಾರಿಗಾದರೂ ಸಲ್ಲಬೇಕು ಎಂದರೆ ಅದು ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಜಿಯವರಿಗೆ. ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಯಾರ ಬಗ್ಗೆ ಪ್ರಶ್ನೆ ಮಾಡುತ್ತಾರೆ ಇವರು. ತ್ರಿವರ್ಣ ಧ್ವಜದ ಬಗ್ಗೆ ಬಿಜೆಪಿ ಯವರಿಗಿರುವ ಗೌರವದ ಬಗ್ಗೆ ಇವರು ಪ್ರಶ್ನೆ ಮಾಡಿದರಲ್ಲಾ, ಇದನ್ನು ಗೌರವಿಸಬೇಕೆಂದು ಇವರಿಗೆ ಅನ್ನಿಸುವುದಿಲ್ಲವೇ?

**ಶ್ರೀ ಎಸ್.ರವಿ:-** ತ್ರಿವರ್ಣ ಧ್ವಜದ ಬಗ್ಗೆ ಗೌರವವಿರುವುದು ಕಾಂಗ್ರೆಸ್ಸಿಗರಿಗೆ. ಆ ಯೋಗ್ಯತೆ ಇರುವುದು ಕಾಂಗ್ರೆಸ್‌ಗೆ.

**(ಗೊಂದಲ)**

**ಡಾ: ವೈ.ಎ.ನಾರಾಯಣಸ್ವಾಮಿ:-** ಕಾಂಗ್ರೆಸ್‌ನವರು ಕಾಶ್ಮೀರದವರನ್ನು ಸಾಕಿ-ಸಾಕಿಯೇ ಇವತ್ತು ಈ ರೀತಿಯಾಗಿರುವುದು.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಚಿವರಾದ ಈಶ್ವರಪ್ಪನವರು ತಪ್ಪು ಮಾಡಿದ್ದರೆ ತೆಗೆದು ಹೊರಗೆ ಹಾಕಿ. ತಪ್ಪು ಮಾಡಿಲ್ಲ ಎಂದರೆ ಸಮರ್ಥನೆ ಕೊಡಿ. Confine to the subject.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ನೀವು ಎಲ್ಲರೂ ಏಕೆ ಮಾತನಾಡುತ್ತೀರಿ.

**ಶ್ರೀ ಸಿ.ಎಂ.ಇಬ್ರಾಹಿಂ:-** ನಾನು ಮೊನ್ನೆಯೇ ಈ ವಿಚಾರಕ್ಕೆ ಅವಕಾಶವನ್ನು ಕೇಳಿದ್ದೆ. ಅವಕಾಶ ಕೊಡಲಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಗಳೆ, ನಮ್ಮ ಸಭಾನಾಯಕರು ಬಹಳ ಸರಳ ವ್ಯಕ್ತಿ. ಕಾಶ್ಮೀರದ ಉಗ್ರವಾದಿಗಳು "ತಾಯಿ ಹಾಲು ಕುಡಿದಿದ್ದರೆ ಲಾಲಚೌಕನಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿ" ಎಂದು ಹೇಳಿದರು. ಆಗ ನಾವು-ನೀವು ಎಲ್ಲರೂ ಸೇರಿ ಅಲ್ಲಿ ಧ್ವಜವನ್ನು ಹಾರಿಸಿದ್ದೇವೆ.

**ಶ್ರೀ ವಿ.ಸುನೀಲಕುಮಾರ್:-** ನೀವು ಯಾವಾಗ ಹಾರಿಸಿದಿರಿ? ಆ ಸವಾಲನ್ನು ಸ್ವೀಕರಿಸಿದವರು ನಾವು, ನೀವಲ್ಲ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಕಾಂಗ್ರೆಸ್‌ನವರು ಯಾವಾಗ ಹಾರಿಸಿದರು? ತ್ರಿವರ್ಣ ಧ್ವಜವನ್ನು ಹಾರಿಸಿದವರು ನಾವು ನೀವಲ್ಲ.

**(ಗೊಂದಲ)**

**ಶ್ರೀ ವಿ.ಸುನೀಲಕುಮಾರ್(ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು)**:- ಮಾನ್ಯ ಸಭಾಪತಿಗಳೆ, ಕಾಶ್ಮೀರ ಬಿಡಿ, ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ ನಮ್ಮ ರಾಷ್ಟ್ರಧ್ವಜವನ್ನು ಹಾರಿಸಲು ಬಿಡಲಿಲ್ಲ ಇವರು.

**(ಗೊಂದಲ)**

**ಡಾ: ವೈ.ಎ.ನಾರಾಯಣಸ್ವಾಮಿ:-** ಕಾಶ್ಮೀರದಲ್ಲಿ ಧ್ವಜ ಹಾರಿಸಿರುವುದು ಇಡೀ ದೇಶಕ್ಕೆ ಗೊತ್ತಿದೆ. ಇವರಿಗೆ ಗೊತ್ತಿಲ್ಲವೆ?

(ಮುಂದು)

(48)16-02-2022(12-00)bsd-md

**ಶ್ರೀ ಸಿ.ಎಂ. ಇಬ್ರಾಹಿಂ:-** ಹುಬ್ಬಳ್ಳಿಯಲ್ಲಿ ಅಂಜುಮಾನ್ Chairman ರವರು 26ನೇ ಜನವರಿ ತಾರೀಖಿನಂದು ಹಿಂದು-ಮುಸಲ್ಮಾನರು ಒಂದಾಗಿ ಭಾರತ್ ಮಾತಾ ಕೀ ಜೈ ಎಂದು ಧ್ವಜ ಹಾರಿಸಿದರು. ಸಾಕ್ಷಿಯಾಗಿ ನಾನೇ ಎದುರಿನಲ್ಲಿದ್ದೇನೆ.

**(ಗೊಂದಲ)**

**ಸಭಾಪತಿಯವರು:-** ಸದನ ನಡೆಸಬೇಕೋ ಅಥವಾ ಬೇಡವೋ? ನಿಮ್ಮ ಪಕ್ಷದವರು ಯಾವಾಗ ಬೇಕಾದರೂ ಎದ್ದು ಮಾತನಾಡುತ್ತಾರೆ. ಸ್ವಲ್ಪ ಏನಾದರೂ ಬೇಕಲ್ಲವೇ? ಸಭಾಪತಿಯವರಿಗೆ, ಪೀಠಕ್ಕೆ ಕಿಮ್ಮತ್ತು ಇಲ್ಲವೇ? ಯಾವಾಗ ಬೇಕಾದರೂ ಎದ್ದು ಮಾತನಾಡುತ್ತೀರಿ. ಇದನ್ನು ಮುನಿಸಿಪಾಲಟಿ ಮಾಡಿಕೊಂಡಿದ್ದೀರಾ? ನಿಮಗೆ ಅನಿಸಿದ್ದನ್ನು ಬರೆದಿಟ್ಟುಕೊಂಡು ನಿಮ್ಮನ್ನು allow ಮಾಡಿದಾಗ ಮಾತನಾಡಿ. ಯಾರನ್ನೂ ಉದ್ವೇಗಗೊಳಸಬೇಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಾಯಿ ಹಾಲು ಎಷ್ಟು ಪವಿತ್ರ ಎಂದು ನಮಗೆಲ್ಲರಿಗೂ ಗೊತ್ತಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, 52 ವರ್ಷಗಳ ಕಾಲ **XXX** ದಲ್ಲಿ ತ್ರಿವರ್ಣ ಧ್ವಜ ಹಾಕಿರಲಿಲ್ಲವಲ್ಲ! ಅವರೇನು ತಾಯಿ ಹಾಲು ಕುಡಿದಿರಲಿಲ್ಲವೇ? **(ಗೊಂದಲ)** ರಾಷ್ಟ್ರಧ್ವಜವನ್ನು 52 ವರ್ಷ **XXX** ಕಛೇರಿ ಮೇಲೆ ಹಾರಿಸಲಿಲ್ಲ, ತಾಯಿ ಹಾಲು ಕುಡಿದಿರಲಿಲ್ಲವೇ?

**(ಗೊಂದಲ)**

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಕಾಶ್ಮೀರದಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿದ್ದು ನಮ್ಮದೇ ಪಕ್ಷ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಇಟಲಿಯ ಮುಸಲೋನಿಯ ಹತ್ತಿರ ಹೋಗಿದ್ದರಲ್ಲ!

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ವಿರೋಧ ಪಕ್ಷದ ನಾಯಕರು ಸಭೆಯಲ್ಲಿ ಚೆನ್ನಾಗಿ ಮಾತನಾಡಬೇಕು, ಆದರೆ ವ್ಯಂಗ ಮಾಡುವುದಕ್ಕೆ...... ವಿಷಯದ ಗಾಂಭೀರ್ಯತೆ ಅರಿಯಬೇಕು. ಈ ರೀತಿ **XXX** ಎಂದು ಹೇಳುತ್ತಿದ್ದರೆ ಹೇಗೆ? ಅವರು ನಾಗಪುರವನ್ನು **XXX** ಎಂದು ವ್ಯಂಗ ಮಾಡಿ, ಅದೇ ಪದಬಳಕೆ ಮಾಡಿದರೆ ಹೇಗೆ?

**(ಗೊಂದಲ)**

**ಶ್ರೀ ಎಸ್.ರವಿ:-** ಮಾನ್ಯ ಸಭಾನಾಯಕರು ದಯಮಾಡಿ ಕುಳಿತುಕೊಳ್ಳಬೇಕು,

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಈ ರೀತಿ ಮಾತನಾಡಿದರೆ ನ್ಯಾಯವೇ?

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ನಾನು ಕನ್ನಡಾಭಿಮಾನಿ, ನಾನು ನಾಗಪುರವನ್ನು **XXX** ಎಂದೇ ಕರೆಯುವುದು.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ತಡೆಯಿರಿ, ನಿಮ್ಮನ್ನು ಕೇಳಿದಾಗ ಉತ್ತರ ಕೊಡಿ.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, Preliminary briefing ನಲ್ಲಿ ಅವರು ವಿಷಯ ಪ್ರಸ್ತಾಪ ಮಾಡಲು ಅರ್ಹವಿದೆಯೇ ಎಂದು ತಮಗೆ ವಿಷಯದ ಬಗ್ಗೆ convince ಮಾಡಲಿ. ಆದರೆ ಅವರು ಹೋಗುತ್ತಿರುವ line ನಲ್ಲಿಯೇ ಅವರಿಗೆ material ಇಲ್ಲ. ಅವರು ಕೊಟ್ಟಿರುವ notice ಗೆ ಪೂರಕವಾಗಿ ತಮ್ಮ ಮನವೊಲಿಸುವ ಕೆಲಸ ಮಾಡುತ್ತಿಲ್ಲ. ಈ Adjournment Motion ಅನ್ನು ರಾಜಕೀಯ ಭಾಷೆಗೆ, ರಾಜಕೀಯ ಪದ ಮತ್ತು ರಾಜಕೀಯ ಪ್ರಯೋಜನಕ್ಕೆ ಬಳಸಿಕೊಳ್ಳಬೇಕು ಎಂದಾದೇನಾದರೂ ಸದಸ್ಯರು ಮಾಡಿದರೆ ಇಡೀ ವಿಧಾನ ಪರಿಷತ್ತಿನ ಗೌರವಕ್ಕೆ ಚ್ಯುತಿ ಬರುವ ಸ್ಥಿತಿ ಬರುತ್ತದೆ, ಆದ್ದರಿಂದ ತಾವು reject ಮಾಡಬೇಕು. Otherwise, ಅವರನ್ನು confine ಮಾಡಬೇಕು, ಅವರೇನು notice ಕೊಟ್ಟಿದ್ದಾರೆ, ಅಷ್ಟಕ್ಕೆ ಸೀಮಿತವಾಗಿ ಮಾತನಾಡಬೇಕು, confine him, otherwise we will object this.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಬಾರದೆಂದು ತಿಳಿಸಲು ಅವರಿಗೆ ಅಧಿಕಾರ ಇದೆಯೇ? ತಾವು ಅವಕಾಶ ಕೊಟ್ಟಿದ್ದೀರಿ. ಈ ರೀತಿ ಹೇಳಲು ಅಧಿಕಾರ ಇದೆಯೇ? ಅವರಿಗೆ ಮಾತನಾಡುವುದಕ್ಕೆ ಬರುವುದಿಲ್ಲ, material ಇಲ್ಲ ಎಂದು ಹೇಳಲು ಮಂತ್ರಿಗೆ ಅಧಿಕಾರ ಇದೆಯೇ? ಇದನ್ನು ಮಾತನಾಡಬಹುದೇ?

**(ಗೊಂದಲ)**

**Sri J.C.MADHUSWAMY:-** Parliamentary Affairs Minister ಗೆ notice serve ಆಗಿದೆ. I have been served with a notice. ನನಗೆ notice ಕೊಡಬೇಕು, ಇದು ನನ್ನ ಶಾಸನಬದ್ಧ ಹಕ್ಕು. This is my constitutional right. ಅದನ್ನು ಕೇಳಲು ಅವರ್ಯಾರು? You are no more concerned. ಇದು ನನ್ನ ಸಂವಿಧಾನ ಹಕ್ಕು. As Parliamentary Affairs Minister, I have every right to talk.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಅವರಿಗೆ ಅವಕಾಶ ಕೊಡಬಾರದಂತೆ, material ಇಲ್ಲವಂತೆ, ಏನೂ ಇಲ್ಲವಂತೆ, ಈ ಕಾನೂನು ಸಚಿವರು.......

**(ಗೊಂದಲ)**

**ಶ್ರೀ ಜೆ.ಸಿ. ಮಾಧುಸ್ವಾಮಿ:-** ನಾನು ಸರ್ಕಾರ ಆಗಿ........

**(ಗೊಂದಲ)**

**ಸಭಾಪತಿಯವರು:-** ಯಾವುದೂ ಕಡತಕ್ಕೆ ಹೋಗಬಾರದು. ಮಾನ್ಯ ಮರಿತಿಬ್ಬೇಗೌಡರು ಮಾತನಾಡುವುದು ಕಡತಕ್ಕೆ ಹೋಗಬಾರದು. **(ಗೊಂದಲ)** ತಾವು ಕುಳಿತುಕೊಳ್ಳಿ, ನಿಮಗೆ ಏನಿದೆ? ಸುಮ್ಮನೆ ಏಕೆ ಮಾತನಾಡುತ್ತೀರಿ?

**(ಗೊಂದಲ)**

**ಶ್ರೀ ಅರುಣ ಶಹಾಪೂರ:-** ಅವರು ಏಕ ವಚನದಲ್ಲಿ ಮಾತನಾಡಿದ್ದನ್ನು ಕಡತದಿಂದ ತೆಗೆಸಬೇಕು.

**(ಗೊಂದಲ)**

**ಸಭಾಪತಿಯವರು:-** ಇಲ್ಲ, ಕಡತಕ್ಕೆ ಹೋಗಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಮಂತ್ರಿಗಳು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. I agree that you are a successful Parliamentary Affairs Minister. ನಾನು ಕೊಟ್ಟಿರುವ ನಿಲುವಳಿ ಬಗ್ಗೆ..... ನಾನು ಉತ್ತರ ಕೊಟ್ಟುಬಿಡುತ್ತೇನೆ.

**ಶ್ರೀ ಅರುಣ ಶಹಾಪೂರ:–** ಮಾನ್ಯ ಸಭಾಪತಿಯವರೇ, Point of order. ಮಾನ್ಯ ಸದಸ್ಯರು ಮಾತಿನ ಚಕಮಕಿಯಲ್ಲಿ ಮಾನ್ಯ ಮಂತ್ರಿಗಳ ಮೇಲೆ ಏಕವಚನವನ್ನು ಪ್ರಯೋಗ ಮಾಡಿದ್ದಾರೆ. ದಯವಿಟ್ಟು ಮಾನ್ಯ ಸದಸ್ಯರು ಕ್ಷಮೆ ಕೋರಬೇಕೆಂದು ಪೀಠದ ಮೂಲಕ ತಿಳಿಸಬೇಕು.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಕಾನೂನು ಸಚಿವರು ಆಡುವ ಮಾತಿನಿಂದ......

**ಶ್ರೀ ಎಸ್. ರವಿ:–** ಚಕಮಕಿಯಲ್ಲಿ ಮಾನ್ಯ ಮಂತ್ರಿಗಳು ಏಕವಚನ ಪ್ರಯೋಗ ಮಾಡಿದ್ದಾರೆ.

**ಸಭಾಪತಿಯವರು:–** ನಾನು ಕಡತದಿಂದ ತೆಗೆದು ಹಾಕಿದ್ದೇನಲ್ಲ.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಏಕವಚನ ಪ್ರಯೋಗ ಎರಡೂ ಕಡೆಗಳಿಂದ ಆಗಿದೆ. ದಯಮಾಡಿ ಅದನ್ನು...... ನಾನು ಗಮನಿಸಿದ್ದೇನೆ. ಮಾನ್ಯ ಸಚಿವರು ಬಾಯಿ ತಪ್ಪಿ ಏಕವಚನ ಬಳಸಿದರು, ಮಾನ್ಯ ಸದಸ್ಯರು ಬಳಸಿದರು, ಎರಡನ್ನೂ ಕೈಬಿಡೋಣ.

**ಸಭಾಪತಿಯವರು:–** ಮಾತನಾಡುವುದಕ್ಕೆ ನಾನು ಅನುಮತಿ ಕೊಟ್ಟಿದ್ದು, ಅದನ್ನು ನಾನು ನೋಡುತ್ತೇನೆ. Situation ಮೇಲೆ ಯಾರ್ಯಾರಿಗೋ ಕೊಡಬೇಕೋ ಕೊಡುತ್ತೇನೆ. ನಾನು ಮಾಡುವ ಕೆಲಸವನ್ನು ನೀವುಗಳು ಏಕೆ ಮಾಡುತ್ತೀರಿ?

**ಶ್ರೀ ಎಸ್.ಎಲ್. ಭೋಜೇಗೌಡ:–** ಅವರು provoke ಮಾಡಿದರೆ ಇವರು provoke ಏಕೆ ಆಗುತ್ತಾರೆ? ಆಮೇಲೆ ಏನು ಬೇಕಾದರೂ ಹೇಳಲಿ.

**(ಗೊಂದಲ)**

**ಸಭಾಪತಿಯವರು:–** ಇಲ್ಲಿ ಮಾತನಾಡುವಾಗ ಆಕಸ್ಮಾತ್ unparliamentary ಪದವನ್ನು ಬಳಸಿದ್ದರೆ ಕಡತದಿಂದ ತೆಗೆದುಹಾಕಬೇಕೆಂಬ ನಿಯಮ ಇದೆ. ಯಾವುದೇ unparliamentary ಮಾತನಾಡಿದರೆ ಹೇಳಿ, ಅದನ್ನು consider ಮಾಡೋಣ. Unparliamentary ಅನ್ನು

ಮಾತನಾಡಬಾರದು. ಉಳಿದವರು ಮಾತನಾಡುವುದನ್ನು ಕೇಳಿ ನಂತರ ಉತ್ತರ ಹೇಳಿ, ಆಗ ಪೂರ್ಣವಾಗಿ ಮಾತನಾಡಲು ಅನುಮತಿ ಕೊಡುವುದಿಲ್ಲವೇ?

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾಗಪುರ, RSS ನವರು ಧ್ವಜ ಹಾರಿಸಿರುವ ಬಗ್ಗೆ ಹೇಳಲಿ, ನಾವು ಅದಕ್ಕೆ ಉತ್ತರ ಕೊಡುತ್ತೇವೆ. ಉತ್ತರ ಕೊಡುವಷ್ಟು ಸಾಮರ್ಥ್ಯ ನಮಗಿದೆ, ಇಡೀ ದೇಶದಲ್ಲಿ ಧ್ವಜ ಹಾರಿಸಿದ್ದೇವೆ. ನಾಗಪುರದ ಬದಲು **XXX** ಎಂದು ಅವರು ಹೆಸರು ಇಡುತ್ತಿದ್ದಾರೆಯೇ? ಇದು ನಾಗಪುರಕ್ಕೆ ಮಾಡುವ ಅಪಮಾನ. ನಾಗಪುರಕ್ಕೆ **XXX** ಎಂದು ಏಕೆ ಹೆಸರಿಡಬೇಕು?

**ಸಭಾಪತಿಯವರು:-** ಅವರು ಹೇಳಲಿ ಬಿಡಿ. ಆಯಿತು.

**ಶ್ರೀ ಎನ್. ರವಿಕುಮಾರ್:-** ಈ ರೀತಿ ಅವರು ಮಾತನಾಡುವುದರಿಂದ ಈ ಕಡೆ ಕುಳಿತಿರುವವರಿಗೆ ಕೆರಳುತ್ತದೆ. ಅವರಿಗೆ ಕೆರಳಿಸುವುದು ಬೇಕಾಗಿದೆಯೋ ಅಥವಾ ಉತ್ತರ ಪಡೆಯುವುದು ಬೇಕಾಗಿದೆಯೋ?

**(ಗೊಂದಲ)**

**(ಮುಂದು)**

**(049)/16.02.2022/12.10/ಹೆಚ್‌ವಿ:ಎಕೆ** **(ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಡಾ|| ಬಿ.ಆರ್.ಅಂಬೇಡ್ಕರ್‌ರವರು ಜನಿಸಿದ ಊರಿಗೆ ಅವಮಾನ ಮಾಡುತ್ತಿದ್ದಾರೆ.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಡಾ|| ಬಿ.ಆರ್.ಅಂಬೇಡ್ಕರ್‌ರವರು ಈಗಿನ ಇಂದೂರ್‌ನಲ್ಲಿರುವ "ಮಾಹೋ" ಎನ್ನುವ ಊರಿನಲ್ಲಿ ಜನಿಸಿದ್ದಾರೆಯೇ ಹೊರತು ನಾಗಪುರದಲ್ಲಿ ಅಲ್ಲ. ಅದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲ. ದಯವಿಟ್ಟು ಅವರು ಸುಮ್ಮನೆ ಕುಳಿತುಕೊಳ್ಳಬೇಕು.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ್ದಾರೆ. ಅವರು "ನಾಗಪುರ್" ಅನ್ನು **XXX** ಎಂದು ಹೇಳಿರುವುದರ ಬಗ್ಗೆ ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು ಆಕ್ಷೇಪಣೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು, "ನಾನು ಕನ್ನಡ ಅಭಿಮಾನಿ ಆದ್ದರಿಂದ ನಾನು ನಾಗಪುರ ಎನ್ನುವುದನ್ನು ಕನ್ನಡದಲ್ಲಿ **XXX** ಎಂದು ಹೇಳುತ್ತಿದ್ದೇನೆ" ಎನ್ನುವ ಮಾತನ್ನು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಆಮೇಲೆ ಮಾತನಾಡಲಿ, ಅವರದೇ ಸರ್ಕಾರ ಅಧಿಕಾರದಲ್ಲಿದೆ. ಅವರು ಏನುಬೇಕಾದರೂ ಹೇಳಬಹುದು. ಆ ಪದ ಬಳಕೆಯ ಬಗ್ಗೆ ಯಾವ ಸದಸ್ಯರಿಗೆ ಆಕ್ಷೇಪಣೆ ಇದೆ, ಅವರಿಗೆ ಮಾತನಾಡುವುದಕ್ಕೆ ತಾವು ಅವಕಾಶವನ್ನು ನೀಡಿ. ಇದು ಮೇಲ್ಮನೆ ಇಲ್ಲಿ ನಾವು ಗೌರವದಿಂದ ನಡೆದುಕೊಳ್ಳಬೇಕಾಗಿದೆ. ಅವರು ಏನು ಬೇಕಾದರು ಹೇಳಬಹುದು ಅವರದೇ ಸರ್ಕಾರ ಅಧಿಕಾರದಲ್ಲಿದೆ. ನಾವು ಹೇಳುವುದನ್ನು ಹೇಳುತ್ತೇವೆ. ಅದನ್ನು ಕೇಳಿಸಿಕೊಳ್ಳುವಂತಹ ಸಹನೆ ಅವರಿಗೆ ಇರಬೇಕಾಗುತ್ತದೆ.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಅವರು ಏನು ಬೇಕಾದರು ಹೇಳಬಹುದು ಎನ್ನುವುದು ಸರಿಯಲ್ಲ. ನಾಗಪುರಕ್ಕೆ ಬದಲಾಗಿ ಅವರು ಬಳಸಿರುವ ಶಬ್ದ ಬಳಕೆ ಸರಿಯಾದುದ್ದಲ್ಲ. ನಾಗಪುರದ ರಾಷ್ಟ್ರೀಯ ಸ್ವಯಂಸೇವಾ ಸಂಘದಿಂದ ಶಿಕ್ಷಣ ಪಡೆದವರು ರಾಷ್ಟ್ರಪತಿ, ಉಪ ರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿಗಳಾಗಿದ್ದಾರೆ. ಪ್ರಜಾತಂತ್ರ ವ್ಯವಸ್ಥೆಯನ್ನು ಅವರು ಅಗೌರವಿಸುತ್ತಿದ್ದಾರೆ. ಮೊದಲು ಅದನ್ನು ತಿದ್ದಿಕೊಳ್ಳಬೇಕಾಗಿದೆ. ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ನಾಗಪುರದ ಹೆಸರನ್ನು ಅವಹೇಳನ ಮಾಡಿರುವುದನ್ನು ಸರಿಪಡಿಸಿಕೊಳ್ಳಬೇಕೆಂದು ತಾವು ನಿರ್ದೇಶನ ನೀಡಬೇಕಾಗಿದೆ. ಅವರು ಮಾತನಾಡುವುದನ್ನೆಲ್ಲ ನಾವು ಕೇಳಬೇಕೆಂದಿಲ್ಲ. ನಮ್ಮ ಅಭಿಪ್ರಾಯವನ್ನು ನಾವು ಹೇಳಿದ್ದೇವೆ. ಅವರ ಅಭಿಪ್ರಾಯವನ್ನು ಅವರು ಹೇಳಲಿ. ಆದರೆ, ನಾಗಪುರದ ಬಗ್ಗೆ ವ್ಯಂಗ್ಯ ಮಾಡುವುದು, ನಾಗಪುರದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುವುದು ಮತ್ತು ಟೀಕೆ ಮಾಡುವುದನ್ನು ನಾವು ಸಹಿಸುವುದಿಲ್ಲ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಹೇಳಿದ ಮಾತುಗಳ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಗಮನಿಸುತ್ತಾರೆ. ಆ ಪದ ಬಳಕೆಯಿಂದ ಅವರುಗಳಿಗೆ ಅಷ್ಟೊಂದು ಮುಜುಗರವಾಗುತ್ತಿದೆ ಎಂದರೆ ಅದನ್ನು ಬದಲಾವಣೆ ಮಾಡುತ್ತಾರೆ. ಆದರೆ, ಆಡಳಿತ ಪಕ್ಷದ ಸದಸ್ಯರುಗಳು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಪ್ರತಿಯೊಂದು ಶಬ್ದಕ್ಕೂ ಮಧ್ಯೆ ಎದ್ದು ನಿಂತು ತಮ್ಮ ಆಕ್ಷೇಪಣೆಗಳನ್ನು ವ್ಯಕ್ತಪಡಿಸುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದರ ಬಗ್ಗೆ ನಮ್ಮ ಆಕ್ಷೇಪಣೆ ಇಲ್ಲ. ಆದರೆ, ಅವರು ಬಳಕೆ ಮಾಡಿರುವ ಪದದ ಬಗ್ಗೆ ಮಾತ್ರ ನಾವು ಆಕ್ಷೇಪಣೆ ವ್ಯಕ್ತಪಡಿಸುತ್ತಿದ್ದೇವೆ. ಆ ಶಬ್ದವನ್ನು ಸರಿಪಡಿಸಿಕೊಳ್ಳಬೇಕೆಂದು ಹೇಳುತ್ತಿದ್ದೇವೆ. ಈ ಬಗ್ಗೆ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ ತಾವು ಹೇಳಬೇಕಾಗಿದೆ.

**ಸಭಾಪತಿಯವರು:-** ನಾನು ಹೇಳುತ್ತಿದ್ದೇನೆ. ಅವರು ಕೇಳುವುದಕ್ಕೆ ತಯಾರಿಲ್ಲ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಸನ್ಮಾನ್ಯ ಸಭಾಪತಿಯವರೇ, ಅವರು ಈ ಸದನದ ಸಭಾ ನಾಯಕರಾಗಿದ್ದಾರೆ...........

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ನನಗೆ ಅವರು ಹೇಳಿಕೊಡುವುದು ಬೇಡ, ವಿರೋಧ ಪಕ್ಷದ ಮುಖ್ಯ ಸಚೇತಕರಾಗಿ ಅವರ ಕೆಲಸವನ್ನು ಅವರು ಮಾಡಲಿ. ಸಭಾನಾಯಕನಾಗಿ ನನ್ನ ಜವಾಬ್ದಾರಿಗಳೇನು ಎನ್ನುವುದು ನನಗೆ ಗೊತ್ತಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಸನ್ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡಲು ಅವಕಾಶವನ್ನು ನೀಡಿದ್ದೀರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರ ಬಗ್ಗೆ, ಅವರ ಸ್ಥಾನದ ಬಗ್ಗೆ ಮತ್ತು ಅವರ ಮಾತಿನ ಬಗ್ಗೆ ನಮಗೆ ಗೌರವವಿದೆ. ಆದರೆ, ಅವರು ಬಳಕೆ ಮಾಡಿರುವ ಶಬ್ದದ ಬಗ್ಗೆ ಮಾತ್ರ ನಮಗೆ ಆಕ್ಷೇಪವಿದೆ. ಅದನ್ನು ಅವರು ಸರಿಪಡಿಸಿಕೊಳ್ಳಬೇಕಾಗಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಸನ್ಮಾನ್ಯ ಸಭಾಪತಿಯವರೆ, ಎಲ್ಲ ಸದಸ್ಯರುಗಳು ಸುಮ್ಮನೆ ಕುಳಿತುಕೊಂಡು ವಿರೋಧ ಪಕ್ಷದ ನಾಯಕರು ಸರ್ಕಾರಕ್ಕೆ ಹೇಳುತ್ತಿರುವ ಮಾತುಗಳನ್ನು ಕೇಳಿಸಿಕೊಂಡು ಈ ಚರ್ಚೆಯನ್ನು ಬೇಗನೇ ಮುಗಿಸಬೇಕೆನ್ನುವುದು ನನ್ನ ಅಭಿಪ್ರಾಯವಾಗಿದೆ.

**ಸಭಾಪತಿಯವರು:- ಬೇರೆ ರಾಜ್ಯಗಳಲ್ಲಿರುವ ಊರಿನ ಹೆಸರುಗಳು ನಮಗೆ ಗೊತ್ತಿಲ್ಲ, ಮಾನ್ಯ ವಿರೋಧ ಪಕ್ಷದ ನಾಯಕರು "ನಾಗಪುರ" ವನ್ನು XXX ಎಂದು ಹೇಳಿರುವುದನ್ನು ಕಡತದಿಂದ ತೆಗೆದು ಹಾಕಿದ್ದೇನೆ.**

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಸನ್ಮಾನ್ಯ ಸಭಾಪತಿಯವರೇ, ಅದು ಅಸಂಸದೀಯ ಪದವಲ್ಲ, ಅದನ್ನು ಏತಕ್ಕೋಸ್ಕರ ಕಡತದಿಂದ ತೆಗೆದು ಹಾಕಬೇಕು?

**ಸಭಾಪತಿಯವರು:-** ಮಾನ್ಯ ಪ್ರಕಾಶ್ ರಾಥೋಡ್‌ರವರೇ, ನನ್ನ ಕೆಲಸವನ್ನು ತಾವು ಮಾಡುವುದು ಬೇಡ. ನಾನು ಹೇಳಿ ಆಗಿದೆ. ಅದರ ಬಗ್ಗೆ ತಾವು ಪ್ರಶ್ನೆ ಮಾಡುವುದು ಬೇಡ. ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, Parliamentary Procedure ನಲ್ಲಿ 'Parliamentary Expressions' ಎಂದು ಒಂದು ಪುಸ್ತಕವಿದೆ. ಅದನ್ನು ತಾವು ದಯವಿಟ್ಟು ತರಿಸಿ ನೋಡಿ. ಅದರಲ್ಲಿ **XXX** ಎನ್ನುವುದು ಅಸಂಸದೀಯ ಪದವಾಗಿದ್ದರೆ ಅದನ್ನು ತೆಗೆದು ಹಾಕಿ. ಹಿಂದಿಯಲ್ಲಿ "ನಾಗ್" ಎಂದರೆ ಹಾವು, ಸಂಸ್ಕೃತದಲ್ಲಿ "ನಾಗ್" ಎಂದರೆ, ಹಾವು ಇಂಗ್ಲೀಷ್‌ನಲ್ಲಿ ಮಾತ್ರ ಅದು ನಾಗ್‌ಪುರ ಅಲ್ಲ **XXX** ಆಗುತ್ತದೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾತನಾಡುತ್ತಾ, "ನಾನು ನೋಟೀಸ್‌ನಲ್ಲಿ ನೀಡಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಬೇಕು" ಎಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಅವರು "ತಾಯಿ ಹಾಲು ಕುಡಿದವರು......" ಎಂದು ಏನೇನೋ ಮಾತನಾಡಿದ ಹಿನ್ನೆಲೆಯಲ್ಲಿ ನಾನು ಈ ಪದ ಬಳಕೆ ಮಾಡಬೇಕಾಗಿ ಬಂತು. ಈ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿರುವ ಮಾನ್ಯ ಕೆ.ಎಸ್.ಈಶ್ವರಪ್ಪನವರು ದಿನಾಂಕ:09.02.2022ರಂದು "ಕೆಂಪು ಕೋಟೆಯಲ್ಲೂ ಕೇಸರಿ ಧ್ವಜವನ್ನು ಹಾರಿಸುತ್ತೇವೆ" ಎನ್ನುವ ಹೇಳಿಕೆಯನ್ನು ನೀಡಿದ್ದಾರೆ. ಇದರ ಬಗ್ಗೆ ನಾನು ಈಗಾಗಲೇ ಸಂವಿಧಾನದಲ್ಲಿ ಉಲ್ಲೇಖ ಮಾಡಿರುವ ಅಂಶಗಳನ್ನು ಓದಿ ಹೇಳಿದ್ದೇನೆ. ಇಲ್ಲಿ ನನ್ನ ಬಳಿ Flag Code of India ಇದೆ. Section 2 of

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"The Prevention of Insults to National Honour Act, 1971 reads as under:-

> "Whoever in any public place or in any other place within public view burns, mutilates, defaces, defiles, disfigures, destroys, tramples upon or otherwise brings into contempt (whether by words, either spoken or written, or by acts) the Indian National Flag or any part thereof, shall be punished with imprisonment for a term which may extend to three years, or with fine, or with both"

ಎಂದು ನಮ್ಮ ಸಂವಿಧಾನದಲ್ಲಿ ಬಹಳ ಸ್ಪಷ್ಟವಾಗಿ ಹೇಳಲಾಗಿದೆ. ಮಾನ್ಯ ಮಂತ್ರಿಗಳು ಭಾರತದ ತ್ರಿವರ್ಣ ಧ್ವಜದ ಬಗ್ಗೆ ಮಾತನಾಡುತ್ತಿದ್ದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮೂಕ ಪ್ರೇಕ್ಷಕರಾಗಿದ್ದರು. ಘನತೆವೆತ್ತ ರಾಜ್ಯಪಾಲರು ಅವರನ್ನು suo-moto ಮಂತ್ರಿ ಮಂಡಲದಿಂದ suspend/dismiss ಮಾಡಬೇಕಾಗಿತ್ತು. ಅದರ ಜೊತೆಗೆ,

> "Explanation 1. – Comments expressing disapprobation or criticism of the Indian National Flag or any measures of the Government…"

ಏಕೆಂದರೆ, ಮಂತ್ರಿಗಳೆಂದರೆ ಸರ್ಕಾರ. ಮುಂದುವರೆದು,

> "…with a view to obtain or an alteration of the Indian National Flag by lawful means do not constitute an offence under this section"

ಎಂದು ಹೇಳಲಾಗಿದೆ. ಮುಂದುವರೆದು, Further, Section 2.3 of Section II of The Prevention of Insults to National Honour Act, 1971 reads as under:-

> "The National Flag may be hoisted in educational institutions (schools, colleges, sports camps, scout camps, etc.) to inspire

respect for the Flag. A model set of instructions for guidance is given below...”

ಎಂದು ಹೇಳಲಾಗಿದೆ. ಅದನ್ನು ನಾನು ಪೂರ್ತಿ ಓದುವುದಕ್ಕೆ ಹೋಗುವುದಿಲ್ಲ. ಹಾಗಾಗಿ, ಕಾಯ್ದೆ ಸ್ಪಷ್ಟವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಆಂಧ್ರಪ್ರದೇಶದ ಮಚಲಿಪಟ್ಟಣಂನ ಪಿಂಗಲಿ ವೆಂಕಯ್ಯ ಎನ್ನುವವರು ಭಾರತದ ತ್ರಿವರ್ಣ ಧ್ವಜವನ್ನು ವಿನ್ಯಾಸಗೊಳಿಸಿದ್ದರು. 22ನೇ ಜುಲೈ 1947ರಲ್ಲಿ Constituent Assembly ನಲ್ಲಿ ಇದನ್ನು ನಮ್ಮ Indian National Flag ಎಂದು ಹೇಳಿ ಒಂದು ರೀತಿ symbolic representation of a nation ಎಂದು, ಒಂದು principle ಆಗಿ ರಾಷ್ಟ್ರ ಧ್ವಜವನ್ನು full Constituent Assembly ಅಂಗೀಕರಿಸಲಾಯಿತು. ಇದು ಕಾಲಕಾಲಕ್ಕೆ ಅನೇಕ ಬಾರಿ ಬದಲಾವಣೆಗಳನ್ನು ಕಂಡಿದೆ. ಬ್ರಿಟಿಷ್‌ನವರು ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ನೀಡಿದಂತಹ ಸಂದರ್ಭದಲ್ಲಿ ಇದನ್ನು ನಮ್ಮ ರಾಷ್ಟ್ರಧ್ವಜವೆಂದು ಒಪ್ಪಿಕೊಂಡಿದ್ದಾರೆ. ಅದೇ ನಮ್ಮ ಧರ್ಮ. ಆಗ ಬೇರೆ ಧ್ವಜ ಇರಲಿಲ್ಲವೇ ಎಂದು ಕೆಲವರಿಗೆ ಅನುಮಾನ ಬರಬಹುದು. ಆಸಾರಾಮ್ ಬಾಪು, ರಾಮ್‌ದೇವ್, ರಾಮ್ ರಹೀಂ ಶಿಷ್ಯರು ಸ್ವಾಮಿ ವಿವೇಕಾನಂದರ ಹೆಸರನ್ನು ಹೇಳುತ್ತಿರುತ್ತಾರೆ.

**(ಮುಂದು)**

**(50) 16.2.2022 12.20 ಪಿಕೆ:ಎಕೆ**

**ಶ್ರೀ ಬಿ.ಕೆ.ಹರಿಪ್ರಸಾದ್(ಮುಂದು):-**

ಶ್ರೀ ವಿವೇಕಾನಂದರ ಶಿಷ್ಯೆ ಸಿಸ್ಟರ್ ನಿವೇದಿತಾ, she was popularly known as ‘ಭಗಿನಿ ನಿವೇದಿತಾ’. ಅಂದರೆ . . .

**ಸಭಾಪತಿಯವರು:-** ದಯವಿಟ್ಟು ವಿಷಯಕ್ಕೆ ಬನ್ನಿ. ಮಂತ್ರಿಗಳು ಕೊಟ್ಟಿರುವ ಹೇಳಿಕೆಗೆ ಸೀಮಿತವಾಗಿ ಮಾತನಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ನಾನು ರಾಷ್ಟ್ರ ಧ್ವಜದ ಪಾವಿತ್ರ್ಯತೆ ಬಗ್ಗೆ ಹೇಳುತ್ತಿದ್ದೇನೆ.

**ಸಭಾಪತಿಯವರು:–** ದಯವಿಟ್ಟು ಕೇಳಿ. "ನಮ್ಮ ರಾಜ್ಯದ ಸಾಂವಿಧಾನಿಕ ಹುದ್ದೆಯನ್ನು ಹೊಂದಿರುವ ಮಂತ್ರಿಗಳ ಹೇಳಿಕೆ ದೇಶಕ್ಕೆ ಅಪಚಾರವೆಸಗಿದಂತಾಗಿದ್ದು, ಸಂವಿಧಾನದ ಈ ವಿಷಯವು ಸಾರ್ವಜನಿಕ ಮಹತ್ವದ್ದಾಗಿರುತ್ತದೆ" ಎನ್ನುವಂತಹ ವಿಷಯಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:–**ಮಾನ್ಯ ಸಭಾಪತಿಗಳೆ, ರಾಷ್ಟ್ರ ಧ್ವಜವನ್ನು ಪ್ರಶ್ನೆ ಮಾಡಿದಾಗ ರಾಷ್ಟ್ರ ಧ್ವಜದ ಮಹತ್ವದ ಬಗ್ಗೆ ಹೇಳಬೇಕಾಗುತ್ತದೆ.

**ಸಭಾಪತಿಯವರು:–** ಅದು ಬಹಳ ಮಂದಿಗೆ ಗೊತ್ತಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ದಯವಿಟ್ಟು ಈ ಕುರಿತು ನಮಗೆ ಮಾತನಾಡಲು ಅವಕಾಶ ಕೊಡಿ. ನಾನು ಬೇರೆ ಯಾವುದೋ ವಿಚಾರದ ಬಗ್ಗೆ ಮಾತನಾಡುತ್ತಿಲ್ಲ. ಮಾನ್ಯ ಸಚಿವರು ಹೇಳಿದ ಹಾಗೆ I am confining to the Adjournment Motion. ಮಾನ್ಯ ನಿವೇದಿತಾ ಅವರ ಜೊತೆ ಮಾನ್ಯ ಅನಿಬೆಸೆಂಟ್‌ರವರು ಕೂಡ ರಾಷ್ಟ್ರ ಧ್ವಜಕ್ಕೆ ಸಂಬಂಧಪಟ್ಟಂತೆ ತಮ್ಮದೇ ಆದ ಕೊಡುಗೆ ಕೊಟ್ಟಿದ್ದಾರೆ. 1921ನೇ ಇಸವಿಯಲ್ಲಿ ಏನು ರಾಷ್ಟ್ರ ದ್ರೋಹಿಗಳಿಂದ, ದೇಶದ ಮೊಟ್ಟ ಮೊದಲು ಉಗ್ರವಾದಿಯಿಂದ ಕೊಲೆಗೀಡಾದ ಮಹಾತ್ಮ ಗಾಂಧಿಯವರು ವಿಜಯವಾಡಗೆ ಭೇಟಿ ನೀಡಿದಾಗ ಈ ಒಂದು ರಾಷ್ಟ್ರ ಧ್ವಜವನ್ನು ಒಪ್ಪುತ್ತಾರೆ. ಆಗ ರಾಷ್ಟ್ರ ಧ್ವಜದ ಮಧ್ಯೆ ಖಾದಿ ಚಕ್ರವನ್ನು ಹಾಕುತ್ತಾರೆ. ಆನಂತರ ಆ ಜಾಗದಲ್ಲಿ ಅಶೋಕ ಚಕ್ರ ಬರುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ:–**ಮಾನ್ಯ ಸಭಾಪತಿಗಳೆ, ರಾಷ್ಟ್ರ ಧ್ವಜದ ಬಗ್ಗೆ ಇವತ್ತು ಹುಟ್ಟಿರುವ ಮಕ್ಕಳಿಗೂ ಗೊತ್ತಿರುತ್ತದೆ. ಹಾಗಾಗಿ, ಮಾನ್ಯ ವಿರೋಧ ಪಕ್ಷದ ನಾಯಕರು ಸಂಬಂಧಪಟ್ಟ ವಿಷಯದ ಬಗ್ಗೆ ಮಾತ್ರ ಮಾತನಾಡಿದರೆ ಸಮಯ ಉಳಿತಾಯ ಮಾಡಿದ ಹಾಗೆ ಆಗುತ್ತದೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ರಾಥೋಡ್‌ರವರೇ ನೀವೇಕೆ ಮಾತನಾಡುವುದಕ್ಕೆ ಏಳುತ್ತೀರಿ? ನಾನು ನಿಮಗೆ ಮಾತನಾಡಲು ಅನುಮತಿ ಕೊಟ್ಟಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ತಿಮ್ಮಾಪುರರವರೇ ದಯವಿಟ್ಟು ಕುಳಿತುಕೊಳ್ಳಿ. (ಗೊಂದಲ) ಮಾನ್ಯ ವಿರೋಧ ಪಕ್ಷದ ನಾಯಕರೇ,

ಮಾನ್ಯ ಭೋಜೇಗೌಡರು ಹೇಳಿದ ಹಾಗೆ ಮತ್ತು ನಾನೂ ಸಹ ಆಗಲೇ ಹೇಳಿದ ಹಾಗೆ ತಾವು ವಿಷಯದ ಬಗ್ಗೆ ಮಾತ್ರ ಮಾತನಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:**-ಮಾನ್ಯ ಸಭಾಪತಿಗಳೆ, ಈ ಸದನದಲ್ಲಿ ರಾಷ್ಟ್ರ ಧ್ವಜದ ಬಗ್ಗೆ ಮಾತನಾಡಬಾರದು ಎಂದು ಹೇಳುವುದಾದರೆ ನಾನು ಈಗಲೇ ರಾಜಿನಾಮೆ ಕೊಟ್ಟು ಹೊರಗಡೆ ಹೋಗುತ್ತೇನೆ. I will not stay here.

**ಸಭಾಪತಿಯವರು:-** ಮಾತನಾಡಬಾರದು ಎಂದು ಹೇಳುತ್ತಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:**-ನಾನು ರಾಷ್ಟ್ರ ಧ್ವಜದ ಬಗ್ಗೆ ಮಾತನಾಡುತ್ತಿದ್ದೇನೆ. ಇನ್ನು ಎರಡು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೆ, . . . .

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ನಿಮಗೆ ಸುಮ್ಮನೆ ಆರಾಮವಾಗಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲವೇ? ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೆ, ಇಲ್ಲಿ ಗಂಭೀರವಾದ ವಿಚಾರದ ಬಗ್ಗೆ ಚರ್ಚೆ ನಡೆಯುತ್ತಿದೆ. ಮಾನ್ಯ ಭೋಜೇಗೌಡರು, ರಾಷ್ಟ್ರ ಧ್ವಜದ ಬಗ್ಗೆ ನಮಗೆ ಎಲ್ಲಾ ಗೊತ್ತಿದೆ, ಆ ಕುರಿತು ಹೆಚ್ಚು ಮಾತನಾಡಬೇಡಿ ಎಂದು ಹೇಳಿದರು. ಆದರೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಾವು ಮಾತನಾಡಲು ಅವಕಾಶ ಕೊಟ್ಟಿರುವಾಗ ಮಾನ್ಯ ಸದಸ್ಯರು ಹಾಗೆ ಹೇಳಬಹುದೇ? ರಾಷ್ಟ್ರ ಧ್ವಜದ ಬಗ್ಗೆ ಮಾತನಾಡುವುದು ಬೇಡವೇ?

**ಶ್ರೀ ಎಸ್.ಎಲ್.ಭೋಜೇಗೌಡ:-** ಅದರ ಬಗ್ಗೆ ಇವತ್ತು ಹುಟ್ಟಿದ ಮಗುವಿಗೂ ಗೊತ್ತಿದೆ ಎಂದು . . .

**ಶ್ರೀ ಮರಿತಿಬ್ಬೇಗೌಡ:-** ಮಗುವಿಗೆ ಗೊತ್ತಿರುತ್ತದೆ ಎನ್ನುವ ವಿಷಯ ಇರಲಿ. ಆದರೆ, ಮಾನ್ಯ ಸದಸ್ಯರಿಗೆ ರಾಷ್ಟ್ರ ಧ್ವಜದ ಬಗ್ಗೆ ಎಷ್ಟು ಗೊತ್ತಿದೆ ಎಂದು ಆ ಕುರಿತು ಮಾತನಾಡುವುದಕ್ಕೆ ಹೇಳಿ? ಮಾನ್ಯ ಸಭಾಪತಿಗಳೆ, ಇವರಿಗೆ ರಾಷ್ಟ್ರ ಧ್ವಜದ ಬಗ್ಗೆ ಎಷ್ಟು ಗೊತ್ತಿದೆ ಎಂಬುದರ ಬಗ್ಗೆ ಮಾತನಾಡಲಿ. ಸಾಧ್ಯವಾದರೆ 5 ನಿಮಿಷ ಮಾತನಾಡಲಿ ನೋಡೋಣ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-** ಬೇರೆ ವಿಷಯ ಮಾತನಾಡಿ ಸಮಯವನ್ನು ಹಾಳು ಮಾಡಬಾರದು ಎಂದು ಹೇಳಿದೆ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಎಸ್.ರವಿ:-** ಮಾನ್ಯ ಭೋಜೇಗೌಡರು ಹೇಳುವುದನ್ನು ನಾವು ಕೇಳಬೇಕೇ? ಭೋಜೇಗೌಡರು ದೊಡ್ಡ ಮನುಷ್ಯರೇ?

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-** ವಿಷಯದ ಬಗ್ಗೆ ಮಾತ್ರ ಮಾತನಾಡಿ, ಸದನದ ಸಮಯವನ್ನು ಹಾಳು ಮಾಡಬೇಡಿ ಎಂದು ಹೇಳಿದ್ದು ತಪ್ಪೇ?

(ಗೊಂದಲ)

**ಶ್ರೀ ಎಸ್.ರವಿ:-** ಸುಮ್ಮನೆ ಕುಳಿತುಕೊಳ್ಳಿ . . .(ಗೊಂದಲ)

**ಸಭಾಪತಿಯವರು:–** ಇವು ಯಾವುದೂ ಕಡತಕ್ಕೆ ಹೋಗಬಾರದು. ಮಾನ್ಯ ಮರಿತಿಬ್ಬೇಗೌಡರು ಮಾತನಾಡಿದ್ದು ಯಾವುದೂ ಕಡತಕ್ಕೆ ಹೋಗಬಾರದು. ಮಾನ್ಯ ವಿರೋಧ ಪಕ್ಷದ ನಾಯಕರೇ 2 ನಿಮಿಷದಲ್ಲಿ ಮುಗಿಸಿ.

**ಶ್ರೀ ಬಿ.ಕೆ. ಹರಿಪ್ರಸಾದ್:–**ಮಾನ್ಯ ಸಭಾಪತಿಗಳೆ, 2 ನಿಮಿಷದಲ್ಲಿ ಮುಗಿಸುತ್ತೇನೆ. ರಾಷ್ಟ್ರ ಧ್ವಜದ ಬಗ್ಗೆ ಎಲ್ಲರಿಗೂ ಗೊತ್ತಿದ್ದರೂ ಅದನ್ನು ಹೇಳಬೇಕಾದುದು ನನ್ನ ಕರ್ತವ್ಯ, ಆದ್ದರಿಂದ ಹೇಳಿದೆ. ರಾಷ್ಟ್ರ ಧ್ವಜದಲ್ಲಿ ಕೇಸರಿ ಬಣ್ಣ ನಮ್ಮ ಶಕ್ತಿಯನ್ನು ಪ್ರತಿನಿಧಿಸುತ್ತದೆ. ಬಿಳಿಯ ಬಣ್ಣ ಸತ್ಯ ಮತ್ತು ಅಹಿಂಸೆಯನ್ನು ಸೂಚಿಸುತ್ತದೆ. ಕೆಳಗಡೆ ಇರುವ ಹಸಿರು ಬಣ್ಣ ಏನಿದೆ . . .

**ಸಭಾಪತಿಯವರು:–** ನೀವು ವಿಷಯವನ್ನು ಬಿಟ್ಟು ಮತ್ತೆ ಬಾವುಟದ ಬಗ್ಗೆಯೇ ಹೇಳುತ್ತಿದ್ದೀರಿ. ವಿಷಯದ ಬಗ್ಗೆ ಮಾತನಾಡಿ. ನೋಟಿಸ್‌ನಲ್ಲಿರುವ ವಿಷಯವನ್ನು ಗಮನದಲ್ಲಿಟ್ಟುಕೊಂಡು ಮಾತನಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಗಳೆ, ನಾನು ವಿಷಯ ಬಿಟ್ಟು ಮಾತನಾಡುತ್ತಿಲ್ಲ. ರಾಷ್ಟ್ರ ಧ್ವಜಕ್ಕೆ ಅಪಮಾನ ಮಾಡಿದ್ದಾರೆ ಎಂದು ಬೆಂಗಳೂರಿನಲ್ಲಿದ್ದಂಥ ದಿಶಾ ರವಿ ಎನ್ನುವವರನ್ನು ದೆಹಲಿಯವರು ಬಂದು ಅರೆಸ್ಟ್ ಮಾಡಿಕೊಂಡು ಹೋದರು. ಕೆಂಪು ಕೋಟೆಯ ಮೇಲಿರುವ ರಾಷ್ಟ್ರ ಧ್ವಜದ ಕೆಳಗೆ ರೈತ ಧ್ವಜವನ್ನು ಹಾಕಿದರು ಎಂದು ಸಿದ್ದು ಎನ್ನುವವರ ಮೇಲೆ ಕೇಸ್ ಹಾಕಿದರು. ಪಾಪ ಅವರು ಈಗ ತೀರಿಕೊಂಡಿದ್ದಾರೆ. ಅದಲ್ಲದೇ, ಯಾರು ರೈತರ ಮೇಲೆ ಟ್ರ್ಯಾಕ್ಟರನ್ನು ಹತ್ತಿಸಿದರೋ ಅವರ ಮೇಲೆ sedition ಕೇಸ್ ದಾಖಲಾಯಿತು. ಉತ್ತರ ಪ್ರದೇಶದಲ್ಲಿ ಅಜಯ್ ಮಿಶ್ರ ಎನ್ನುವ ಮಂತ್ರಿಯ ಮಗ ಏನು ರೈತರ ಮರಣಕ್ಕೆ ಕಾರಣನಾದನೋ ಅಂಥವರ ಮೇಲೆ ಕೇಸ್ ಆಗಲಿಲ್ಲ. ಮಾನ್ಯ ಈಶ್ವರಪ್ಪನವರ ಮೇಲೆ ಸೆಕ್ಷನ್... Section 2 of "The Prevention of Insults to National Honour Act, 1971 reads as under:–

> "Whoever in any public place or in any other place within public view burns, mutilates, defaces, defiles, disfigures, destroys, tramples upon or otherwise brings into contempt (whether by words, either spoken or written, or by acts)..."

It is a spoken word.

> "…the Indian National Flag or any part thereof, shall be punished with imprisonment for a term which may extend to three years, or with fine, or with both"

ಹಾಗಾಗಿ ಸರ್ಕಾರ ಅವರ ಮೇಲೆ ತತಕ್ಷಣವೇ ರಾಷ್ಟ್ರ ದ್ರೋಹದ ಕೇಸನ್ನು ದಾಖಲು ಮಾಡಿ ತತಕ್ಷಣವೇ ಅರೆಸ್ಟ್ ಮಾಡಿ ಜೈಲಿಗೆ ಕಳುಹಿಸಬೇಕು ಮತ್ತು ಅವರಿಂದ ರಾಜೀನಾಮೆ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಗಳೆ, ಈ ವಿಷಯದ ಬಗ್ಗೆ ಮೊದಲು ನಾನು ನೋಟಿಸ್ ಕೊಟ್ಟಿದ್ದೆ. ಹಾಗಾಗಿ ನನಗೆ ಮಾತನಾಡಲು ಅವಕಾಶ ಕೊಡಬೇಕು.

Sri SALEEM AHMED: I am a signatory. I want to speak.

**(ಗೊಂದಲ)**

**ಸಭಾಪತಿಯವರು:-** ಎಲ್ಲರಿಗೂ ಅವಕಾಶ ಕೊಡುವುದಕ್ಕಾಗಲಿಲ್ಲ. ಈ ವಿಷಯದ ಬಗ್ಗೆ ಒಂದು ಗಂಟೆ ಚರ್ಚೆ ಮಾಡಲಾಗಿದೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಗಳೆ, ಈ ಕುರಿತು ನಾನು ಮೊದಲು ನೋಟಿಸ್ ಕೊಟ್ಟಿದ್ದೆ. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ.

**ಶ್ರೀ ಹೆಚ್.ಎಂ.ರಮೇಶ್ ಗೌಡ:-**ಮಾನ್ಯ ಸಭಾಪತಿಗಳೆ, ನಾವೂ ಕೂಡ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:-**ಮಾನ್ಯ ಸಭಾಪತಿಗಳೆ, ರಾಷ್ಟ್ರ ಧ್ವಜದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದರು. ಕೆಂಪು ಕೋಟೆಯ ಮೇಲೆ ಪ್ರಧಾನ ಮಂತ್ರಿಗಳಲ್ಲದೇ ಬೇರೆ ಯಾರೂ

ಧ್ವಜ ಹಾರಿಸುವ ಹಾಗಿಲ್ಲ. ನಾನು ಒಂದು ವರ್ಷ ಕೇಂದ್ರದಲ್ಲಿ ಮಂತ್ರಿಯಾಗಿದ್ದೆ. ಶ್ರೀಮಾನ್ ದೇವೇಗೌಡರು ಆ ಜಾಗದಿಂದ ಭಾಷಣ ಮಾಡಬೇಕಾದರೆ ಮಂತ್ರಿಗಳು ಕೆಳಗಡೆ ಕುಳಿತುಕೊಂಡಿದ್ದರು. ಆ ಜಾಗದ ಹತ್ತಿರ ಕೂಡ ಹೋಗುವ ಹಾಗಿರಲಿಲ್ಲ.

**(ಮುಂದು)**

**(51) 16-2-2022 12.30 ಡಿಎಸ್-ಆರ್‌ಎನ್**

**ಶ್ರೀ ಸಿ.ಎಂ.ಇಬ್ರಾಹಿಂ(ಮುಂದು):-**

ಮಾನ್ಯ ಈಶ್ವರಪ್ಪನವರು ಹೇಳಿಕೆ ಕೊಟ್ಟ ಮಾರನೆಯ ದಿನವೇ ನಾನು ಹೇಳಿದೆ, ಇವರು ಹೇಳಿರುವುದು ತಪ್ಪು, ಇವರು ಕ್ಷಮೆ ಕೇಳಬೇಕು, ಕ್ಷಮೆ ಕೇಳದಿದ್ದರೆ ಮಾನ್ಯ ಬಸವರಾಜ ಬೊಮ್ಮಾಯಿಯವರು ಕೂಡಲೇ ಇವರ ಮೇಲೆ ಕೇಸ್ ಹಾಕಿ ರಾಜೀನಾಮೆ ತೆಗೆದುಕೊಳ್ಳಲಿ ಎಂದು ಹೇಳಿದೆ. ಇದಕ್ಕೇನು explanation ಉಳಿದಿಲ್ಲ. Only one explanation is case should be booked, he should be removed from the Cabinet. ಈ ಕೆಲಸವನ್ನು ರಾಜ್ಯಪಾಲರು ಮಾಡಬೇಕಾಗಿತ್ತು. ಈ ರಾಜ್ಯದ ಮುಖ್ಯ ಕಾರ್ಯದರ್ಶಿ, ಡಿಜಿಪಿ suo moto ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಯಾರೋ ಅಮಾಯಕ ಹುಡುಗರು ತಪ್ಪು ಮಾಡಿದರೆ ಪೋಲೀಸರು suo moto ಎಂದು ಹೇಳುತ್ತಾರೆ. ಮಂತ್ರಿ ತಪ್ಪು ಮಾಡಿದರೆ suo moto ಅಲ್ಲವೇ? You have not fair? ಇವತ್ತು ಮಾನ್ಯ ಈಶ್ವರಪ್ಪನವರ ಮೇಲೆ ಕ್ರಮ ತೆಗೆದುಕೊಳ್ಳುವುದಷ್ಟೇ ಅಲ್ಲದೇ ಮುಖ್ಯ ಕಾರ್ಯದರ್ಶಿ, ಡಿಜಿಪಿ, ಯಾರ್ಯಾರು Law & Order ಸಂಬಂಧಪಟ್ಟ ಅಧಿಕಾರಿಗಳಿದ್ದಾರೆಯೋ ಅವರ ಮೇಲೂ ಕೂಡ ಸದನದಿಂದ ಇವತ್ತು breach of privilege move ಮಾಡುತ್ತೇವೆ. ಆ ಅಧಿಕಾರಿಗಳ ಮೇಲೂ ಹಕ್ಕುಚ್ಯುತಿ ಆಗಬೇಕು. ಮುಂದೆ ಯಾರು ಕೂಡ ರಾಷ್ಟ್ರಧ್ವಜದ ಬಗ್ಗೆ, ಕೆಂಪು ಕೋಟೆ ಬಗ್ಗೆ ಹಗುರವಾಗಿ ಮಾತನಾಡಬಾರದು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ನಾನು ಮನವಿ ಮಾಡುವುದೇನೆಂದರೆ, ಮಾನ್ಯ ಈಶ್ವರಪ್ಪನವರ ಹೇಳಿಕೆಗೆ ಅವರು ಯಾರು ಕೂಡ ಬೆಂಬಲ ಕೊಟ್ಟಿಲ್ಲ. ಅದೇ ಕೆಲಸ ಅವರು ಇಲ್ಲೂ ಮಾಡಬೇಕು. ಅದು ರಾಷ್ಟಭಕ್ತಿ. ಅವರಿಗೆ ಆರ್‌ಎಸ್‌ಎಸ್ ಬಗ್ಗೆ ಪ್ರೀತಿ ಇದೆ, ಪ್ರೀತಿ ಇಟ್ಟುಕೊಳ್ಳಲಿ, ನಾವು ಬೇಡ ಎಂದು ಹೇಳುವುದಿಲ್ಲ.

ಅವರವರು ಹಡೆದಿರುವ ಮಕ್ಕಳಿಗೆ ತಾಯಿ ಮೇಲೆ ಪ್ರೀತಿ ಇರಬೇಕಾದ್ದು ಸ್ವಾಭಾವಿಕ. ಮಗು ಎಷ್ಟೇ ಕುರೂಪಿಯಾಗಿದ್ದರು ತಾಯಿ ಆ ಮಗುವನ್ನು ಪ್ರೀತಿ ಮಾಡುತ್ತಾರೆ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ಆದರೆ ಈಗ ಅವರು ಅದೇ ಪ್ರೇಮವನ್ನು ಆರ್‌ಎಸ್‌ಎಸ್ ಬಗ್ಗೆ ಏನು ಇಟ್ಟಿದ್ದಾರೆಯೋ ಕೆಂಪು ಕೋಟೆ ಮೇಲೆ, ರಾಷ್ಟ್ರಧ್ವಜದ ಮೇಲೆ ಇಟ್ಟುಕೊಳ್ಳಬೇಕಾಗುತ್ತದೆ. ಯಾವ ಧ್ವಜವನ್ನು ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಹಾರಿಸಿದ್ದಾರೆಯೋ, 72 ವರ್ಷದಲ್ಲಿ ನಮ್ಮ ದೇಶದ ಪ್ರಧಾನ ಮಂತ್ರಿಗಳಲ್ಲದೇ ಯಾರು ಅಲ್ಲಿ ಯಾವ ಧ್ವಜವನ್ನು ಸಹ ಹಾರಿಸುವುದಕ್ಕೆ ಹೋಗಿಲ್ಲ. ಈ ತಪ್ಪನ್ನು ಅವರು ಮಾಡಿದ್ದಾರೆ. ಅವರ ರಾಜೀನಾಮೆಯನ್ನು ತೆಗೆದುಕೊಂಡು ಅವರ ಮೇಲೆ ಕೇಸ್ ಹಾಕಿ ನಿಜಕ್ಕೂ ಹೆಸರನ್ನು ಬೆಳಗಿಸಿ. ನಾಗಪುರ ದೇಶದ ಭಕ್ತಿ ಇದೆ, ತೋರಿಸಿ ಕೊಡುವ ಕಾಲ ಬಂದಿದೆ. ದಯವಿಟ್ಟು ಇವರು ಕಾರ್ಯಗತ ಮಾಡಿ ತೋರಿಸಿ ಕೊಡಬೇಕೆಂದು ನಾನು ತಮ್ಮ ಮೂಲಕ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ,......

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾತನಾಡುವುದಕ್ಕೆ ನಾನು ಕೂಡ ಸಹಿ ಮಾಡಿದ್ದೇನೆ. ಇದು ದೇಶದ ವಿಚಾರವಾಗಿದೆ. ನಾನು ಮಾತನಾಡಿದ ನಂತರ ಮಾನ್ಯ ಕಾನೂನು ಮಂತ್ರಿಗಳು ಮಾತನಾಡಲಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಮಂತ್ರಿಗಳು ಆಮೇಲೆ ಮಾತನಾಡಲಿ. ನಾವು ಕೂಡ ನಿಲುವಳಿ ಸೂಚನೆ ಬಗ್ಗೆ ಮಾತನಾಡುವುದಕ್ಕೆ ನೋಟಿಸ್ ಕೊಟ್ಟಿದ್ದೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಿಲುವಳಿ ಸೂಚನೆ ಬಗ್ಗೆ ಮಾತನಾಡುವುದಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ. ಅವರೇನು ಹೇಳಿದ್ದಾರೆ ಎಂಬುದು ಪ್ರಶ್ನೆ ಬೇರೆ. ಅವರು ಹೇಳಿದಕ್ಕೆಲ್ಲಾ ಉತ್ತರ ಕೊಡುತ್ತೇವೆ. ಒಂದು ಸ್ಪಷ್ಟತೆ ಇರಲಿ, ಮಾನ್ಯ ಈಶ್ವರಪ್ಪನವರು ರಾಷ್ಟ್ರಧ್ವಜದ ಬಗ್ಗೆ ಯಾವುದೇ ಅಗೌರವದ ಮಾತನಾಡಿಲ್ಲ.

**ಸಭಾಪತಿಯವರು:-** ಈಗ ಎಲ್ಲರ ಪರವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಕಾನೂನು ಮಂತ್ರಿಗಳು ಮಾತನಾಡಿದ ನಂತರ ಕ್ಲಾರಿಫಿಕೇಶನ್ ಕೇಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾವು ಹತ್ತು ಜನ ಸಹಿ ಮಾಡಿ ಕೊಟ್ಟಿದ್ದೇವೆ. ಆದರೆ ಎಲ್ಲರೂ ಮಾತನಾಡುವುದಕ್ಕೆ ಹೋಗುವುದಿಲ್ಲ. ದಯವಿಟ್ಟು ಮಾನ್ಯ ಸಲೀಂ ಅಹಮದ್‌ರವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ರಾಷ್ಟ್ರಧ್ವಜದ ಬಗ್ಗೆ ಅವರು ಏನು ಮಾತನಾಡಿಲ್ಲ ಎಂದು ಹೇಳಿದ್ದಾರೆ. ಕೇಸರಿ ಧ್ವಜವನ್ನು ನಾನು ಹಾರಿಸುತ್ತೇನೆಂದರೆ, ಕೇಸರಿ, ರಾಷ್ಟ್ರಧ್ವಜವನ್ನು ಜಂಟಿಯಾಗಿ ಹಾರಿಸುತ್ತಾರೆಯೇ? ಆ ರೀತಿ ಹೇಳುವುದು ತಪ್ಪು ಅಲ್ಲವೇ?

(ಗೊಂದಲ)

**ಸಭಾಪತಿಯವರು:–** ಮಾನ್ಯ ಕಾನೂನು ಸಚಿವರೇ, ಮಾನ್ಯ ಸಲೀಂ ಅಹಮದ್‌ರವರು ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ನಂತರ ನೀವು ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಮಂತ್ರಿಗಳು ಮಾತನಾಡಿದ ನಂತರ ಅವಕಾಶ ಕೊಡಿ. ಎಲ್ಲರೂ ಅದೇ ರೀತಿ ಮಾತನಾಡಿದರೆ ಹೇಗೆ?

**ಸಭಾಪತಿಯವರು:–** ಮಾನ್ಯ ಸಲೀಂ ಅಹಮದ್‌ರವರು ಸಹಿ ಮಾಡಿರುವುದರಿಂದ ಅವರಿಗೆ ಅವಕಾಶ ಕೊಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಹತ್ತು ಜನ ಸಹಿ ಮಾಡಿಕೊಟ್ಟಿದ್ದಾರೆ.

**ಸಭಾಪತಿಯವರು:–** ನಾನು ಎಲ್ಲರಿಗೂ ಅವಕಾಶ ಕೊಡುತ್ತಿಲ್ಲ. ಮಾನ್ಯ ಸಲೀಂ ಅಹಮದ್‌ರವರಿಗೆ ಎರಡು ನಿಮಿಷ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾವು ಕೂಡ ನೋಟಿಸ್ ಕೊಟ್ಟಿದ್ದೇವೆ.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆಯನ್ನು ನಾವು ಕೊಟ್ಟಿದ್ದೇವೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಾವು ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಟ್ಟಿದ್ದೀರಿ. ನಾವು ನೋಟಿಸ್ ಕೊಟ್ಟ ಮೇಲೆ ನಮಗೂ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಡಬೇಕಲ್ಲವೇ? ನಮ್ಮಲ್ಲಿ ಒಬ್ಬರು ಮಾತನಾಡುತ್ತಾರೆ. ಆಮೇಲೆ ಚರ್ಚೆಗೆ ತೆಗೆದುಕೊಳ್ಳಬೇಕೋ ಬೇಡವೋ ಎನ್ನುವ ನಿರ್ಣಯವನ್ನು ತಾವು ತೆಗೆದುಕೊಳ್ಳಿ. ಪ್ರಿಲಿಮಿನರಿ ಸಬ್‌ಮಿಷನ್ ನಮ್ಮ ಕಡೆಯಿಂದಲೂ ಆಗಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕಾನೂನು ಮಂತ್ರಿಗಳು ಉತ್ತರ ಕೊಡುತ್ತಾರೆ, ಆನಂತರ ತಾವು ನಿರ್ಧಾರ ಮಾಡಿ. ಈಗ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಹೇಗೆ?

**ಸಭಾಪತಿಯವರು:-** ಸಭಾನಾಯಕರೇ, ಈಗ ಮಾನ್ಯ ಸಲೀಂ ಅಹಮದ್‌ರವರಿಗೆ ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ಸಲೀಂ ಅಹಮದ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಯಾವ ಪಕ್ಷ ದೇಶ ಭಕ್ತಿ, ರಾಷ್ಟ್ರ ಭಕ್ತಿ ಎಂದು ಪ್ರತಿಪಾದನೆ ಮಾಡುವವರು ಇವತ್ತು ಈ ರೀತಿ ಚರ್ಚೆ ಮಾಡುತ್ತಿರುವುದು ದುರ್ದೈವ. ಮಾನ್ಯ ಈಶ್ವರಪ್ಪನವರು ಹೇಳಿಕೆಯನ್ನು ಮಾಡುತ್ತಾರೆ, "Saffron Flag may become National Flag sometime in future" claims Karnataka BJP Leader. ನಾಚಿಕೆ ಆಗಬೇಕು. ಮಾಜಿ ಉಪ ಮುಖ್ಯಮಂತ್ರಿಗಳು, ಹಿರಿಯ ಮುಖಂಡರು, ಈ ರೀತಿಯ ಹೇಳಿಕೆ ಕೊಟ್ಟರೆ ಅದನ್ನು ಒಪ್ಪಬಹುದೇ? ಇದಕ್ಕೆ ಪ್ರತಿಭಟನೆ ಮಾಡಬಾರದೇ? ಮಾನ್ಯ ಮುಖ್ಯಮಂತ್ರಿಗಳು ಏನು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ? ನಾವು 3-4 ದಿನಗಳಿಂದ ಇವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇವೆ. ಇವರ ಮೇಲೆ Sedition case book ಮಾಡಿ ಅರೆಸ್ಟ್ ಮಾಡಬೇಕೆಂದು ಹೇಳಿದ್ದೆವು. ಆದರೆ ಮಾಡಲಿಲ್ಲ. ಬಿಜೆಪಿಯ General Secretary ಮಾನ್ಯ ರವಿಕುಮಾರ್‌ರವರು ಹೇಳುತ್ತಾರೆ, ಈಶ್ವರಪ್ಪನವರು ಏನು ತಪ್ಪು ಮಾತನಾಡಿದರು ಎನ್ನುವ ಮಾತನ್ನು ಹೇಳುತ್ತಾರೆ. ಇದು ಬಿಜೆಪಿಯ ನಿರ್ಧಾರಗಳೇ, ಇದು ಸಂಸ್ಕೃತಿಯೇ? ಇನ್ನು ಹಲವಾರು

ವಿಚಾರಗಳಿವೆ, ಆದರೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಕೂಡಲೇ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು. ಇವರ ಮೇಲೆ ಕೂಡಲೇ Sedition case ಹಾಕಬೇಕು, ಅವರನ್ನು ಅರೆಸ್ಟ್ ಮಾಡಬೇಕು, ಅದೇ ರೀತಿ ಮಾನ್ಯ ರವಿಕುಮಾರ್‌ರವರ ಮೇಲೂ ಕೇಸ್ ಹಾಕಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾತನಾಡುವುದಕ್ಕೆ ನಮಗೂ ಅವಕಾಶ ಕೊಡಿ.

**ಸಭಾಪತಿಯವರು:-** ನೀವು 11.45 ಗಂಟೆಗೆ ನೋಟಿಸ್ ಕೊಟ್ಟಿದ್ದೀರಿ, ಒಂದು ಗಂಟೆ ಮುಂಚಿತವಾಗಿ ನೋಟಿಸ್ ಕೊಡಬೇಕಾಗಿತ್ತು. ಅದಕ್ಕಾಗಿ ನಾನು ತಮಗೆ ಅವಕಾಶ ಕೊಡುವುದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಒಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ತಾವು ನಮ್ಮ ಹಕ್ಕನ್ನೇ ಕಿತ್ತುಕೊಳ್ಳುತ್ತಿದ್ದೀರಿ. ನಾವು ಕೂಡ ನೋಟಿಸ್ ಕೊಟ್ಟಿರುವುದರಿಂದ ದಯಮಾಡಿ ನಮಗೆ ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, M.N. Kaul & S.L. Shakdher ರವರ Practice & Procedure of Parliament ಪುಸ್ತಕದಲ್ಲಿ ಅದರ ಬಗ್ಗೆ provision ಮಾಡಿರುವುದನ್ನು ನಾನು ಹೇಳುತ್ತಿದ್ದೇನೆ; *"If an adjournment motion is sought to be moved on the basis of statement by any Minister, it must set out either the statement in full or at least give a substance of the statement; otherwise, it could not be a definite matter for discussion..."* ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಇದುವರೆಗೆ ಮಾನ್ಯ ಈಶ್ವರಪ್ಪನವರು ಮಾತನಾಡಿರುವುದನ್ನು ಹೇಳಿಕೆ ಎಂದು ಹೇಳುತ್ತಾರೆ ಅದು ವಾಸ್ತವವಾಗಿರುವ ಹೇಳಿಕೆ ಅಲ್ಲ. ಅವರೇ Section.2 of the Flag Act ಅನ್ನು quote ಮಾಡಿ ಹೇಳಿದ್ದಾರೆ. ಆ ರೀತಿ ಏನಾದರೂ react ಮಾಡುವಾಗ ಆಗಿದ್ದರೆ ಅದನ್ನು cognizance

ತೆಗೆದುಕೊಳ್ಳುವಂತಹ ಪರಿಸ್ಥಿತಿ ಇಲ್ಲ. ಮಾನ್ಯ ಈಶ್ವರಪ್ಪನವರು interact ಮಾಡಬೇಕಾದರೆ ಹೇಳುತ್ತಾರೆ, ಎಲೆಕ್ಟ್ರಾನಿಕ್ ಮೀಡಿಯಾ ಪತ್ರಕರ್ತರು ಕೇಳುತ್ತಾರೆ, ಕೆಂಪುಕೋಟೆ ಮೇಲೆ ಕೇಸರಿ ಧ್ವಜವನ್ನು ಹಾರಿಸಬಹುದಾ ಎಂದು ಕೇಳುತ್ತಾರೆ. ಮಾನ್ಯ ಈಶ್ವರಪ್ಪನವರು ಹಾರಿಸುತ್ತೇವೆಂದು ಹೇಳಲಿಲ್ಲ. ಇವತ್ತಲ್ಲಾರೀ ಯಾವತ್ತಾದರೂ ಒಂದು ದಿನ ಆಗಬಹುದು ಎಂದು ಹೇಳುತ್ತಾರೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ನಾನು ಮಾತನಾಡುತ್ತಿದ್ದೇನೆ, ಎಲ್ಲರೂ ಕುಳಿತುಕೊಳ್ಳಿ, ನಿಮ್ಮಿಂದ ನಾನು ಪಾಠ ಕಲಿಯಬೇಕಾಗಿಲ್ಲ.

**(ಗೊಂದಲ)**

**ಸಭಾಪತಿಯವರು:-** ನನ್ನ ಅನುಮತಿ ಇಲ್ಲದೆ ಕಾನೂನು ಮಂತ್ರಿಗಳು ಮಾತನಾಡುವುದನ್ನು ಬಿಟ್ಟು ಬೇರೆಯವರು ಮಾತನಾಡಿದರೆ ಯಾವುದು ಕಡತಕ್ಕೆ ಹೋಗಬಾರದು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರ ಹೇಳಿಕೆ ಏನೆಂದರೆ, "ಇವತ್ತಲ್ಲಾರೀ ಯಾವತ್ತೋ ಒಂದು ದಿನ. ಇವತ್ತು ಹಿಂದು ವಿಚಾರದ ಬಗ್ಗೆ ಚರ್ಚೆಯಾಗುತ್ತಿದೆ. ಹಿಂದುತ್ವ ಬಗ್ಗೆ ಚರ್ಚೆ ಅಗ್ತಾ ಇದೆ, ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟುತ್ತೀರಾ ಅಂದಾಗ ಒಂದು ಕಾಲದಲ್ಲಿ ಏನ್ ಹೇಳ್ತಾ ಇದ್ರು, ನಗ್ತಾ ಇದ್ರು ಹೌದಾ... ಕಟ್ಟಿದ್ವಾ ಇಲ್ಲವೋ? ಈಗ ಹಾಗೇ ಯಾವುದೋ ಕಾಲದಲ್ಲಿ, 100 ವರ್ಷನೋ, 200 ವರ್ಷನೋ, 500 ವರ್ಷ ನಂತರನೋ ಭಗವಾಧ್ವಜವೇ ರಾಷ್ಟ್ರಧ್ವಜ ಆಗಬಹುದು ಗೊತ್ತಿಲ್ಲ ಎಂದು sarcastic ಹೇಳುತ್ತಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಭಗವಾಧ್ವಜದ ಬಗ್ಗೆ sarcastic ಎಂದು ಹೇಳಬೇಡಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರು ಮುಂದುವರೆದು ಏನು ಹೇಳುತ್ತಾರೆಂದರೆ, "ಎಲ್ಲಿ ಬೇಕಾದರೂ ಹಾರಾಡಬಹುದು, ಅದಕ್ಕೆ ನಾನು ಹೇಳುತ್ತಾ ಇರೋದು, ಈಗ ನಾವೆಲ್ಲರೂ ಕೂಡ ಸಂವಿಧಾನ ಬದ್ಧವಾಗಿ ತ್ರಿವರ್ಣಧ್ವಜ ನಮ್ಮ ರಾಷ್ಟ್ರ ಧ್ವಜ ಅಂತ ಒಪ್ಪಿಕೊಂಡಿದ್ದೇವೆ. ಅದಕ್ಕೆ ಗೌರವ ಕೊಡಲೇ ಬೇಕು. ಯಾರೇ ಅದಕ್ಕೆ ಗೌರವ

ಕೊಡೋದು ತಪ್ಪಿದ್ರೆ ಅವನು ರಾಷ್ಟ್ರ ದ್ರೋಹಿ ಆಗುತ್ತಾನೆ." ಇದರಲ್ಲಿ ಏನು ತಪ್ಪಿದೆ? What is wrong in Eshwarappa's statement? ನಾನು ಓದಿದ್ದೇನೆ. Full text of the statement ಅನ್ನು ನೀವು ಓದಬೇಕೆಂದು ನಾನು ಹೇಳುತ್ತಿರುವುದು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಗೋಡ್ಸೆಯನ್ನು ನೀವು ರಾಷ್ಟ್ರ ದ್ರೋಹಿ ಎಂದು ಹೇಳಲಿಲ್ಲ. ನೀವೇನು ಈಶ್ವರಪ್ಪನವರ ಬಗ್ಗೆ ಹೇಳುವುದು?

**(ಮುಂದು)**

**(52) 16-2-2022 12-40 bkp-rn**

**ಶ್ರೀ ಜೆ.ಸಿ. ಮಾಧುಸ್ವಾಮಿ(ಮುಂದು):-**

ಈಗ ನಾವೆಲ್ಲರೂ ಕೂಡ ಸಂವಿಧಾನಬದ್ಧವಾಗಿ ತ್ರಿವರ್ಣಧ್ವಜವನ್ನು ನಮ್ಮ ರಾಷ್ಟ್ರಧ್ವಜ ಎಂದು ಒಪ್ಪಿಕೊಂಡಿದ್ದೇವೆ. ಅದಕ್ಕೆ ಗೌರವ ಕೊಡಲೇ ಬೇಕು. ಯಾರೇ ಆಗಲಿ, ಅದಕ್ಕೆ ಗೌರವ ಕೊಡುವುದನ್ನು ತಪ್ಪಿದರೆ ಅವನು ರಾಷ್ಟ್ರದ್ರೋಹಿಯಾಗುತ್ತಾನೆ. ಇದರಲ್ಲಿ ಏನು ತಪ್ಪು?

**(ಗೊಂದಲ)**

**ಶ್ರೀ ನಸೀರ್ ಅಹ್ಮದ್( ವಿಧಾನ ಸಭೆಯಿಂದ ಚುನಾಯಿತರಾದವರು**): ಮಾನ್ಯ ಸಭಾಪತಿಯವರೆ, ಇಂತಹ ಹೇಳಿಕೆಯನ್ನು argue ಮಾಡಬಾರದು.

**(ಗೊಂದಲ)**

**ಸಭಾಪತಿಯವರು:-** ಕಾನೂನು ಸಚಿವರದ್ದು ಹೊರತುಪಡಿಸಿ, ಉಳಿದ ಯಾರದ್ದು ಕಡತಕ್ಕೆ ಹೋಗಬಾರದು.

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಇದು ಅವರ ಹೇಳಿಕೆಯೋ ಕೇಶವಕೃಪದ ಹೇಳಿಕೆಯೋ ಎಂದು ಹೇಳಿ.

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಸಚಿವರು):-** ಮಾನ್ಯ ಸಭಾಪತಿಯವರೆ, ನಿಮ್ಮ ಹತ್ತಿರ ಇರುವಂತಹ ಪೇಪರ್ ಕಟಿಂಗ್ಸ್ ಕೊಡಿ. ಶ್ರೀಯುತ ಕೆ.ಎಸ್. ಈಶ್ವರಪ್ಪನವರು ಈ ರಾಷ್ಟ್ರದ ಧ್ವಜಕ್ಕೆ ಅತ್ಯಂತ ಹೆಚ್ಚು ಗೌರವ ಕೊಟ್ಟಿದ್ದಾರೆ. ಯಾರೇ ಆಗಲಿ, ರಾಷ್ಟ್ರ ಧ್ವಜಕ್ಕೆ ಅಗೌರವ ಮಾಡಿದರೆ ಆತನು ರಾಷ್ಟ್ರದ್ರೋಹಿಯಾಗುತ್ತಾನೆಂದು ಹೇಳಿರುವ ಮನುಷ್ಯನ ಬಗ್ಗೆ ರಾಷ್ಟ್ರದ್ರೋಹವೆಂದು ಹೇಳಿ ಇಲ್ಲಿ ಚರ್ಚೆ ಮಾಡುತ್ತಿರುವುದು ಒಂದು ದುರಂತಕರ ಘಟನೆ. ನೋಡಿ, ಸೆಕ್ಷನ್ -2 ಅನ್ನು ತಾವು ರೆಫರ್ ಮಾಡಿ. It cannot be taken.

**ಶ್ರೀ ಬಿ.ಕೆ. ಹರಿಪ್ರಸಾದ್:-** ಸೆಕ್ಷನ್-2 ರಲ್ಲಿಯೇ ಇರುವುದನ್ನು ನಾನು ಹೇಳುತ್ತಿದ್ದೇನೆ. Spoken...

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೆ, ಯಾವುದೋ ಒಂದು ವಿಷಯದ ಬಗ್ಗೆ ಕೇಳಿದಾಗ ಮಾತನಾಡಿದರೆ, ಅದು ಹೇಳಿಕೆಯಾಗುವುದಿಲ್ಲ. ಫೈನಲ್ ಆಗಿ ಅವರು ಏನು ಹೇಳಿದ್ದಾರೆ, ಅದನ್ನು ನೋಡಬೇಕಾಗುತ್ತದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಅವರು ಆ ಸಂದರ್ಭದಲ್ಲಿ ಪ್ರತಿಕ್ರಿಯಿಸಿದ್ದು, His reaction is not a statement? ಹೇಳಿಕೆ ಅಲ್ಲವೇ?

**(ಗೊಂದಲ)**

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೆ, ಎರಡನೆಯದಾಗಿ, ಮಾನ್ಯ ಶ್ರೀ ಬಿ.ಕೆ. ಹರಿಪ್ರಸಾದ್‌ರವರು ಶ್ರೀಯುತ ನಾರಾಯಣಸ್ವಾಮಿ ಯವರಿಗೆ ಬಹಳ ವ್ಯಂಗ್ಯವಾಗಿ ಹೇಳಿದರು. ಅದರ ಬಗ್ಗೆ ನಾನು ಹೇಳುತ್ತೇನೆ. Dr. Baba Saheb Ambedkar takes diksha, went back to Buddhism with his about 6,00,000 followers on 14th October 1956. "dikshabhumi" also a tourist place in Nagpur. 'Dhamma Chakra Pravartan Din' is, Ceremony Day 14 October, ಅವರು ನಾಗಪುರವನ್ನು ದೀಕ್ಷಾ ಭೂಮಿ ಎಂದು ಹೇಳಿದ್ದಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್:** ದೀಕ್ಷಾ ಭೂಮಿ ಬಗ್ಗೆ ಹೇಳುತ್ತಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೆ, ನಾನು ಮಿಡಿಯಾದಲ್ಲಿ ಬಂದಿರುವ ಕಟಿಂಗ್ಸ್‌ಗಳನ್ನೆಲ್ಲಾ ಕೊಡುತ್ತೇನೆ. ಶ್ರೀಯುತ ಕೆ.ಎಸ್. ಈಶ್ವರಪ್ಪನವರು ಪ್ರತಿಕ್ರಿಯಿಸಿರುವಂತಹ ಹೇಳಿಕೆ ಸ್ಪಷ್ಟವಿದೆ. ತ್ರಿವರ್ಣಧ್ವಜ ನಮ್ಮ ರಾಷ್ಟ್ರಧ್ವಜವಾಗಿದ್ದು, ನಾವು ಅದಕ್ಕೆ ಗೌರವ ಕೊಡಲೇ ಬೇಕು, ಕೊಡದೇ ಹೋದರೆ ದೇಶದ್ರೋಹಿಯಾಗುತ್ತೇವೆ ಎಂದು ಹೇಳಿದ್ದಾರೆ. ಅದಕ್ಕೆ ಪೂರಕವಾಗಿ ಭಾರತೀಯ ಜನತಾ ಪಕ್ಷ ತಲೆ ಮಾರುಗಳಿಂದ ನಡೆದುಕೊಂಡು ಬಂದು, ಗೋಲಿಬಾರ್‌ಗಳನ್ನು ಎದುರಿಸಿಕೊಂಡು, ಗೋಲಿಬಾರ್ ಮಧ್ಯೆ ರಾಷ್ಟ್ರಧ್ವಜವನ್ನು ಹಾರಿಸಿರುವಂತಹ ದೊಡ್ಡ ಪಕ್ಷ ಇದಾಗಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:** 62 ವರ್ಷಗಳಿಂದ ಏತಕ್ಕೆ ಹಾರಿಸಿಲ್ಲವೆಂದು ಕೇಳಿ. ಇದಕ್ಕೆ ಏನು ಕಾರಣ?

**(ಗೊಂದಲ)**

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೆ, ಅವರು ಹೇಳುತ್ತಿದ್ದಾರೆ; Sedition 124A.. I know certainly what is Sedition? ಶ್ರೀಯುತ ಈಶ್ವರಪ್ಪನವರು ಹೇಳಿಕೆಯನ್ನು ಮಾಡಿಯೇ ಇಲ್ಲವೆಂದು ಹೇಳಿದಾಗ ರಾಜಕೀಯ ಕಾರಣಕ್ಕೆ ಒಬ್ಬ ಮನುಷ್ಯನ ತೇಜೋವಧೆ ಮಾಡಲಿಕ್ಕೆ ಬಹುಶಃ ಈ ಒಂದು ಸ್ಥಿತಿಯನ್ನು ಮಾಡಬಾರದು. ದಯಮಾಡಿ ನಮ್ಮ ವಾದದ ಮೇಲೆ ಇದನ್ನು ತಾವು ರಿಜೆಕ್ಟ್ ಮಾಡಬೇಕು. There is no sufficient material to allow this adjournment motion discussed in this House. Please don't waste the time of House. ರಿಜೆಕ್ಟ್ ಮಾಡಬೇಕೆಂದು ಹೇಳುತ್ತಿದ್ದೇವೆ. ಇದನ್ನು ನಾವು ಹೇಳುತ್ತಿರುವುದಲ್ಲ, ನಿಮ್ಮ ರೂಲ್ಸ್ ಹೇಳುತ್ತಿದೆ. ಇದರಲ್ಲಿ ಯಾವ ಅಡಕಗಳನ್ನು ಕೊಟ್ಟಿರುವುದಿಲ್ಲ. *"An adjournment motion does not lie when facts are in dispute, or before they are available. When Government disputes the facts stated in the notice of the adjournment motion, the Speaker cannot accepts the adjournment motion."* ನೀವು

ಇದನ್ನು ರಿಜೆಕ್ಟ್ ಮಾಡಲೇ ಬೇಕು. Facts ಅನ್ನು ನಿಮಗೆ reveal ಮಾಡಿದರೆ disputed facts. Accepted facts ಅಲ್ಲವೇ ಅಲ್ಲ. ಯಾರೋ ಮಧ್ಯೆ ಪ್ರಶ್ನೆ ಮಾಡಿದಾಗ ಯಾವುತ್ತೋ ಒಂದು ದಿವಸ ಆಗಬಹುದು ಎಂದು ಹೇಳುರುವುದು ದೊಡ್ಡ ದೇಶ ದ್ರೋಹ ಅಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ:–** ಅವರು ಒಪ್ಪಿಕೊಂಡಿದ್ದಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೆ, ತ್ರಿವರ್ಣ ಧ್ವಜ ನಮ್ಮ ರಾಷ್ಟ್ರಧ್ವಜವಾಗಿದ್ದು, ಅದಕ್ಕೆ ನಾವು ಗೌರವ ಕೊಡಲೇ ಬೇಕು, ಕೊಡದೇ ಹೋದರೆ, ಅವನು ರಾಷ್ಟ್ರದ್ರೋಹಿಯಾಗುತ್ತಾನೆಂದು ಅವರೇ ಹೇಳುರುವುದರಿಂದ ದಯವಿಟ್ಟು ಈ ನಿಲುವಳಿ ಸೂಚನೆಯನ್ನು ರದ್ದುಗೊಳಿಸಬೇಕು. Sir, please reject this adjournment motion and allow other functions of the House to go on.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕು. Law Minister you are not the Authority? ಕ್ಯಾಬಿನೆಟ್‌ಗೆ ಮುಖ್ಯವಾದವರು ಮುಖ್ಯಮಂತ್ರಿಗಳು. We want statement from the Chief Minister. Let the Chief Minister come and make the statement.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಇದಕ್ಕೆ ನಾನೇ ಉತ್ತರ ಕೊಡಬೇಕಾಗಿದೆ.

**(ಗೊಂದಲ)**

ಸರ್ಕಾರ ಸರಿ ಇದೆ. ಇದು ನನ್ನ ಕರ್ತವ್ಯ. ಇದನ್ನು ನೀವು ಹೇಳುವುದಲ್ಲ. ಇದು ನಮ್ಮ ಕೆಲಸ. ಸರ್ಕಾರದ ಕೆಲಸ ಮಾಡಲಿಕ್ಕೆ ನಮಗೆ ಅಧಿಕಾರ ಇದೆ. ಸಂವಿಧಾನಾತ್ಮಕವಾಗಿ ಇದನ್ನು ರಿಜೆಕ್ಟ್ ಮಾಡಿ.

**ಶ್ರೀ ಸಿ.ಎಂ. ಇಬ್ರಾಹಿಂ:–** ನೀವು ಸರ್ಕಾರದ ಕೆಲಸ ಮಾಡಲಿಕ್ಕೆ ನಿಮಗೆ ಅಧಿಕಾರ ಇದೆ. ಮುಖ್ಯಮಂತ್ರಿಗಳು ಹೇಳಬೇಕೆಂದು ಕೇಳುವಂತಹ ಅಧಿಕಾರ ನಮಗೂ ಇದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ತಾವು ಸಹ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ. ಆದ್ದರಿಂದ, ತಾವು ಈ ರೀತಿಯಲ್ಲಿ ಕೇಳಬಾರದು.

**ಶ್ರೀ ಸಿ.ಎಂ. ಇಬ್ರಾಹಿಂ:–** ನಾನು ಕೇಳುತ್ತಿರುವುದು ಮುಖ್ಯಮಂತ್ರಿಗಳು ಹೇಳಬೇಕೆಂದು ಕೇಳುತ್ತಿದ್ದೇವೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ತಾವು ಸರ್ಕಾರದ ವಿರುದ್ಧವಾಗಿ ನೋಟೀಸ್ ಕೊಟ್ಟಿದ್ದೀರಿ. Hon'ble Chief Minister is Number one of the Government.

**ಶ್ರೀ ಸಿ.ಎಂ. ಇಬ್ರಾಹಿಂ:–** ನಾನು ಒಪ್ಪಿಕೊಳ್ಳುತ್ತೇನೆ ಮಹಾಸ್ವಾಮಿ.

**Sri J.C MADHUSWAMY:** Everyone sitting in the front row constitute Government.

**ಶ್ರೀ ಸಿ.ಎಂ. ಇಬ್ರಾಹಿಂ:–** ಹೌದು. ತಾವು ಸಂಸದೀಯ ವ್ಯವಹಾರಗಳ ಸಚಿವರಿದ್ದೀರಿ. ಇದರ ಬಗ್ಗೆ ಮುಖ್ಯಮಂತ್ರಿಗಳು ಏನು ಹೇಳುತ್ತಾರೆಂದು ಕೇಳಬೇಕಲ್ಲವೇ?

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೆ, ಇದಕ್ಕೆ ಉತ್ತರ ಕೊಡುವ ಕೆಲಸ ನನ್ನದು. Adjournment Motion ಅನ್ನು ಒಪ್ಪಿಕೊಳ್ಳಬೇಕೋ ಬಿಡಬೇಕೋ ಎನ್ನುವುದರ ಬಗ್ಗೆ ಸರ್ಕಾರದ ಪರವಾಗಿ ವಕಾಲತ್ತು ಹಾಕಬೇಕಾಗಿರುವುದು ನನ್ನದೇ ಕೆಲಸ. ಆ ಕೆಲಸವನ್ನು ನಾನು ಮಾಡಿದ್ದೇನೆ. ದಯಮಾಡಿ ಇದನ್ನು ರಿಜೆಕ್ಟ್ ಮಾಡಬೇಕು.

**ಶ್ರೀ ಸಿ.ಎಂ. ಇಬ್ರಾಹಿಂ:–** ಇದರ ಬಗ್ಗೆ ಮುಖ್ಯಮಂತ್ರಿಗಳು ಏನು ಹೇಳುತ್ತಾರೆನ್ನುವುದು ನಮಗೆ ಬೇಕು.

**Sri J.C MADHUSWAMY:** Sir, Adjournment Motion is not in order. ನಮ್ಮ ವಾದ ಅಷ್ಟೆ.

**ಶ್ರೀ ಪ್ರಕಾಶ್ ಕೆ. ರಾಥೋಡ್(ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಇದರಲ್ಲಿ ಮಾನ್ಯ ಮಂತ್ರಿಗಳು ನಮ್ಮ ಸದಸ್ಯರಿಗೆ threaten ಮಾಡಿದ್ದಾರೆ. How can they threaten our Member?

(ಗೊಂದಲ)

**ಸಭಾಪತಿಯವರು:–** ಶ್ರೀಯುತ ಪ್ರಕಾಶ್ ಕೆ. ರಾಥೋಡ್‌ರವರೆ, ತಾವು ಕುಳಿತು ಕೊಳ್ಳಿ. ನೀವು ವಕೀಲಿಕೆ ಮಾಡಬೇಡಿ. ಸರ್ಕಾರ ಹೇಳಿದ್ದನ್ನು ಮತ್ತು ವಿರೋಧ ಪಕ್ಷದವರು ಹೇಳಿದ್ದನ್ನು ನಾನು ಕೇಳಿದ್ದೇನೆ. ಎಲ್ಲವನ್ನು ವಿಚಾರ ಮಾಡಿದಾಗ ಮತ್ತು ಸಂವಿಧಾನ ರಕ್ಷಣೆ ಬಗ್ಗೆ ಮಂತ್ರಿಗಳು ಹೇಳಿರುವುದರಿಂದ ಈ ಹಿನ್ನೆಲೆಯಲ್ಲಿ ಇದನ್ನು ತಿರಸ್ಕಾರ ಮಾಡಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೆ, ಈ ರೀತಿ ಸಾಧ್ಯವೇ ಇಲ್ಲ. ಮಾನ್ಯ ಸಭಾಪತಿಯವರೆ, ಈ ನಿಲುವಳಿ ಸೂಚನೆ ಆರ್ಡರ್ ಆಗಿ ಇಲ್ಲವೆಂದು ಮಂತ್ರಿಗಳು ಹೇಳಿದರು. ಅವರ ಸರ್ಕಾರವೇ ಆರ್ಡರ್ ಇಲ್ಲದೇ ಇರುವಾಗ ನಿಲುವಳಿ ಸೂಚನೆ ಹೇಗೆ ಆರ್ಡರ್‌ನಲ್ಲಿ ಇರುತ್ತದೆ?

**(ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರು ಬಾವಿಯಲ್ಲಿ ಧರಣಿ ನಿರತರಾದರು)**

**ಸಭಾಪತಿಯವರು:–** ಇದರ ಬಗ್ಗೆ ಒಂದು ಬಾರಿ ತೀರ್ಮಾನ ಕೊಟ್ಟ ಮೇಲೆ ಮಾಡಿದ ಸದಸ್ಯರು ಬಾವಿಗೆ ಹೋಗುವಂತಹ ಕೆಲಸ ಮಾಡಬಾರದು. ಇದರ ಬಗ್ಗೆ ಸುಮಾರು ಎರಡೂವರೆ ತಾಸು ಚರ್ಚೆ ಆಗಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೆ, ಇದು ಗಂಭೀರ ವಿಚಾರವಾಗಿದೆ.

(ಗೊಂದಲ)

**ಸಭಾಪತಿಯವರು:-** ಈಗ ಸದನವನ್ನು ಮಧ್ಯಾಹ್ನ ೩-೦೦ ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಮಧ್ಯಾಹ್ನ 12 ಗಂಟೆ ೩೮ ನಿಮಿಷದಿಂದ ಮಧ್ಯಾಹ್ನ ೩-೦೦ ಗಂಟೆಯವರೆಗೆ ಸದನವನ್ನು ಮುಂದೂಡಲಾಯಿತು)**

**(೫೩) 16-೦2-2೦22 (೩.2೦) ಎಂ.ವಿ-ಬಿಎನ್‌ಎಸ್**

**(ಭೋಜನ ವಿರಾಮಕ್ಕಾಗಿ ಅಪರಾಹ್ನ 12 ಗಂಟೆ ೩೯ ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಅಪರಾಹ್ನ ೩ ಗಂಟೆ 24 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**2. ಸಂತಾಪ ಸೂಚನೆ**

**ವಿಷಯ: ಡಾ: ಹೆಚ್.ಡಿ.ಚೌಡಯ್ಯ ಮತ್ತು ಡಾ: ಚೆನ್ನವೀರ ಕಣವಿ ಅವರುಗಳು ನಿಧನರಾದುದರ ಬಗ್ಗೆ.**

---

**ಸಭಾಪತಿಯವರು:-** ವಿಧಾನ ಪರಿಷತ್ತಿನ ಹಾಗೂ ವಿಧಾನಸಭೆಯ ಮಾಜಿ ಶಾಸಕರಾದ ಡಾ:ಹೆಚ್.ಡಿ.ಚೌಡಯ್ಯ ಮತ್ತು ಕನ್ನಡದ ಸಮನ್ವಯ ಕವಿ, ಸುನೀತಗಳ ಸಾಮ್ರಾಟ್ ಚನ್ನವೀರ ಕಣವಿ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

**1. ಡಾ: ಹೆಚ್.ಡಿ.ಚೌಡಯ್ಯ,**

ವಿಧಾನ ಪರಿಷತ್ತಿನ ಹಾಗೂ ವಿಧಾನಸಭೆಯ ಮಾಜಿ ಶಾಸಕರಾದ ಡಾ:ಹೆಚ್.ಡಿ.ಚೌಡಯ್ಯನವರು ದಿನಾಂಕ 16.೦2.2೦22ರಂದು ನಿಧನ ಹೊಂದಿರುತ್ತಾರೆ.

1928ರಂದು ಜನಿಸಿದ್ದ ಶ್ರೀಯುತರು ಬಿ.ಎಸ್ಸಿ., (ಕೃಷಿ) ಪದವೀಧರರಾಗಿದ್ದರು. ಮೂಲತಃ ರೈತಾಪಿ ಕುಟುಂಬಕ್ಕೆ ಸೇರಿದ್ದ ಶ್ರೀಯುತರು ತಾಲ್ಲೂಕು ಬೋರ್ಡ್ ಸದಸ್ಯರಾಗಿ ಹಾಗೂ

ಅಧ್ಯಕ್ಷರಾಗುವ ಮೂಲಕ ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ್ದು, ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕಿನ ಅಧ್ಯಕ್ಷರಾಗಿ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿರುತ್ತಾರೆ. ಶಿಕ್ಷಣ ತಜ್ಞರು, ಶಿಸ್ತು, ದಕ್ಷ ಆಡಳಿತಗಾರರಾಗಿದ್ದು, ಹಿರಿಯ ಸಹಕಾರಿ ಧುರೀಣರಾಗಿ, ಕಾವೇರಿ ಹೋರಾಟದ ಮುಂಚೂಣಿ ನಾಯಕರಾಗಿದ್ದರು. ಮಂಡ್ಯದ ಪ್ರತಿಷ್ಠಿತ ಪಿ.ಇ.ಟಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ 31 ವರ್ಷಗಳ ಕಾಲ ಸುದೀರ್ಘ ಸೇವೆಯನ್ನು ಸಲ್ಲಿಸಿ ಸಂಸ್ಥೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ದರ್ಜೆಗೇರಿಸಿರುತ್ತಾರೆ.

1992ರಿಂದ 1998ರವರೆಗೆ ವಿಧಾನ ಸಭೆಯಿಂದ ಚುನಾಯಿತರಾಗಿ ವಿಧಾನ ಪರಿಷತ್ತಿನ ಶಾಸಕರಾಗಿ ಹಾಗೂ ನಾಲ್ಕು ಬಾರಿ ಕೆರಗೋಡು ಕ್ಷೇತ್ರದಿಂದ ವಿಧಾನಸಭೆಗೆ ಚುನಾಯಿತರಾಗಿದ್ದ ಅವಧಿಯಲ್ಲಿ ಹಂಗಾಮಿ ವಿರೋಧ ಪಕ್ಷದ ನಾಯಕರಾಗಿಯೂ ಕಾರ್ಯ ನಿರ್ವಹಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ದಕ್ಷ ಆಡಳಿತಗಾರ ಹಾಗೂ ಮುತ್ಸದ್ದಿ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

## 2. ಡಾ: ಚೆನ್ನವೀರ ಕಣವಿ

ಕನ್ನಡ ಸಾಹಿತ್ಯದ ಹಿರಿಯ ಚೇತನ, ಪ್ರಖ್ಯಾತ ಕವಿ, ನಾಡೋಜ ಪ್ರಶಸ್ತಿ ಪುರಸ್ಕೃತರಾದ ಡಾ: ಚೆನ್ನವೀರ ಕಣವಿರವರು ದಿನಾಂಕ 16.02.2022ರಂದು ನಿಧನ ಹೊಂದಿರುತ್ತಾರೆ.

28ನೇ ಜೂನ್, 1928ರಂದು ಗದಗ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಪ್ರಾಥಮಿಕ ಶಿಕ್ಷಣವನ್ನು ಹೊಂಬಳ ಗ್ರಾಮದಲ್ಲಿ ಮುಗಿಸಿ, ಮಾಧ್ಯಮಿಕ ಹಾಗೂ ಕಾಲೇಜು ಶಿಕ್ಷಣವನ್ನು ಧಾರವಾಡದಲ್ಲಿ ಪಡೆದಿದ್ದರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ಪದವೀಧರರಾಗಿದ್ದ ಶ್ರೀಯುತರು ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗದ ಕಾರ್ಯದರ್ಶಿಯಾಗಿ ಹಾಗೂ ನಿರ್ದೇಶಕರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಹೊಸಗನ್ನಡ ಕಾವ್ಯ ಪರಂಪರೆಯ ಹಿರಿಯ ತಲೆಮಾರಿನ ಕವಿಯೆಂದೇ ಹೆಸರುವಾಸಿಯಾಗಿದ್ದ ಕನ್ನಡದ ಖ್ಯಾತ ವಿದ್ವಾಂಸ, ಕನ್ನಡ ನಾಡಿನ ಸಮನ್ವಯ ಕವಿಯೆಂದೇ ಸಾಹಿತ್ಯ ವಲಯದಲ್ಲಿ ಚಿರಪರಿಚಿತರಾಗಿದ್ದು, ಅವರ ಕಾವ್ಯದಲ್ಲಿ ರಮ್ಯ ಮನೋಧರ್ಮ, ಆದರ್ಶಪ್ರಿಯತೆ, ವ್ಯಕ್ತಿತ್ವ ನಿರ್ಮಾಣದ ಹಂಬಲಗಳು ವಿಶೇಷವಾಗಿ ಕಂಡುಬರುತ್ತವೆ. "ವಿಶ್ವಭಾರತಿಗೆ

ಕನ್ನಡದಾರತಿ" ಮೊದಲಾದ ಜನಪ್ರಿಯ ಗೀತೆಗಳನ್ನು ರಚಿಸಿರುತ್ತಾರೆ. ಸುದೀರ್ಘ ಕಾವ್ಯೋದ್ಯೋಗದಲ್ಲಿ ಶ್ರೀಯುತರು ಅನೇಕ ಶ್ರೇಷ್ಠವಾದ ಕವಿತೆಗಳನ್ನು ಬರೆದು ಆಧುನಿಕ ಕನ್ನಡ ಕಾವ್ಯಗಳ ನವ್ಯತೆಯಲ್ಲಿ ವಿಭಿನ್ನತೆ ಕಾಯ್ದುಕೊಂಡ ಕವಿಗಳ ಸಾಲಿನಲ್ಲಿ ಶ್ರೇಷ್ಠರಾಗಿದ್ದಾರೆ.

ಶ್ರೀಯುತರು 36ಕ್ಕೂ ಹೆಚ್ಚು ಗ್ರಂಥಗಳು, 16 ಕವನ ಸಂಕಲನಗಳು, 5 ವಿಮರ್ಶಾ ಗ್ರಂಥಗಳು, ಪ್ರಬಂಧ ಸಂಕಲನ, ಮಕ್ಕಳ ಬರಹಗಳು ಸೇರಿದಂತೆ ಹಲವು ಬಗೆಯ ಅಮೂಲ್ಯ ಗ್ರಂಥಗಳನ್ನು ರಚಿಸಿ ಕನ್ನಡ ಸಾಹಿತ್ಯ ಲೋಕಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿರುತ್ತಾರೆ. ಶ್ರೀಯುತರು "ಜೀವಧ್ವನಿ" ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದಿದ್ದರು. ಹಾಸನದಲ್ಲಿ ನಡೆದ "65ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳ"ನದ ಅಧ್ಯಕ್ಷರಾಗಿ, 2008ರಲ್ಲಿ ನಡೆದ "ಆಳ್ವಾಸ್ ನುಡಿಸಿರಿ" ಸಮ್ಮೇಳನದ ಅಧ್ಯಕ್ಷರಾಗಿಯೂ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರು ಕೇಂದ್ರ ಸಾಹಿತ್ಯ ಅಕಾಡೆಮಿಯ ಜನರಲ್ ಕೌನ್ಸಿಲ್ ಸದಸ್ಯರಾಗಿ, ಕನ್ನಡ ಸಲಹಾ ಸಮಿತಿಯ ಸದಸ್ಯರಾಗಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ ಎರಡು ಅವಧಿಗೆ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಕರ್ನಾಟಕ ಕವಿರತ್ನ ಪ್ರಶಸ್ತಿ ಸೇರಿದಂತೆ ಇತರ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಶ್ರೀಯುತರ ನಿಧನದಿಂದಾಗಿ ಕನ್ನಡ ಸಾರಸ್ವತ ಲೋಕದ ಧ್ರುವತಾರೆಯೊಂದು ಕಣ್ಮರೆಯಾದಂತಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಡಾ: ಹೆಚ್.ಡಿ.ಚೌಡಯ್ಯನವರು ಮತ್ತು ಕನ್ನಡದ ಶ್ರೇಷ್ಠಕವಿ ಡಾ: ಚೆನ್ನವೀರ ಕಣವಿ ರವರ ನಿಧನಕ್ಕೆ ತಾವು ಏನು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ, ಅದಕ್ಕೆ ಸರ್ಕಾರ ಮತ್ತು ಸದನದ ಪರವಾಗಿ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಡಾ: ಹೆಚ್.ಡಿ.ಚೌಡಯ್ಯನವರು ತಾಲ್ಲೂಕು ಬೋರ್ಡ್‌ನ ಸದಸ್ಯರಾಗಿ ಹಾಗೂ ಅದರ ಅಧ್ಯಕ್ಷರಾಗುವ ಮೂಲಕ ರಾಜಕೀಯಕ್ಕೆ ಪ್ರವೇಶ ಮಾಡಿ, ಸಹಕಾರಿ ಕ್ಷೇತ್ರದಲ್ಲಿ ಅತ್ಯಂತ ಪರಿಣಾಮಕಾರಿಯಾದಂತಹ ಕೆಲಸ ಮಾಡಿದಂತಹ ಹಿನ್ನೆಲೆಯನ್ನು ಇಟ್ಟುಕೊಂಡು, ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟು, ಕೆಲಸ ಕಾರ್ಯಗಳನ್ನು ನಿರ್ವಹಿಸಿದ್ದು, ಅವರೊಬ್ಬ ಶ್ರೇಷ್ಠ ಆಡಳಿತಗಾರರು ಎನ್ನುವಂತಹ ಗೌರವಕ್ಕೆ ಪಾತ್ರರಾಗಿದ್ದು, ಹಲವಾರು ಶಿಕ್ಷಣ ಸಂಸ್ಥೆಗಳು, ಸಹಕಾರಿ ಕ್ಷೇತ್ರ ಮತ್ತು ರಾಜಕೀಯ ಕ್ಷೇತ್ರದಲ್ಲಿ ತನ್ನದೇ ಆದಂತಹ ಒಂದು ಗೌರವದ ಸೇವೆಯನ್ನು ಕೊಟ್ಟಿರುವಂಥದ್ದನ್ನು ಏನು ಉಲ್ಲೇಖ ಮಾಡಿದ್ದೀರಿ, ಅದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಅವರು ನಾಲ್ಕು ಬಾರಿ ಕೆರಗೋಡು ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾಗಿದ್ದು, ಅವರು ಹಿಂದೆ ವಿರೋಧ ಪಕ್ಷದಲ್ಲಿದ್ದು ಕೂಡ ಪರಿಣಾಮಕಾರಿಯಾಗಿ ಕೆಲಸ ಮಾಡಿರುವುದನ್ನು ತಾವು ಉಲ್ಲೇಖ ಮಾಡಿದ್ದೀರಿ, ಮೌಲ್ಯಗಳ ಬಗ್ಗೆ ಮಾತನಾಡಬೇಕಾದಂತಹ ಇಂದಿನ ದಿನಗಳಲ್ಲಿ, ಮೌಲ್ಯಾಧಾರಿತ ರಾಜಕಾರಣವನ್ನು ಮಾಡಿರುವಂತಹ ಹಿರಿಯ ರಾಜಕಾರಣಿ ಮತ್ತು ಜನಪ್ರತಿನಿಧಿಯಾಗಿದ್ದಂತಹ ಡಾ:ಹೆಚ್.ಡಿ.ಚೌಡಯ್ಯನವರ ನಿಧನದಿಂದ ರಾಜ್ಯದ ಒಬ್ಬ ಹಿರಿಯ ದಕ್ಷ ಆಡಳಿತಗಾರರನ್ನು ಕಳೆದುಕೊಂಡಂತಾಗಿದೆ ಎನ್ನುವಂತಹ ವಿಚಾರಕ್ಕೆ ಸಂಬಂಧಪಟ್ಟಂತೆ ತಾವು ಮಂಡಿಸಿದ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಡಾ: ಚೆನ್ನವೀರ ಕಣವಿಯವರು ಸಾಹಿತ್ಯ ಲೋಕದ ಒಬ್ಬ ಶ್ರೇಷ್ಠ ಕವಿ. ನಾಡೋಜ ಪ್ರಶಸ್ತಿಯನ್ನು ಪಡೆದಂತಹ ಹಿರಿಯರಾದ ಡಾ: ಚೆನ್ನವೀರ ಕಣವಿಯವರು ನಿಧನ ಹೊಂದಿದ್ದಾರೆ. ಆ ಬಗ್ಗೆ ತಾವು ಸಂತಾಪ ಸೂಚನೆಯನ್ನು ಮಂಡಿಸಿರುವುದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸಿ, ಗದಗ ಜಿಲ್ಲೆಯಲ್ಲಿ ಜನಿಸಿದಂತಹ ಡಾ: ಚೆನ್ನವೀರ ಕಣವಿಯವರು ಹೊಸಗನ್ನಡದ ಕಾವ್ಯ ಪರಂಪರೆಯ ಬಗ್ಗೆ ಒಂದು ಹೊಸ ತಲೆಮಾರಿಗೆ ಹೊಸ ಕಲ್ಪನೆಯನ್ನು ಕೊಟ್ಟಂತಹ ಒಬ್ಬ ಶ್ರೇಷ್ಠಕವಿ ಎನ್ನುವಂತಹ ಗೌರವಕ್ಕೆ ಪಾತ್ರರಾಗಿದ್ದಾರೆ.

**(ಮುಂದು)**

**(054) 16.02.2022 03.30 LL-BNS (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):-**

ಅವರ ಕಾವ್ಯದಲ್ಲಿ ರಮ್ಯ ಮನೋಧರ್ಮ, ಆದರ್ಶಪ್ರಿಯತೆ, ವ್ಯಕ್ತಿತ್ವ ನಿರ್ಮಾಣಕ್ಕೆ ವಿಶೇಷವಾದಂತಹ ಒತ್ತನ್ನು ಕೊಟ್ಟಿರುವಂಥದ್ದು ಕಂಡುಬರುತ್ತದೆ. "ವಿಶ್ವಭಾರತಿಗೆ ಕನ್ನಡದಾರತಿ" ಮೊದಲಾದ ಜನಪ್ರಿಯ ಗೀತೆಗಳನ್ನು ಅವರು ರಚನೆ ಮಾಡಿರುತ್ತಾರೆ. ಅವರು 36ಕ್ಕೂ ಹೆಚ್ಚು ಗ್ರಂಥಗಳು, 16 ಕವನ ಸಂಕಲನಗಳು, 5 ವಿಮರ್ಶಾ ಗ್ರಂಥಗಳು ಮತ್ತು ಮಕ್ಕಳ ಬರಹಗಳು ಇವೆಲ್ಲವೂ ಸಹ ಅತ್ಯಂತ ಶ್ರೇಷ್ಠ ಬರಹಗಳು ಎನ್ನುವಂತಹ ಖ್ಯಾತಿಗೆ ಅವರು ಪಾತ್ರರಾಗಿರುತ್ತಾರೆ. ಅವರ ಜೀವಧ್ವನಿ ಕೃತಿಗೆ ಕೇಂದ್ರ ಅಕಾಡೆಮಿ ಪ್ರಶಸ್ತಿ ಸಿಕ್ಕಿರುತ್ತದೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದ್ದು, ಇವೆಲ್ಲವೂ ಸಹ ಅವರಿಗೆ ಸಿಕ್ಕಿದಂತಹ ಗೌರವ ಎಂದು ನಾನು ಭಾವಿಸುತ್ತೇನೆ.

ನಾನು ಕಳೆದ ವರ್ಷ ಅವರ ಮನೆಗೆ ಹೋಗಿದ್ದೆನು. ಆ ಸಂದರ್ಭದಲ್ಲಿ ಅವರ ಜೀವನೋತ್ಸಾಹ, ಅವರ ಚಟುವಟಿಕೆ, ಸಾಹಿತ್ಯದ ಬಗ್ಗೆ ಅವರಿಗಿರುವಂತಹ ಅಗಾಧವಾದಂತಹ ಜ್ಞಾನ, ಕಾವ್ಯ, ಲೇಖನ, ಕವಿ ಹೃದಯದ ಮನಸ್ಸುಗಳನ್ನು ಇವೆಲ್ಲವನ್ನೂ ಒಟ್ಟಿಗೆ ಇಟ್ಟುಕೊಂಡು ಅವರು ಬದುಕಿದಂತಹ ರೀತಿ, ಅತ್ಯಂತ ಹಿರಿಯ ಬದುಕಿನ ಚೇತನಗಳನ್ನು ಕಂಡು ನನಗೆ ಆಶ್ಚರ್ಯವಾಗಿತ್ತು. ನನಗೆ ಅನಿಸಿದ ಮಟ್ಟಿಗೆ, ಕನ್ನಡದಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದಂತಹ ಹಿರಿಯ ಕವಿಗಳ ಸಾಲಿಗೆ ಸೇರಬಹುದಾದಂತಹ ವ್ಯಕ್ತಿತ್ವವನ್ನು ಡಾ: ಚೆನ್ನವೀರ ಕಣವಿಯವರು ಹೊಂದಿದ್ದರು. ಅತ್ಯಂತ ಶ್ರೇಷ್ಠ ಕವಿಗಳೆಂದು, ಕಥೆಗಾರರು, ಲೇಖಕರು, ವಿಮರ್ಶಕರು, ಕನ್ನಡದ ಶ್ರೇಷ್ಠ ಸಾಹಿತಿಗಳೆಂದು ನಾವೆಲ್ಲರೂ ಗೌರವಿಸುವಂತಹ ಡಾ: ಕುವೆಂಪು ಮತ್ತು ಡಾ: ಶಿವರಾಮ ಕಾರಂತರ ಸಾಲಿಗೆ ಸೇರಬಹುದಾದಂತಹ ವ್ಯಕ್ತಿತ್ವ ಡಾ: ಚೆನ್ನವೀರ ಕಣವಿಯವರಿಗೆ ಇದೆಯೆಂದು ನನಗೆ ಅನಿಸಿದೆ. ಅಂತಹ ಹಿರಿಯ ಚೇತನವನ್ನು ಕಳೆದುಕೊಂಡಿದ್ದಕ್ಕೆ ನಮೆಲ್ಲರಿಗೂ ಕೂಡ ಅತ್ಯಂತ ಆತಂಕವಾಗಿದೆ. ಜೊತೆಗೆ, ಸಂಕಟವಾಗಿದ್ದು ಸಹಜವಾಗಿದೆ. ಈ ಹಿನ್ನೆಲೆಯಲ್ಲಿ ತಾವು ಮಂಡಿಸಿರುವಂತಹ ಹಿರಿಯ ರಾಜಕಾರಣಿಯಾದ ಡಾ: ಹೆಚ್.ಡಿ. ಚೌಡಯ್ಯ ಮತ್ತು ಹಿರಿಯ ಸಾಹಿತಿ ಡಾ: ಚೆನ್ನವೀರ ಕಣವಿಯವರ

ನಿಧನಕ್ಕೆ ಸಂತಾಪವನ್ನು ಸೂಚಿಸಿ, ಅವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲಿ ಎನ್ನುವ ಉಲ್ಲೇಖಗಳನ್ನು ಮಾಡಿ, ತಾವು ಸೂಚಿಸಿದ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಮಂಡಿಸಿದಂತಹ ಸಂತಾಪ ಸೂಚನೆ ರಾಜ್ಯದ ಹಿರಿಯ ರಾಜಕಾರಣಿ ಡಾ: ಹೆಚ್.ಡಿ. ಚೌಡಯ್ಯನವರು ಮತ್ತು ಕರ್ನಾಟಕ ರಾಜ್ಯದ ಮತ್ತು ರಾಷ್ಟ್ರದ ಒಬ್ಬ ದೊಡ್ಡ ಸಾಹಿತಿಗಾರ ಡಾ: ಚೆನ್ನವೀರ ಕಣವಿಯವರ ಸಾವಿನ ಬಗ್ಗೆ ತಾವು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ, ಅದಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಈಗಾಗಲೇ ತಾವು ಹೇಳಿದ ಹಾಗೆ, ಡಾ: ಹೆಚ್.ಡಿ. ಚೌಡಯ್ಯನವರು ಮಂಡ್ಯ ಜಿಲ್ಲೆಯ ಕೆರೆಗೋಡು ಕ್ಷೇತ್ರದಿಂದ ವಿಧಾನಸಭಾ ಕ್ಷೇತ್ರಕ್ಕೆ ಆರಿಸಿ ಬರುತ್ತಿದ್ದಂತಹವರು. ಶ್ರೀಯುತರು ಅಪ್ಪಟ ಗಾಂಧಿವಾದಿಗಳು. ಅವರು ತಮ್ಮ ಜೀವನದುದ್ದಕ್ಕೂ ಖಾದಿ ಬಟ್ಟೆಯನ್ನು ಧರಿಸಿದಂತಹ ಡಾ: ಹೆಚ್.ಡಿ. ಚೌಡಯ್ಯನವರು ಈ ಒಂದು ಕಾಲಘಟ್ಟದಲ್ಲಿ ಅವರ ಕೊಡುಗೆಯನ್ನು ಯೋಚನೆ ಮಾಡಿದಾಗ, ಅದನ್ನು ಯಾರು ಸಹ ಊಹೆ ಮಾಡುವುದಕ್ಕೆ ಸಾಧ್ಯವಿಲ್ಲ. ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಗ್ರಾಮೀಣ ಭಾಗದಲ್ಲಿರುವಂತಹ ಬಡ ಮಕ್ಕಳಿಗೆ ಮತ್ತು ಶಿಕ್ಷಣ ಸೌಲಭ್ಯಗಳಿಂದ ವಂಚಿತರಾಗಿದ್ದವೆರಲ್ಲರಿಗೂ ಸಹ ಶಿಕ್ಷಣ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ಮಂಡ್ಯದಲ್ಲಿ ಸಾಕಷ್ಟು ಶಿಕ್ಷಣ ಸಂಸ್ಥೆಗಳನ್ನು ಅವರು ಬೆಳೆಸಿದ್ದಾರೆ. ಮಂಡ್ಯದಲ್ಲಿ ಎಲ್ಲಿಯೂ ಸಹ ಡೊನೇಷನ್ ಕಾಲೇಜುಗಳವರು ಅಥವಾ ಶಾಲೆಗಳವರು ಅವರಿಗೆ ಸಹಾಯ ಮಾಡಲಿಲ್ಲ. ಕಳೆದ ಬಾರಿ ಶ್ರೀ ಮಾದೇಗೌಡರು, ಶ್ರೀ ಶಂಕರೇಗೌಡರು ಮತ್ತು ಡಾ: ಹೆಚ್.ಡಿ. ಚೌಡಯ್ಯನವರಂತಹ ಮಹಾನ್ ಚೇತನಗಳು. ಜನಸಾಮಾನ್ಯರ ಬಗ್ಗೆ ನಿಜವಾದ ಕಾಳಜಿ ಇಟ್ಟುಕೊಂಡು, ಜನಸಾಮಾನ್ಯರ ಸೇವೆ ಮಾಡಬೇಕೆಂದು ಬಹಳ ಆಳವಾಗಿ ಚಿಂತನೆ ಮಾಡಿದಂತಹ ಹಿರಿಯ ಚೇತನ ನಮ್ಮಿಂದ ದೂರವಾಗಿರತಕ್ಕಂಥದ್ದನ್ನು ನೋಡಿದಾಗ, ಈ ರಾಜ್ಯದ ಒಬ್ಬ ಮುತ್ಸದ್ಧಿಯನ್ನು ನಾವು ಕಳೆದುಕೊಂಡಿದ್ದೇವೆ. ಅಂತಹ ನಾಯಕರು ಮುಂದೆ ನಮಗೆ ಸಿಗುವಂಥದ್ದು ದುರ್ಲಭ ಎಂದು ನನಗನ್ನಿಸುತ್ತದೆ. ಆದುದರಿಂದ, ತಾವು ಮಂಡಿಸಿರುವ ಸಂತಾಪ ಸೂಚನೆಗೆ ನಾನು ಸಹ ಸಹಮತ ವ್ಯಕ್ತಪಡಿಸುತ್ತೇನೆ.

ಡಾ: ಚೆನ್ನವೀರ ಕಣವಿಯವರು ಉತ್ತರ ಕರ್ನಾಟಕ ಭಾಗದಲ್ಲಿ ಜನಿಸಿ, ಅವರ ಸಾಹಿತ್ಯದಲ್ಲಿ ಉತ್ತರ ಕರ್ನಾಟಕದ ಸೊಗಡನ್ನು ಯಾವತ್ತೂ ಸಹ ನಾವು ನೋಡಬಹುದಿತ್ತು. ಅದಕ್ಕೋಸ್ಕರ ತಾವು ಕನ್ನಡ ನಾಡಿನ ಸಮನ್ವಯ ಕವಿ ಎಂದು ತಾವು ಹೇಳಿರುವಂಥದ್ದು ಬಹಳ ಸೂಕ್ತವಾಗಿರುತ್ತದೆ. ಸಾಹಿತ್ಯ ವಲಯದಲ್ಲಿ ಅವರ ಬರಹಗಳು, ಅದು ಕಾದಂಬರಿ ಇರಬಹುದು, ಕಥೆ ಇರಬಹುದು ಅಥವಾ ಮಕ್ಕಳ ಕಥೆಗಳು ಇರಬಹುದು ಅವರ ಸಾಹಿತ್ಯಗಳನ್ನು ನಾವು ನೋಡಿದಾಗ, ಅವು ಸಮಾಜದ ಎಲ್ಲಾ ವರ್ಗದವರಿಗೂ ಸಹ ಒಂದು ರೀತಿಯ ಮಾರ್ಗದರ್ಶನವಾಗಿ ಇರುವಂಥವುಗಳಾಗಿವೆ. ಅದರಲ್ಲಿಯೂ ಸಹ ಅವರು ಮಕ್ಕಳಿಗೆ ಬರೆದಂತಹ ಬರಹಗಳು ನಿಜವಾಗಿಯೂ ಸಹ ಅವರ ಜೀವನವನ್ನು ವಿಕಾಸ ಮಾಡುವುದಕ್ಕೆ ಬರೆದಂತಹ ಬಹಳಷ್ಟು ಬರಹಗಳನ್ನು ನಾನು ಸಹ ನೋಡಿದ್ದೇವೆ. ಹಾಗಾಗಿ, ಶ್ರೀಯುತರನ್ನು ಕಳೆದುಕೊಂಡಿದ್ದರಿಂದ ಕರ್ನಾಟಕ ರಾಜ್ಯದ ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ಶ್ರೀಯುತರ ಅಗಲಿಕೆ ನಮಗೆಲ್ಲರಿಗೂ ಬಹಳ ದುಃಖ ತರುವಂಥದ್ದಾಗಿದೆ. ಅವರ ಅಗಲಿಕೆಯಿಂದ ಕುಟುಂಬ ವರ್ಗದವರಿಗೆ ಉಂಟಾದ ನಷ್ಟವನ್ನು ಭರಿಸುವ ಎಲ್ಲಾ ಶಕ್ತಿಯನ್ನು ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಇದು ಕೇವಲ ಅವರ ಕುಟುಂಬ ವರ್ಗದವರಿಗೆ ಆದಂತಹ ನಷ್ಟವಲ್ಲದೇ, ಇದು ಇಡೀ ರಾಜ್ಯಕ್ಕೆ ಆದಂತಹ ನಷ್ಟವಾಗಿರುತ್ತದೆ ಎಂದು ಹೇಳಿ, ತಾವು ಮಂಡಿಸಿರುವ ಸಂತಾಪ ಸೂಚನೆಗೆ ನಾನು ನನ್ನ ಪಕ್ಷದ ಪರವಾಗಿ ಮತ್ತು ವೈಯಕ್ತಿಕವಾಗಿ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

**ಸಭಾಪತಿಯವರು:-** ಮೃತರುಗಳ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರು:–** ಈ ಸದನವು ಅಂಗೀಕರಿಸಿದ ಸಂತಾಪ ಸೂಚನೆ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

**೩. ಪ್ರಕಟಣೆ**

**ಸಭಾಪತಿಯವರು:–** ದಿನಾಂಕ:16.02.2022ರಂದು ಕರ್ನಾಟಕ ಜನತಾದಳ (ಜಾ) ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಅವರು ತಮ್ಮ ಪತ್ರದಲ್ಲಿ ತಿಳಿಸಿರುವ ರೀತ್ಯಾ, ಕರ್ನಾಟಕ ವಿಧಾನ ಪರಿಷತ್ತಿನ ಶಾಕಸರಾದ ಶ್ರೀ ಗೋವಿಂದರಾಜು ಅವರನ್ನು ದಿನಾಂಕ:16.02.2022ರಿಂದ ಜಾರಿಗೆ ಬರುವಂತೆ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಕರ್ನಾಟಕ ಜನತಾದಳ (ಜಾ) ಶಾಸಕಾಂಗ ಪಕ್ಷದ ಸಚೇತಕರನ್ನಾಗಿ ಪರಿಗಣಿಸಲಾಗಿದೆ ಎಂಬ ವಿಷಯವನ್ನು ಸದನದ ಗಮನಕ್ಕೆ ತರಲಾಗಿದೆ.

ಈಗ ಪ್ರಶ್ನೋತ್ತರ ಅವಧಿ.

**4. ನಿಯಮ 59ರಡಿಯಲ್ಲಿ ಪ್ರಸ್ತಾಪಿಸಿದ ವಿಷಯದ ಮೇಲೆ ಮಾನ್ಯ ಸಭಾಪತಿಯವರು ನೀಡಿರುವ ತೀರ್ಪನ್ನು ಪುನರ್ ಪರಿಶೀಲಿಸುವ ಬಗ್ಗೆ**

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು);-** ಮಾನ್ಯ ಸಭಾಪತಿಯವರೇ, ನಾನು ಈ ದಿನ ಬೆಳಗ್ಗೆ ನಿಯಮ 59ರಡಿಯಲ್ಲಿ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆನು. ತಾವು ಅದನ್ನು ತಿರಸ್ಕಾರ ಮಾಡಿದ್ದೀರಿ. ಆದರೆ, ಅದು ರಾಷ್ಟ್ರದ ಗೌರವದ ಪ್ರಶ್ನೆಯಾಗಿರುತ್ತದೆ. ಆದುದರಿಂದ, ಸದರಿ ನಿಲುವಳಿ ಸೂಚನೆಯ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಅದಕ್ಕೆ ಒಂದು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಇದೇ ಕೆಲಸವನ್ನು ಬೇರೆ ಯಾರಾದರೂ ವ್ಯಕ್ತಿ ಮಾಡಿದ್ದರೆ ಇಷ್ಟೊತ್ತಿಗೆ ಅವರ ವಿರುದ್ಧ ಎಲ್ಲಾ ರೀತಿಯ ರಾಷ್ಟ್ರದ್ರೋಹದ ಪ್ರಕರಣಗಳನ್ನು ದಾಖಲಿಸುತ್ತಿದ್ದರು. ಆದರೆ, ರಾಷ್ಟ್ರ ವಿರೋಧಿ ಚಟುವಟಿಕೆ ಮಾಡಿರುವಂತಹ ಮಂತ್ರಿಗಳು ರಾಜ್ಯ ಸರ್ಕಾರದ ಮಂತ್ರಿಮಂಡಲದಲ್ಲಿ ಇರತಕ್ಕಂತಹ ಯಾವುದೇ ರೀತಿಯ ನೈತಿಕ ಹಕ್ಕು ಇರುವುದಿಲ್ಲ. ಆದುದರಿಂದ, ದಯಮಾಡಿ ತತ್‌ಕ್ಷಣ ಅವರಿಂದ ರಾಜೀನಾಮೆಯನ್ನಾದರೂ ಕೊಡಿಸಬೇಕು, ಇಲ್ಲವಾದರೆ ನಾವು ಆ ವಿಷಯದ ಬಗ್ಗೆ ಮಾತನಾಡುವುದಕ್ಕೆ ನಮಗೆ ಅವಕಾಶ ನೀಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 59ರಡಿ ತಮ್ಮ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ತಾವು ಇರುವಂತಹ ನಿಯಮಗಳನ್ನು ಮೀರಿ ಅವರಿಗೆ ವಿಷಯ ಪ್ರಸ್ತಾಪಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದರಂತೆ, ತಾವು ಸರ್ಕಾರ ಮತ್ತು ವಿಪಕ್ಷದ ಅಭಿಪ್ರಾಯಗಳನ್ನು ಕೇಳಿದ ನಂತರ, ತಾವು ಒಂದು ತೀರ್ಮಾನವನ್ನು ಕೊಟ್ಟಿರುತ್ತೀರಿ. ಆ ತೀರ್ಪನ್ನು ಗೌರವಿಸಿಕೊಂಡು ಪ್ರಶ್ನೋತ್ತರ ಅವಧಿಗೆ ಅವರು ಅವಕಾಶ ಮಾಡಿಕೊಡುವುದು ಪ್ರಸ್ತುತ ಇರಬಹುದಾದಂತಹ ಒಂದು ವ್ಯವಸ್ಥೆ. ಅವರು ಅದನ್ನು ಗೌರವಿಸುತ್ತಾರೆ ಎಂಬುದು ನನ್ನ ನಂಬಿಕೆಯಾಗಿರುತ್ತದೆ. ನಾನು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ವಿನಂತಿ ಮಾಡುವುದೇನೆಂದರೆ, ಅವರ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಸರ್ಕಾರದ ಅಭಿಪ್ರಾಯಗಳನ್ನು ಕೇಳಿದ ನಂತರ ಪೀಠದಿಂದ ಕೊಟ್ಟಂತಹ ತೀರ್ಪನ್ನು ಪ್ರಶ್ನಿಸುವುದು ಸಮಂಜಸವಲ್ಲ. ಆ ಕಾರಣಕ್ಕೆ ಪೀಠದ ಆದೇಶವನ್ನು, ಪೀಠದ

ತೀರ್ಪನ್ನು ಸ್ವೀಕಾರ ಮಾಡಿ, ಪ್ರಶ್ನೋತ್ತರ ಅವಧಿಗೆ ಅವಕಾಶ ಮಾಡಿಕೊಡುವುದರಿಂದ ಈ ರಾಜ್ಯದ ಅನೇಕ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಸಿಗುವುದಕ್ಕೆ ಅವಕಾಶ ಅಗುತ್ತದೆ. ಹಾಗಾಗಿ, ನಾನು ತಮ್ಮ ಮೂಲಕ ವಿಪಕ್ಷಕ್ಕೆ ಮತ್ತೊಮ್ಮೆ ವಿನಂತಿ ಮಾಡುವುದೇನೆಂದರೆ, ವಿಪಕ್ಷವು ದಯವಿಟ್ಟು ಕಾರ್ಯಕಲಾಪದಲ್ಲಿ ಭಾಗವಹಿಸಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಪೀಠದ ತೀರ್ಮಾನವನ್ನು ನಾವು ಯಾವತ್ತಿಗೂ ಸಹ ಪ್ರಶ್ನೆ ಮಾಡುವುದಿಲ್ಲ. ಈ ವಿಷಯದಲ್ಲಿ ತಾವು ತಮ್ಮ ತೀರ್ಮಾನವನ್ನು ಕೊಟ್ಟಿದ್ದೀರಿ. ಆದರೆ, ಇಲ್ಲಿ ರಾಷ್ಟ್ರದ ತ್ರಿವರ್ಣ ಧ್ವಜದ ಗೌರವದ ಬಗ್ಗೆ ಪ್ರಶ್ನೆ ಇರುತ್ತದೆ. ಆ ರಾಷ್ಟ್ರಧ್ವಜ ಜನಸಾಮಾನ್ಯರದ್ದು, ಈ ಸದನದಲ್ಲ. ಅದಕ್ಕೆ ಯಾರು ಅಗೌರವ ಸೂಚಿಸಿದ್ದಾರೆ, ಅವರು ಮಂತ್ರಿಮಂಡಲದಲ್ಲಿ ಇರುವುದಕ್ಕೆ ಅವಕಾಶವಿರುವುದಿಲ್ಲ. ಅವರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಾಗುವವರೆಗೂ ಸಹ ನಮ್ಮ ಈ ಒತ್ತಾಯ ಇದ್ದೇ ಇರುತ್ತದೆ. ಆದರೆ, ತಮ್ಮ ತೀರ್ಮಾನದ ಬಗ್ಗೆ ನಮಗೆ ಯಾವುದೇ ರೀತಿಯ ಅಗೌರವ ಇರುವುದಿಲ್ಲ. ತಾವು ಹೇಳಿದ್ದನ್ನು ನಾವು ಕೇಳುತ್ತೇವೆ. ನಾವು ಜನಸಾಮಾನ್ಯರ ಕೂಗನ್ನು ಹೇಳುತ್ತಿದ್ದೇವೆ. ಈ ಮಂತ್ರಿಯವರು ರಾಷ್ಟ್ರವಿರೋಧಿ ಚಟುವಟಿಕೆಗಳಲ್ಲಿ ಇದ್ದಾರೆ. ಆದುದರಿಂದ, ಅವರನ್ನು ಮಂತ್ರಿಮಂಡಲದಿಂದ ಕೈಬಿಡಬೇಕೆಂದು ತಮ್ಮ ಮೂಲಕ ಘನತೆವೆತ್ತ ರಾಜ್ಯಪಾಲರನ್ನು ಸಹ ಮನವಿ ಮಾಡಿಕೊಳ್ಳುತ್ತೇನೆ. ಹಾಗಾಗಿ, ಸದರಿ ಮಂತ್ರಿಯವರನ್ನು ತತ್‌ಕ್ಷಣ suo moto ಸರ್ಕಾರದ ಮಂತ್ರಿಮಂಡಲದಿಂದ ವಜಾ ಮಾಡಬೇಕೆಂದು ಸಹ ನಾನು ಒತ್ತಾಯ ಮಾಡುತ್ತೇನೆ.

**ಸಭಾಪತಿಯವರು:-** ತಾವು ನಿಯಮ 59ರಡಿಯಲ್ಲಿ ವಿಷಯ ಪ್ರಸ್ತಾಪಿಸುವುದಕ್ಕೆ ನಾನು ಸಾಕಷ್ಟು ಸಮಯವನ್ನು ಕೊಟ್ಟಿರುತ್ತೇನೆ. ನಿಯಮ 59ರಡಿಯಲ್ಲಿ ವಿಷಯ ಪ್ರಸ್ತಾಪಿಸುವುದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತ್ರ ಅವಕಾಶ ನೀಡುವ ನಿಯಮವಿದ್ದರೂ ಸಹ ನಾನು ಸಾಕಷ್ಟು ಸದಸ್ಯರಿಗೆ ಮಾತನಾಡಲು ಅವಕಾಶ ನೀಡಿದ್ದು, ನನಗೆ ತಿಳಿದ ಮಟ್ಟಿಗೆ ಸುಮಾರು 2 ಗಂಟೆ 40 ನಿಮಿಷಗಳ ಕಾಲ ಚರ್ಚೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ತಾವು ಸಾಕಷ್ಟು ವಿಚಾರಗಳನ್ನು ಹೇಳಿರುತ್ತೀರಿ. ಅದಕ್ಕೆ ನಾನು ಸಹ ಸಹಮತವನ್ನು ವ್ಯಕ್ತಪಡಿಸಿ ತಮಗೆ ಮಾತನಾಡಲು ಅನುಮತಿ ನೀಡಿರುತ್ತೇನೆ. ನಾನು ಅದನ್ನು ಒಮ್ಮಿಂದೊಮ್ಮಲೇ ತಿರಸ್ಕಾರ ಮಾಡುವುದಾಗಲಿ ಅಥವಾ ಮತ್ತೊಂದು ಮಾಡುವುದಾಗಲಿ

ಮಾಡಿರುವುದಿಲ್ಲ. ಬದಲಾಗಿ, ತಮ್ಮ ಮನಸ್ಸಿನಲ್ಲಿರುವ ನೋವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ನೀಡಿರುತ್ತೇನೆ. ಅದರಂತೆ, ತಾವು ತಮ್ಮ ನೋವನ್ನು ವ್ಯಕ್ತಪಡಿಸಿರುತ್ತೀರಿ. ಈ ಸದನಕ್ಕೆ ಬಹಳಷ್ಟು ಜನ ಹೊಸ ಸದಸ್ಯರು ಬಂದಿರುತ್ತಾರೆ. ಇಂದಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಮಹತ್ವವಾದ ವಿಷಯಗಳ ಬಗ್ಗೆ ಪ್ರಶ್ನೋತ್ತರಗಳು ಹಾಗೂ ಇತರೆ ವಿಷಯಗಳು ಇವೆ. ಆ ಕಾರಣದಿಂದ ನಾನು ತಾವು ಕೊಟ್ಟಂತಹ ವಿಷಯದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ನನ್ನ ತೀರ್ಮಾನವನ್ನು ಕೊಟ್ಟಿರುತ್ತೇನೆ. ಆದುದರಿಂದ, ದಯಮಾಡಿ ತಾವು ಕಲಾಪ ನಡೆಯುವುದಕ್ಕೆ ಅನುವು ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ತಮ್ಮ ತೀರ್ಮಾನದ ಬಗ್ಗೆ ನಮ್ಮ ಪ್ರಶ್ನೆ ಇರುವುದಿಲ್ಲ. ಸರ್ಕಾರದ ಮೇಲೆ ನಮ್ಮ ಒತ್ತಾಯ ಇರುತ್ತದೆ. ಸದರಿ ಮಂತ್ರಿಯವರನ್ನು ಮಂತ್ರಿಮಂಡಲದಿಂದ ವಜಾ ಮಾಡಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ. ಬದಲಾಗಿ, ತಮ್ಮ ತೀರ್ಮಾನದ ಮೇಲೆ ನಮ್ಮ ಯಾವುದೇ ಒತ್ತಾಯ ಇರುವುದಿಲ್ಲ.

**(ಮುಂದು)**

**(55) 16.02.2022 3.40 ವೈಎಲ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು):-**

ಜೊತೆಗೆ ಮಾನ್ಯ ಸಚಿವರಾದ ಶ್ರೀ ಕೆ.ಎಸ್.ಈಶ್ವರಪ್ಪನವರು ಇವತ್ತಿಗೂ ಸಹ ಅವರ ನಿಲುವನ್ನು ಬದಲಾವಣೆ ಮಾಡಿಕೊಂಡಿಲ್ಲ. ಈ ಸದನಕ್ಕೆ ಹೊಸ ಸದಸ್ಯರು ಆಗಮಿಸಿದ್ದು, ಅವರಿಗೂ ಸಹ ರಾಷ್ಟ್ರಧ್ವಜದ ಬಗ್ಗೆ ಎಷ್ಟರ ಮಟ್ಟಿಗೆ ಗೌರವ ಇದೆ ಸದನದಲ್ಲಿರುವವರಿಗೆ ಎಂದು ಅನಿಸಬೇಕು. ಹಾಗಾಗಿ ಅವರನ್ನು ಸಹ ತಪ್ಪು ದಾರಿಗೆ ಕಳುಹಿಸಬಾರದು. ರಾಷ್ಟ್ರಧ್ವಜಕ್ಕೆ ಯಾರು ಅಗೌರವ ಸೂಚಿಸುತ್ತಾರೆ, ಅಂಥವರಿಗೆ ಯಾವುದೇ ರೀತಿಯ ಸ್ಥಾನಮಾನಗಳು ಇರಬಾರದು, ಅವರನ್ನು ಜೈಲಿಗೆ ಕಳುಹಿಸುವ ಕೆಲಸವನ್ನು ಹಿರಿಯ ಮನೆಯ ಸದಸ್ಯರಾಗಿ ಇಲ್ಲಿರುವಂಥವರು ಮಾಡಬೇಕಾಗಿದೆ. ದಯವಿಟ್ಟು ಅದಕ್ಕೆ ತಾವು ಅವಕಾಶ ನೀಡಬೇಕು. ಇಲ್ಲದಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಬಂದು

ಮಾನ್ಯ ಸಚಿವರು ಹೇಳಿರುವುದು ಸರಿಯೇ, ತಪ್ಪೇ ಎಂಬುದರ ಬಗ್ಗೆ ಹೇಳಿಕೆ ನೀಡಲಿ. ಯಾವುದಾದರೂ ಒಂದು ಆಗಲೇ ಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ವಿರೋಧ ಪಕ್ಷದವರಿಗೂ ವಿನಂತಿ ಮಾಡಿದ್ದೇನೆ. ಈಗಾಗಲೇ ನಿಯಮ 59ರ ಮೇರೆಗೆ ಉಲ್ಲೇಖ ಮಾಡಿರುವ ಕುರಿತು ಸರ್ಕಾರದ ವತಿಯಿಂದ ಉತ್ತರ ನೀಡಲಾಗಿದೆ. ಅನಂತರ ಸರ್ಕಾರಕ್ಕೆ ಹಾಗೂ ಪ್ರತಿಪಕ್ಷದವರಿಗೂ ಸಾಕಷ್ಟು ವಿಚಾರಗಳ ಮೇಲೆ ಚರ್ಚೆ ಮಾಡಲು ಅವಕಾಶ ಕಲ್ಪಿಸಿದ್ದೀರಿ. ಜೊತೆಗೆ ತಾವು ಸಹ ಪೀಠದಿಂದ ತೀರ್ಪು ನೀಡಿದ್ದೀರಿ. ಆ ಪೀಠದ ತೀರ್ಪನ್ನು ಗೌರವಿಸುವುದು ಸರ್ಕಾರದ ಮತ್ತು ಪ್ರತಿಪಕ್ಷದ ಜವಾಬ್ದಾರಿಯಾಗಿದ್ದು, ಇತಿಹಾಸಕ್ಕೂ ಸಹ ಅದನ್ನೇ ಅನುಸರಿಸುತ್ತಿರುವುದು. ಹಾಗಾಗಿ ತಮ್ಮ ಮೂಲಕ ವಿನಂತಿಸುವುದೇನೆಂದರೆ, ಜ್ವಲಂತವಾದ ಅನೇಕ ಸಮಸ್ಯೆಗಳಿದ್ದು, ಈಗಾಗಲೇ ಅನೇಕ ಸದಸ್ಯರು ಪ್ರಶ್ನೆಯನ್ನು ತಂದಿದ್ದು, ಅದಕ್ಕೆ ಮಾನ್ಯ ಸಚಿವರು ಉತ್ತರ ನೀಡಲು ಸಿದ್ಧತೆ ಮಾಡಿಕೊಂಡಿದ್ದಾರೆ. ಅದರ ಜೊತೆಗೆ ಗಮನ ಸೆಳೆಯುವ ಸೂಚನೆ, ನಿಯಮ 330 ಮತ್ತು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ಚರ್ಚೆ ಮಾಡಬೇಕಾದ ವಿಷಯಗಳಿದ್ದು, ಹಲವಾರು ಸದಸ್ಯರು ಹೆಸರುಗಳನ್ನು ಸಹ ನೀಡಿದ್ದಾರೆ. ಆ ಹಿನ್ನಲೆಯಲ್ಲಿ ಈಗಾಗಲೇ ಪೀಠದಿಂದ ಏನೆಂದು ತೀರ್ಪು ನೀಡಲಾಗಿತ್ತು, ಅದರ ಆಧಾರದ ಮೇಲೆ ಎರಡೂ ಕಡೆಯವರಿಗೂ ಆ ತೀರ್ಪು ಅಂತಿಮವಾಗಿರುತ್ತದೆ. ಹಾಗಾಗಿ ಪ್ರಶ್ನೋತ್ತರಕ್ಕೆ ಅವಕಾಶ ನೀಡಬೇಕೆಂದು ತಮ್ಮ ಮೂಲಕ ವಿರೋಧ ಪಕ್ಷದವರಲ್ಲಿ ವಿನಂತಿಸುತ್ತಾ, ಅದಕ್ಕೆ ಅವರು ಸಹಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಮಗೆ ತಮ್ಮ ವಿಚಾರದಲ್ಲಿ ಯಾವುದೇ ಅಭ್ಯಂತರ ಇರುವುದಿಲ್ಲ. ನಮ್ಮ ವಿರೋಧವೇನೆಂದರೆ, ಸರ್ಕಾರದ ಪರವಾಗಿ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವರು ಏನೊಂದು ಹೇಳಿಕೆ ನೀಡಿದ್ದಾರೆ ಅದು ಸರಿಯಿಲ್ಲ, ನಾವು ಅವರ ಹೇಳಿಕೆಗೆ ವಿರುದ್ಧವಾಗಿದ್ದೇವೆ. ಸರ್ಕಾರದ ಪರವಾಗಿ ಹೇಳಿಕೆ ನೀಡಿದ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವರ ವಿರುದ್ಧವಾಗಿದ್ದೇವೆ. ಆದ್ದರಿಂದ ತಾವು ದಯವಿಟ್ಟು ತಮ್ಮ ಪೀಠಕ್ಕೆ ಗೌರವ ನೀಡಿಲ್ಲವೆಂದು ಭಾವಿಸಿಕೊಳ್ಳುವುದು ಬೇಡ. ಸರ್ಕಾರದ ಹೇಳಿಕೆ

ಮತ್ತು ಸರ್ಕಾರದ ಉತ್ತರ ಸರಿಯಿಲ್ಲ. ಹಾಗಾಗಿ ನಾವು ಅದರ ವಿರುದ್ಧವಾಗಿ ಪ್ರತಿಭಟನೆ ಮಾಡೇ ಮಾಡುತ್ತೇವೆ.

**ಸಭಾಪತಿಯವರು:–** ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಆ ರೀತಿ ಆಗುವುದಿಲ್ಲ. ಮಾನ್ಯ ಸಚಿವರಾದ ಶ್ರೀ ಕೆ.ಎಸ್.ಈಶ್ವರಪ್ಪನವರು ರಾಜೀನಾಮೆ ನೀಡುವವರೆಗೂ ಪ್ರಶ್ನೋತ್ತರವನ್ನು ಕೈಗೊಳ್ಳುವುದು ಬೇಡವೆಂದು ತಮ್ಮಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವರು ಮಾನ್ಯ ಸಚಿವರಾದ ಶ್ರೀ ಕೆ.ಎಸ್.ಈಶ್ವರಪ್ಪನವರು ಆ ರೀತಿ ಹೇಳಿಕೆ ನೀಡಿಲ್ಲವೆಂದು ಉತ್ತರ ನೀಡಿರುವುದು ಸರಿಯೇ? ಉತ್ತರ ನೀಡುವ ಸಂದರ್ಭದಲ್ಲಿ ಸಹ ಸದನದ ದಾರಿ ತಪ್ಪಿಸುವ ಕೆಲಸ ಮಾಡಿದ್ದಾರೆ. ಅವರು ನೀಡಿರುವ ಉತ್ತರವನ್ನು ಒಪ್ಪುವುದಕ್ಕೆ ನಾವು ತಯಾರಿಲ್ಲ. ದಯವಿಟ್ಟು ನಮಗೆ ಚರ್ಚೆ ಮಾಡಲು ಅವಕಾಶ ನೀಡಿ. ಮಾನ್ಯ ಸಚಿವರಾದ ಶ್ರೀ ಕೆ.ಎಸ್.ಈಶ್ವರಪ್ಪನವರು ಮೇಲೆ ಕ್ರಮ ತೆಗೆದುಕೊಳ್ಳಬೇಕು, ತಕ್ಷಣವೇ ಅವರನ್ನು ಬಂಧಿಸಿ, ಸಚಿವ ಸ್ಥಾನದಿಂದ ವಜಾಗೊಳಿಸಬೇಕು.

**ಸಭಾಪತಿಯವರು:–** ಆಯಿತು. ನಿಯಮದ ಪ್ರಕಾರ ನೀವು ಏನು ಮಾಡುತ್ತೀರೋ ಅದನ್ನು ಮಾಡಿ. ಈಗ ಪ್ರಶ್ನೋತ್ತರವನ್ನು ಕೈಗೊಳ್ಳಲಾಗುವುದು. ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ ಪ್ರಶ್ನೆಯನ್ನು ಕೇಳಿ.

**ಶ್ರೀ ಪ್ರಕಾಶ್ ಕೆ.ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ಪ್ರಶ್ನೋತ್ತರವನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಅದಕ್ಕೆ ನಮ್ಮ ಸಹಮತಿ ಇಲ್ಲ.

**(ಗೊಂದಲ)**

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ. ಉತ್ತರ ನೀಡಲು ನಾವು ತಯಾರಿದ್ದೇವೆ.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ. ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರ ಪ್ರಶ್ನೆಯೇ ಮೊದಲು ಇದ್ದು, ಅವರನ್ನೇ ಮಾತನಾಡಲು ಕರೆದಿರುವುದು.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆಯನ್ನು ಕೇಳುತ್ತಿಲ್ಲ. ತಾವು ನಮಗೆ ಮಾನ್ಯ ಸಚಿವರಾದ ಶ್ರೀ ಕೆ.ಎಸ್.ಈಶ್ವರಪ್ಪನವರ ಹೇಳಿಕೆ ಕುರಿತು ಚರ್ಚೆ ಮಾಡಲು ನಮಗೆ ಅವಕಾಶ ನೀಡುತ್ತಿಲ್ಲ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರು ಸದನದ ಬಾವಿಯಲ್ಲಿ ಧರಣಿ ನಿರತರಾಗಲು ತೆರಳಿದರು)**

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರ ಪ್ರಶ್ನೆ ಸಂಖ್ಯೆ 110 ತೆಗೆದುಕೊಳ್ಳಲಾಗುವುದು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸರ್ಕಾರದ ಉತ್ತರವನ್ನು ನಾವು ಒಪ್ಪುವುದಿಲ್ಲ. ಸರ್ಕಾರವು ದೇಶದ್ರೋಹಿಗಳಿಗೆ ರಕ್ಷಣೆ ನೀಡುತ್ತಿದ್ದು, ತ್ರಿವರ್ಣ ಧ್ವಜಕ್ಕೆ ಅಗೌರವ ಸೂಚಿಸಿದವರಿಗೆ ರಕ್ಷಣೆ ನೀಡುತ್ತಿದ್ದಾರೆ. ಅವರ ಮೇಲೆ ರಾಷ್ಟ್ರದ್ರೋಹದ ಕೇಸ್ ದಾಖಲಿಸುತ್ತಿಲ್ಲ.

**(ಗೊಂದಲ)**

**೫.ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ 110**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಸಂಖ್ಯೆ 110ಕ್ಕೆ ಸಂಬಂಧಿಸಿದಂತೆ ಮಾನ್ಯ ಕಂದಾಯ ಸಚಿವರನ್ನು ಉತ್ತರ ಕೇಳಬಯಸುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಆದ್ದರಿಂದ ಈ ಸದನದಲ್ಲಿ ನಮ್ಮ ಪ್ರತಿಭಟನೆಯನ್ನು ಮುಂದುವರೆಸುತ್ತೇವೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಎನ್.ರವಿಕುಮಾರ್‌ರವರು ಕೇಳಿರುವ ಪ್ರಶ್ನೆಗೆ ಸಂಬಂಧಿಸಿದಂತೆ,...

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಯಲ್ಲಿ ಧರಣಿ ನಿರತರಾಗಿ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)**

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಕರ್ನಾಟಕ ಭೂ ಕಂದಾಯ ನಿಯಮಗಳು ೧೯೬೬ರ ನಿಯಮ ೯೭(೪) ರಡಿ ರಲ್ಲಿ ರಾಜ್ಯ ಸರ್ಕಾರಕ್ಕೆ ಮಂಜೂರಾತಿ ಮಾಡುವಂಥ ವಿಶೇಷಾಧಿಕಾರವನ್ನು ನಾವು ಬಳಸಿಕೊಂಡು ಈಗಾಗಲೇ ಹಲವಾರು ಸಂಘ-ಸಂಸ್ಥೆಗಳಿಗೆ ಜಾಗವನ್ನು ನೀಡಿದ್ದೇವೆ. ಈಗಾಗಲೇ ಸಚಿವ ಸಂಪುಟದ ಉಪ ಸಮಿತಿಯನ್ನು ರಚನೆ ಮಾಡಲಾಗಿದೆ, ಅದರಲ್ಲಿ ಸರ್ಕಾರಿ ಜಮೀನನ್ನು ಯಾವ ರೀತಿ ರೈತರಿಗೆ ಮತ್ತು ಸಂಘ-ಸಂಸ್ಥೆಗಳಿಗೆ ನೀಡಬೇಕೆಂಬುದರ ಬಗ್ಗೆ ವಿಸ್ತೃತವಾದ ಉಪ ಸಮಿತಿಯನ್ನು ಮಾನ್ಯ ಮುಖ್ಯಮಂತ್ರಿಗಳು ನೇಮಕ ಮಾಡಿದ್ದಾರೆ. ಹಾಗಾಗಿ ನೀತಿ-ನಿಯಮಗಳಡಿ ಈ ಸರ್ಕಾರಿ ಜಮೀನಿನ ಹಂಚಿಕೆ ನ್ಯಾಯಯುತವಾಗಿ ಆಗಬೇಕು. ಸರಿಯಾದ ನಿಯಮದ ಅಡಿ ಆಗಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಆದರೆ, ಸರ್ಕಾರ,...

**ಪ್ರಶ್ನೆ ಸಂಖ್ಯೆ: 130**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಸಿ.ಎನ್.ಮಂಜೇಗೌಡರವರು ಸದನಕ್ಕೆ ಗೈರು ಹಾಜರಾಗಿದ್ದರು)**

**ಪ್ರಶ್ನೆ ಸಂಖ್ಯೆ 115**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಹೆಚ್.ಎಂ.ರಮೇಶ್ ಗೌಡರವರು ಸದನಕ್ಕೆ ಗೈರು ಹಾಜರಾಗಿದ್ದರು)**

**ಪ್ರಶ್ನೆ ಸಂಖ್ಯೆ 132**

**(ಈ ಹಂತದಲ್ಲಿ ಮಾನ್ಯ ಯು.ಬಿ.ವೆಂಕಟೇಶ್‌ರವರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)**

**ಪ್ರಶ್ನೆ ಸಂಖ್ಯೆ 188**

**(ಈ ಹಂತದಲ್ಲಿ ಮಾನ್ಯ ಆರ್.ಬಿ.ತಿಮ್ಮಾಪೂರ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)**

**ಪ್ರಶ್ನೆ ಸಂಖ್ಯೆ 168**

**(ಈ ಹಂತದಲ್ಲಿ ಮಾನ್ಯ ಅರವಿಂದ ಕುಮಾರ್ ಅರಳಿಯವರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)**

**ಸಭಾಪತಿಯವರು:-** ಬಾವಿಯಲ್ಲಿ ನಿಂತು ಮಾತನಾಡುವುದು ಯಾವುದೂ ರೆಕಾರ್ಡ್ ಆಗಬಾರದು.

## ಪ್ರಶ್ನೆ ಸಂಖ್ಯೆ 127

## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕು ಸೂಲಿಬೆಲೆ ಹೋಬಳಿ ಶಾಂತನಪುರ ಗ್ರಾಮದ ಸರ್ವೇ ನಂ.09ರಲ್ಲಿ ಒಟ್ಟು ಎಷ್ಟು ಎಕರೆ ಸರ್ಕಾರಿ ಜಮೀನು ಇದೆ; ಎಷ್ಟು ಎಕರೆ ಜಮೀನನ್ನು ಮಂಜೂರು ಮಾಡಲಾಗಿದೆ ಎಂದು ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು ಸೂಕ್ತವಾದ ಉತ್ತರ ನೀಡಿದ್ದಾರೆ. ಈ ಸರ್ವೇ ನಂ.09 ರಲ್ಲಿನ ಒಟ್ಟು ಸುಮಾರು 200 ಎಕರೆ ಜಮೀನನ್ನು 1967ನೇ ಸಾಲಿನಲ್ಲಿ ಆ ಭಾಗದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಕಡು ಬಡವರಿಗೆ ಅಂದರೆ ಸುಮಾರು 50 ಜನ ರೈತರಿಗೆ ಆ ಸರ್ಕಾರಿ ಜಮೀನನ್ನು ಪರಬಾರೆ ಮಾಡಿದ್ದರೂ, ಅದೇ ದಿನಾಂಕದಂದು ಆ ಜಮೀನನ್ನು ಕೆಲವು ಅಧಿಕಾರಿಗಳು ಸೇರಿಕೊಂಡು 09 ಮಂದಿ ರೈತರ ಹೆಸರಿನಲ್ಲಿ ಅನಧಿಕೃತವಾಗಿ ಸುಮಾರು 46 ಎಕರೆ 24 ಗುಂಟೆ ಜಮೀನನ್ನು ಪರಬಾರೆ ಮಾಡಿದ್ದಾರೆ. ಈ ರೀತಿಯಾಗಿ ಸುಮಾರು ಒಟ್ಟು 246 ಎಕರೆ ಸರ್ಕಾರಿ ಜಮೀನು ಏನಿತ್ತು, ಆ ಜಮೀನನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಕಡುಬಡವ ರೈತರಿಗೆ ಸರ್ಕಾರದಿಂದ ಮಂಜೂರಾಗಿರುವ ಜಮೀನನ್ನು ಎಲ್ಲಾ ಸರ್ಕಾರಿ ಪದ್ಧತಿಗಳನ್ನು ವಿರೋಧ ಮಾಡಿ, ಹಿತಾಸಕ್ತಿ ರಾಜಕೀಯ ಪುಡಾರಿಗಳು, ಪ್ರಾಬಲ್ಯಯುತ ಜನರು ಅನಧಿಕೃತವಾಗಿ ಪರಬಾರೆ ಮಾಡಿಕೊಂಡಿದ್ದಾರೆ. ಹಾಗಾಗಿ ನಾನು ಮಾನ್ಯ ಮುಖ್ಯಮಂತ್ರಿಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಕಡುಬಡವ ರೈತರಿಗೆ ಇಲ್ಲಿಯವರೆಗೂ ಆ ಜಮೀನನ್ನು ನೀಡಿರುವುದಿಲ್ಲ. 1967ನೇ ಸಾಲಿನಿಂದ ಇಲ್ಲಿಯವರೆಗೆ ಸುಮಾರು 56 ವರ್ಷಗಳಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ಕಡುಬಡವ ರೈತರಿಗೆ ಸಿಗಬೇಕಾದ ನ್ಯಾಯವನ್ನು ಒದಗಿಸುವಲ್ಲಿ ಹಿಂದಿನ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಈಗ ಜನಪರವಾಗಿ ಕೆಲಸ ಮಾಡುತ್ತಿರುವ ಸರ್ಕಾರ ಹಾಗೂ ಜನಪರವಾಗಿ ಕೆಲಸ ಮಾಡುತ್ತಿರುವ ಕಂದಾಯ ಸಚಿವರು ಈ ಜಮೀನನ್ನು ಕಡುಬಡವ ರೈತರಿಗೆ ದೊರಕುವ ಹಾಗೆ ಮಾಡಬೇಕು. ಇಲ್ಲದಿದ್ದರೆ ಯಾರು

ಅನಧಿಕೃತವಾಗಿ ಈ ಜಮೀನನ್ನು ಕಬ್ಜ ಮಾಡಿಕೊಂಡಿದ್ದಾರೆ, ಅವರ ವಿರುದ್ಧ ತನಿಖೆ ಮಾಡಬೇಕು, ಅವರಿಗೆ ಶಿಕ್ಷೆ ನೀಡಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕಳಕಳಿಯಾಗಿ ವಿನಂತಿಸುತ್ತೇನೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, 1970ನೇ ಸಾಲಿನಲ್ಲಿ ಹೊಸಕೋಟೆ ತಾಲ್ಲೂಕು ಸಂಬಂಧಿಸಿದಂತೆ ಸುಮಾರು 200 ಎಕರೆ ಜಮೀನು ಅನಧಿಕೃತವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. PTCL [Karnataka Scheduled Castes and Scheduled Tribes (Prohibition of Transfer of certain Lands)] Act ಪ್ರಕಾರ ದಲಿತರಿಗೆ ನೀಡಿದ ಜಮೀನನ್ನು ಎರಡೇ ವರ್ಷದಲ್ಲಿ ನೋಂದಾಯಿಸಿಕೊಂಡು ಅಕ್ರಮವೆಸಗಿದ್ದಾರೆ. ಒಟ್ಟು ಸುಮಾರು 240 ಎಕರೆ ಜಮೀನಾಗಿದ್ದು, ಸುಮಾರು 500-600 ಕೋಟಿ ಅಕ್ರಮವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

**(ಮುಂದು)**

**(056) 16.02.2022/3.50/ಎಸ್‌ಕೆ-ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆರ್. ಅಶೋಕ(ಮುಂದು):-**

ಒಟ್ಟು 240 ಎಕರೆ ಸುಮಾರು ಐದು ನೂರು, ಆರನೂರು ಕೋಟಿ ಬೆಲೆ ಬಾಳುವ ಜಮೀನಾಗಿದೆ. ಅಕ್ರಮವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಮಾನ್ಯ ಸದಸ್ಯರೆಲ್ಲರೂ ಎ.ಸಿ.ಬಿ ತನಿಖೆಗೆ ವಹಿಸಿ ಎಂದು ಹೇಳುತ್ತಿದ್ದಾರೆ. ಅದನ್ನು ಎ.ಸಿ.ಬಿ. ತನಿಖೆಗೆ ಒಳಪಡಿಸಿ, ಪರಿಶಿಷ್ಟ ಮತ್ತು ದಲಿತರಿಗೆ ಸಿಗಬೇಕು. ಎ.ಸಿ.ಬಿ. ತನಿಖೆಗಾಗಿ ನಾನು ಆದೇಶವನ್ನು ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ 193**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ದಿನೇಶ್ ಗೂಳಿಗೌಡರವರು ಸದನದಲ್ಲಿ ಗೈರು ಹಾಜರಾಗಿದ್ದರು.)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಮಾನ್ಯ ವಿರೋಧ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಗೆ ಬಂದು ಧರಣಿಗೆ ನಿರತರಾದವರು)**

**ಪ್ರಶ್ನೆ ಸಂಖ್ಯೆ 134**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಸುಮಾರು 5678 ಹುದ್ದೆಗಳು ಖಾಲಿ ಇವೆ. ಈ ಖಾಲಿ ಇರುವ ಹುದ್ದೆಗಳನ್ನು ತುಂಬುವುದಕ್ಕೆ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಖಾಲಿ ಹುದ್ದೆಗಳನ್ನು ಪ್ರಮೋಷನ್ ಮೂಲಕ ತುಂಬಿಕೊಳ್ಳುತ್ತೇವೆಂದು ಹೇಳಿದ್ದಾರೆ. ಆದರೆ ಶೇಕಡ 50 ರಷ್ಟು ಪ್ರಮೋಷನ್ ಮೂಲಕ ಮತ್ತು ನೇರ ನೇಮಕಾತಿಯ ಮೂಲಕ ಶೇಕಡ 50 ರಷ್ಟು ಹುದ್ದೆಗಳನ್ನು ತುಂಬಬೇಕು. ಅದನ್ನು ಯಾವಾಗ ತುಂಬುತ್ತಾರೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಪ್ರಶ್ನೆಯನ್ನು ಕೇಳಬಯಸುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದೇ ರೀತಿ ಸದನ ನಡೆಸುವುದಾದರೆ, ದೇವರೇ ಕಾಪಾಡಬೇಕು.

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೇ, ಕಂದಾಯ ಇಲಾಖೆಯಲ್ಲಿ ಸಿಬ್ಬಂದಿಯ ಕೊರತೆ ಇದೆ. ಈಗಾಗಲೇ, ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಗ್ರೂಪ್ "ಸಿ" ವೃಂದದ ಗ್ರಾಮಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡಲು 14 ಜಿಲ್ಲೆಗಳಿಗೆ ಅನುಮತಿಯನ್ನು ಕೊಟ್ಟಿದ್ದೇನೆ. ಇನ್ನುಳಿದ ಜಿಲ್ಲೆಗಳಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡಲು ಸಹಮತಿ ನೀಡುವಂತೆ ಆರ್ಥಿಕ ಇಲಾಖೆಯನ್ನು ಕೋರಿದ್ದೇನೆ. ಅದಕ್ಕೂ ಸಹ ಅನುಮತಿಯನ್ನು ಪಡೆಯುತ್ತೇನೆ. ಅದೇ ರೀತಿಯಾಗಿ ಖಾಲಿ ಇರುವ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅನುಮತಿಯನ್ನು ಕೊಡುತ್ತಿದ್ದೇನೆ. 14 ಜಿಲ್ಲೆಗಳಲ್ಲಿ ಖಾಲಿ ಇರುವಂತಹ ಹುದ್ದೆಗಳಿಗೆ ಈಗಾಗಲೇ ಆರ್ಥಿಕ ಇಲಾಖೆಯವರು ಅನುಮತಿಯನ್ನು ಕೊಟ್ಟಿದ್ದಾರೆ. ಇನ್ನುಳಿದ ಜಿಲ್ಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೂ ಅನುಮತಿಯನ್ನು ತೆಗೆದುಕೊಳ್ಳುತ್ತೇನೆ. ಹುದ್ದೆಗಳು ಯಾವ್ಯಾವುದು ಖಾಲಿ ಇವೆ, ಅವುಗಳನ್ನು ಭರ್ತಿ ಮಾಡುವ ಅಧಿಕಾರವನ್ನು ಹೊಸದಾಗಿ

ಜಿಲ್ಲಾಧಿಕಾರಿಗಳಿಗೆ ನೀಡುತ್ತಿದ್ದೇನೆ. ಯಾವ್ಯಾವ ಹುದ್ದೆಗಳು ಖಾಲಿ ಇದೆ. ಅದನ್ನು ಭರ್ತಿ ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಲಾಗುತ್ತದೆ.

**ಶ್ರಿ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಇನ್ನು ಗ್ರಾಮಲೆಕ್ಕಿಗರ ಹುದ್ದೆಗಳು ಸಾವಿರಕ್ಕಿಂತ ಹೆಚ್ಚು ಹುದ್ದೆಗಳಿವೆ. ಅವುಗಳನ್ನು ನೇಮಕಾತಿ ಮಾಡುವ ಅವಶ್ಯಕತೆ ಇಲ್ಲ. ಗ್ರಾಮಲೆಕ್ಕಿಗರ ಹುದ್ದೆಗೆ ನೇರ ನೇಮಕಾತಿ ಮಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನಗೆಟ್ಟ ಬಿಜೆಪಿ ಸರ್ಕಾರಕ್ಕೆ ...

**ಶ್ರೀ ಆರ್. ಅಶೋಕ:–** ಮಾನ್ಯ ಸಭಾಪತಿಯವರೇ, ಹದಿನಾಲ್ಕು ಜಿಲ್ಲೆಗಳಿಗೆ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಈಗಾಗಲೇ ಅನುಮತಿಯನ್ನು ಕೊಟ್ಟಿದ್ದೇನೆ. ಇನ್ನುಳಿದ ಜಿಲ್ಲೆಗಳಿಗೆ ಹುದ್ದೆಗಳನ್ನು ತುಂಬುವುದಕ್ಕೆ ಆದಷ್ಟು ಶೀಘ್ರವಾಗಿ ಅನುಮತಿಯನ್ನು ಪಡೆದುಕೊಳ್ಳುತ್ತೇನೆ. ಇನ್ನು 14 ಜಿಲ್ಲೆಗಳಿಗೆ ನೇರ ನೇಮಕಾತಿ ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಕ್ರಮ ಕೈಗೊಳ್ಳುವುದಕ್ಕೆ ಹೇಳಿದ್ದೇನೆ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಆಟಲ್ ಜೀ ಜನ ಸ್ನೇಹಿ ಕೇಂದ್ರದೊಳಗೆ ಹೊರಗುತ್ತಿಗೆಯ ಮೇಲೆ ಇದ್ದಾರೆ. ಇಲ್ಲಿ ಖಾಯಂ ನೇಮಕಾತಿ ಮಾಡಬೇಕು. ಆದರೆ ಹೊರಗುತ್ತಿಗೆ ಇರುವುದು ಬೇಡ. ಅಲ್ಲಿ ಬಹಳ corruption ಆಗುತ್ತಿದೆ.

**ಶ್ರೀ ಆರ್. ಅಶೋಕ:–** ಮಾನ್ಯ ಸಭಾಪತಿಯವರೇ, ಈ ಆಟಲ್ ಜೀ ಜನ ಸ್ನೇಹಿ ಕೇಂದ್ರದ ಬಗ್ಗೆ ಈಗಾಗಲೇ ಸರ್ಕಾರ ಬೇರೆ ನಿರ್ಧಾರವನ್ನು ತೆಗೆದುಕೊಂಡಿದೆ. ಅದರ ಬಗ್ಗೆ ನಾನು ಪರಿಶೀಲನೆ ಮಾಡಿ, ಮತ್ತೆ ಆಟಲ್ ಜೀ ಜನ ಸ್ನೇಹಿ ಕೇಂದ್ರವೇನಿದೆ, ಅದು ಸಕಾರಾತ್ಮಕವಾಗಿ ಸ್ಪಂದಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಯಾರು ಗುತ್ತಿಗೆ ಆಧಾರದ ಮೇಲೆ ಇದ್ದಾರೋ, ಅವರು ಸರ್ಕಾರದ ಅಧೀನದಲ್ಲಿ ಬರುವುದಿಲ್ಲ. ಗುತ್ತಿಗೆ ಆಧಾರದಲ್ಲಿ ಎಲ್ಲಾ ಇಲಾಖೆಗಳಲ್ಲಿ ಇದ್ದಾರೆ. ಇಲ್ಲಿ ಖಾಯಂ ಮಾಡುವ ಪ್ರಶ್ನೆ ಉದ್ಭವವಾಗುವುದಿಲ್ಲ. ತಾವು ಗ್ರಾಮ ಲೆಕ್ಕಿಗರ ಹುದ್ದೆ ಬಗ್ಗೆ ಮಾತ್ರ ಪ್ರಶ್ನೆಯನ್ನು ಕೇಳಿದ್ದೀರಿ. ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಮಾನ್ಯ ವಿರೋಧ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಗೆ ಬಂದು ಧರಣಿಗೆ ನಿರಾತರಾದವರು)**

**ಸಭಾಪತಿಯವರು:-**ಮಾನ್ಯ ಮಂಜೇಗೌಡರೇ ತಮ್ಮ ಪ್ರಶ್ನೆಯನ್ನು ಕೇಳಿ. ಪ್ರಶ್ನೋತ್ತರವನ್ನು ನಡೆಸುವುದಕ್ಕೆ ಸದನದ ಬಾವಿಯಲ್ಲಿರುವ ಸದಸ್ಯರು ತಮ್ಮ ಸಹಕಾರವನ್ನು ಕೊಡಿ. ಮಾನ್ಯ ಸದಸ್ಯರೆಲ್ಲರೂ ಸಮಾಧಾನದಿಂದ ಇರಿ. ಪ್ರಶ್ನೋತ್ತರ ಅವಧಿ ಮುಗಿಯಲಿ. ಈ ರೀತಿ ಧರಣಿ ಮಾಡಿ, ಕೂಗಾಡಿದರೆ ಹೇಗೆ? ನಿಮಗೆ ಧರಣಿ ಮಾಡುವ ಅಧಿಕಾರವಿದೆ, ಧರಣಿ ಮಾಡಿ. ಆದರೆ ಕೂಗಾಡಬೇಡಿ. ಸದನ ಹೇಗೆ ನಡೆಸಬೇಕು?

**ಶ್ರೀ ಬಿ.ಕೆ. ಹರಿಪ್ರಸಾದ್:-** ಧರಣಿ ಎಂದರೆ ಕೂಗಾಡುವುದೇ ಆಗಿದೆ.

**ಪ್ರಶ್ನೆ ಸಂಖ್ಯೆ 130**

**ಉತ್ತರವನ್ನು ಲಗತ್ತಿಸಲಾಗಿದೆ.**

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಬೆಳೆ ಹಾನಿಗೊಳಗಾದ ರೈತರಿಗೆ ಪರಿಹಾರಕ್ಕಾಗಿ ಹಾಕಿರುವ ಅರ್ಜಿಗಳ ವಿವರವನ್ನು ಕೇಳಿದ್ದೆ. ಇದರ ಬಗ್ಗೆ ಮಾನ್ಯ ಸಚಿವರು ಮಾಹಿತಿಯನ್ನು ನೀಡಿರುವುದಿಲ್ಲ. ರೈತರಿಗೆ ಪರಿಹಾರ ನೀಡಿರುವ ರೂ. 6,000/- ಏನಿದೆ, ಅವೊತ್ತಿನ ಬೆಳೆ ಹಾನಿಗೆ ಕೊಟ್ಟಿರುವಂತಹದ್ದು. ಬೆಳೆ ಹಾನಿಗೆ ಕೊಟ್ಟಂತಹ ಹಣವನ್ನು ರೈತರು ಪುನಃ ಬೆಳೆ ಬೆಳೆಯಬೇಕೆಂದರೆ, ಗೊಬ್ಬರ ತರಬೇಕು ಮತ್ತು ಉಳುಮೆ ಮಾಡಬೇಕೆಂದರೆ, ಅದಕ್ಕೆ ಯಾವುದೇ ರೀತಿಯ ಸಹಾಯದ ಘೋಷಣೆ ಮಾಡಿಲ್ಲ ಎನ್ನುವುದೊಂದು.

ಎರಡನೇಯದಾಗಿ, ಯಾವ್ಯಾವ ಬೆಳೆಗೆ ಎಷ್ಟೆಷ್ಟು ಪರಿಹಾರವನ್ನು ಕೊಟ್ಟಿದ್ದೀರಿ ರೈತರಿಗೆ ಯಾವುದೇ ರೀತಿಯ ಮಾಹಿತಿಯನ್ನು ನೀಡಿರುವುದಿಲ್ಲ. ಈ ಮಳೆಯಾಶ್ರಿತವಾದ ಜಿಲ್ಲೆಗಳಲ್ಲಿ ಕಾಫಿ ಬೆಳೆ ಎಷ್ಟು ಎಕರೆ ಪ್ರದೇಶ ಹಾನಿಗೀಡಾಗಿದೆ ಎಂಬ ಬಗ್ಗೆ ಮಾನ್ಯ ಸಚಿವರು ಮಾಹಿತಿಯನ್ನು ನೀಡಿರುವುದಿಲ್ಲ. ಹಾಗೇ ಸರ್ವೆ ವಿಚಾರದಲ್ಲಿ ಜಾಸ್ತಿ ಹಣವನ್ನು ನಿಗಧಿ ಮಾಡಿದ್ದಾರೆ. ಒಬ್ಬ ಸರ್ವೆಯರ್‌ಗೆ ಒಂದು ಸಾವಿರ ನಾಲ್ಕು ನೂರ ರೂಪಾಯಿ ಕೊಡಬೇಕಾಗುತ್ತದೆ ಎನ್ನುವ ವಿಚಾರವನ್ನು ನಿನ್ನೆ ದಿವಸ ಮಾನ್ಯ ಸಚಿವರು ಹೇಳಿದ್ದಾರೆ. ಒಬ್ಬ ಸರ್ವೆಯರ್‌ಗೆ ಒಂದಿಷ್ಟು ಟಾರ್ಗೆಟ್‌ನ್ನು ನಿಗಧಿ ಮಾಡಿದರೆ, ಆ ರೀತಿ ಮೂರ್ನಾಲ್ಕು ಜನ ಸರ್ವೆಯರ್‌ಗಳಿಗೆ ಅವಕಾಶ ಮಾಡಿಕೊಟ್ಟರೆ, ಅದರಿಂದಾಗಿ ಹೆಚ್ಚಿನ ಹಣವನ್ನೇನು ನಿಗಧಿ ಮಾಡಿದ್ದೀರೋ, ಅದು ಉಳಿತಾಯವಾಗುತ್ತದೆ. ಹಾಗೆಯೇ, ರೈತರಿಗೂ ಕೂಡ ಕಡಿಮೆ ಮಾಡಬಹುದು ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೇ, ಈ ಹದ್ದುಬಸ್ತುಗಳ ಬಗ್ಗೆ ಅರ್ಜಿಗಳೇನಿವೆ? 1978ನೇ ಇಸವಿಯಲ್ಲಿ ತೆರಿಗೆಯನ್ನು ನಿಗಧಿಪಡಿಸಿದ್ದರು. ಐವತ್ತು ವರ್ಷಗಳೊಳಗೆ

ಯಾವುದೇ ಏರಿಕೆಯನ್ನು ಮಾಡಿಲ್ಲ. ಈಗಾಗಲೇ ಒಂದು ಸಾವಿರದ ಐದುನೂರು ರೂಪಾಯಿಗಳನ್ನು ಏನೊಂದು ನಿಗಧಿ ಮಾಡಿದ್ದೇವೆ. ಮೂರು ದಿನಗಳ ಹಿಂದೆಯೇ, ಐದು ನೂರು ರೂಪಾಯಿಗಳನ್ನು ಕಡಿಮೆ ಮಾಡಿದ್ದೇವೆ. ಸಾರ್ವಜನಿಕರ ಮನವಿ ಬಂದ ಮೇಲೆ ಏನೊಂದು ಜಾಸ್ತಿಯಾಗಿತ್ತೋ, ಅದನ್ನು ಕಡಿಮೆ ಮಾಡಿದ್ದೇವೆ. ಮೊದಲು Government Surveyor ಮಾತ್ರ ಸರ್ವೆ ಮಾಡುತ್ತಿದ್ದರು. ಈಗ ಖಾಸಗೀಯವರಿಗೂ ಸರ್ವೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇವೆ. ಕರ್ನಾಟಕದಲ್ಲಿ ಎರಡು ಲಕ್ಷ ಅರ್ಜಿಗಳು ಪೆಂಡಿಂಗ್ ಇದೆ. ಎರಡು ಲಕ್ಷ ಇರುವಂತಹ ಅರ್ಜಿಗಳನ್ನು ನಮ್ಮ ಸರ್ಕಾರಿ surveyor ಗಳು ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಸಿ.ಎನ್.ಮಂಜೇಗೌಡ:-** ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಬೆಳೆ ಹಾನಿಗೊಳಗಾದ ರೈತರಿಗೆ ಪರಿಹಾರಕ್ಕಾಗಿ ಹಾಕಿರುವ ಅರ್ಜಿಗಳ ಬಗ್ಗೆ ಹೇಳಿಲ್ಲ ಎಂದು ನಾನು ತಮಗೆ ಹೇಳುತ್ತಿದ್ದೇನೆ.

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೇ, ಕಳೆದ ಬಾರಿ ಪ್ರವಾಹ ಬಂದಾಗ, ಬೆಳೆ ಹಾನಿಯಾಗಿರುವಂತಹದ್ದು. ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆ. ಮಳೆಯಾಶ್ರಿತ ಜಮೀನು ಏನಿದೆ, ಕೇಂದ್ರದ ಎನ್.ಡಿ.ಆರ್.ಎಫ್. ನಿಯಮದ ಪ್ರಕಾರ ರೈತರಿಗೆ ಆರು ಸಾವಿರದ ಎಂಟ ನೂರು ರೂಪಾಯಿಗಳನ್ನು ಕೊಟ್ಟಿದ್ದೇವೆ. ನೀರಾವರಿ ಬೆಳೆಗೆ ಹದಿಮೂರು ಸಾವಿರದ ಐದು ನೂರು ರೂಪಾಯಿಗಳನ್ನು ಕೊಟ್ಟಿದ್ದೇವೆ. ಬಹು ವಾರ್ಷಿಕ ಬೆಳೆಗೆ ಹದಿನೆಂಟು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮಳೆಯಾಶ್ರಿತ ಬೆಳೆಗೆ ಒಂದು ಸಾವಿರದ ಎಂಟು ನೂರು ರೂಪಾಯಿಗಳು, ನೀರಾವರಿ ಬೆಳೆಗೆ ಹನ್ನೊಂದು ಸಾವಿರದ ಐದು ನೂರು ರೂಪಾಯಿಗಳು, ಬಹು ವಾರ್ಷಿಕ ಬೆಳೆಗೆ ಹತ್ತು ಸಾವಿರ ರೂಪಾಯಿಗಳನ್ನು ಮಾನ್ಯ ಮುಖ್ಯಮಂತ್ರಿಗಳು ಹೆಚ್ಚುವರಿಯಾಗಿ ಹಣವನ್ನು ನೀಡಿದ್ದಾರೆ. ಒಟ್ಟು ರೂ. ೨೩೮೮.೩೯ ಕೋಟಿ ಇನ್‌ಪುಟ್ ಸಬ್ಸಿಡಿ ಮೊತ್ತವನ್ನು ರೈತರ ಖಾತೆಗೆ ನೇರವಾಗಿ ಜಮಾ ಮಾಡಲಾಗಿದೆ. ರಾಜ್ಯ ಸರ್ಕಾರ ರೂ.೧೧೩೫.೫೮ ಕೋಟಿಗಳನ್ನು ಹೆಚ್ಚುವರಿಯಾಗಿ ರೈತರಿಗೆ ಹಣವನ್ನು ಕೊಟ್ಟಿದ್ದೇವೆ. ಮೊದಲು ಈ ವರ್ಷ ಪ್ರವಾಹ ಬಂದರೆ, ಮುಂದಿನ ವರ್ಷ ಪರಿಹಾರ ಕೊಡುತ್ತಿದ್ದರು. ಪರಿಹಾರ ಸಿಗಬೇಕೆಂದರೆ ಸುಮಾರು ಏಳೆಂಟು ತಿಂಗಳು ಕಾಯಬೇಕಾಗಿತ್ತು. ಆದರೆ ಈಗ ಆ ರೀತಿ ಇಲ್ಲ. ಪ್ರವಾಹ ಬಂದು, ಒಂದೇ ತಿಂಗಳನಲ್ಲಿ ರೈತರಿಗೆ ಪರಿಹಾರ ಕೊಡುವಂತಹ ಕೆಲಸವನ್ನು ಸರ್ಕಾರ

ಮಾಡಿದೆ. ರೈತರು ಸಂಕಷ್ಟದ ನೆರವಿಗೆ ಸರ್ಕಾರ ಈಗಾಗಲೇ ಹೆಚ್ಚುವರಿ ಹಣವನ್ನು ನೀಡಿದೆ. ರೈತರ ಸಂಕಷ್ಟಕ್ಕೆ ಸರ್ಕಾರ ಮೀಡಿದಿದೆ ಎನ್ನುವ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇವೆ.

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಬೆಳೆ ಹಾನಿಗೊಳಗಾದ ರೈತರು ಪರಿಹಾರಕ್ಕಾಗಿ ಹಾಕಿರುವಂತಹ ಅರ್ಜಿಗಳು ಬಾಕಿ ಎಷ್ಟಿವೆ ಎಂಬ ಬಗ್ಗೆ ಮಾಹಿತಿಯನ್ನು ಕೇಳಿದ್ದೇನೆ. ಬೆಳೆ ಹಾನಿಗೊಳಗೊದ ರೈತರಿಗೆ ಪರಿಹಾರಕ್ಕಾಗಿ ಸುಮಾರು ಆರು ಸಾವಿರ ರೂಪಾಯಿಗಳ ಚಿಲ್ಲರೆ ಹಣವನ್ನು ಕೊಡುತ್ತಿದ್ದೀರಿ. ಈ ಆರು ಸಾವಿರ ರೂಪಾಯಿ ಕೊಟ್ಟಿರುವಂತಹ ಪರಿಹಾರ ಬೆಳೆ ನಾಶಕ್ಕೆ ಆಗಿದೆ.

**(ಮುಂದು)**

**(057) 16.02.2022 4.00 ಟಿಸಿಹೆಚ್-ಜಿಆರ್ (ಮಾನ್ಯ ಸಭಾಪತಿಯವರ ಉಪಸ್ಥಿತಿ)**

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಮತ್ತೆ ಅವರು ಮುಂದೆ ಬೆಳೆಯತಕ್ಕಂಥ ಬೆಳೆಗೆ ಸರ್ಕಾರ ಯಾವ ರೀತಿಯಾಗಿ ಸಹಾಯ ಮಾಡುತ್ತದೆ? ಈಗ ನಾವೆಲ್ಲಾ ನೋಡುತ್ತಿರುವಂತೆ ರೈತರು ಬಹಳ ಕಷ್ಟದಲ್ಲಿದ್ದಾರೆ. ಸರ್ಕಾರ ಅವರ ಬೆಳೆ ನಾಶವಾಗಿದ್ದಕ್ಕೆ ಪರಿಹಾರ ಕೊಟ್ಟಿದೆ. ಆದರೆ ಆ ರೈತರು ಮುಂದೆ ಬೆಳೆ ಬೆಳೆಯಬೇಕಲ್ಲವೇ, ಬೆಳೆ ಬೆಳೆಯುವುದಕ್ಕೆ ಸರ್ಕಾರ ಏನು ಸಹಾಯ ಮಾಡುತ್ತದೆ?

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮುಂದಿನ ದಿನಗಳಲ್ಲಿ ಬೆಳೆ ಬೆಳೆಯುವಂಥ ಸಂರ್ಭದಲ್ಲಿ ಆ ರೈತರಿಗೆ ಏನು ಸಹಾಯ ಬೇಕಿದೆಯೋ, ಅದನ್ನು ಸನ್ಮಾನ್ಯ ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡಿ ಅವರಿಗೆ ಸಹಾಯ ಮಾಡುವಂಥ ವ್ಯವಸ್ಥೆಯನ್ನು ಮಾಡುತ್ತೇನೆ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಘೋಷಣೆಗಳನ್ನು ಕೂಗುತ್ತಿದ್ದರು)**

**ಪ್ರಶ್ನೆ ಸಂಖ್ಯೆ.194**

**(ಉತ್ತರ ಲಗತ್ತಿಸಿದೆ)**

**ಶ್ರೀ ಡಿ.ಎಸ್.ಅರುಣ್:–** ಮಾನ್ಯ ಸಭಾಪತಿಯವರೇ, ಜಿ.ಪಿ.ಎಸ್., ನ್ನು 2010–11ಕ್ಕೆ ಅಳವಡಿಸಲಾಯಿತು. ಅದನ್ನು ಅಳವಡಿಸಿದಂಥ ಸಂದರ್ಭದಲ್ಲಿ ಜಿ.ಪಿ.ಎಸ್., ಆ ಗ್ರಾಮಗಳಿಗೆ ಹೋಗಿ ಮನೆಗಳನ್ನು ಲೊಕೇಟ್ ಮಾಡಿದಾಗ ಸುಮಾರು 50 ರಿಂದ 100 ಮೀಟರ್ ವ್ಯತ್ಯಾಸಗಳು ಕೂಡ ಕಂಡುಬಂದಿದೆ. ಮೇಜರ್ ಆಗಿ ಸಮಸ್ಯೆಯಾಗುತ್ತಿರುವುದು ಪಿ.ಡಿ.ಓ., ಮತ್ತು ಅಲ್ಲಿನ ಅಧಿಕಾರಿಗಳಿಂದ. ಆ ಮಾಹಿತಿ ತಂತ್ರಜ್ಞಾನದ ಅರಿವು ಅವರಿಗೆ ಇರಬೇಕು. ಆದರೆ ಟೆಕ್ನಾಲಜಿ ಬಗ್ಗೆ ಅವರಿಗೆ ಅರಿವಿಲ್ಲ. ಮೊದಲಿಗೆ ಜಿ.ಪಿ.ಎಸ್., ನಿಂದ ಮನೆಗಳನ್ನು ಲೊಕೇಟ್ ಮಾಡಿದ ನಂತರ, ಆ ಮನೆಗಳಿಗೆ ದುಡ್ಡು ತಲಪಬೇಕೆನ್ನುವುದಕ್ಕೋಸ್ಕರ ಒಂದು ಬಾರಿ ಮಾತ್ರ ‘ಒಂದು ರೂಪಾಯಿಯನ್ನು ಟೆಸ್ಟಿಂಗ್’ ಎಂದು ಕಳುಹಿಸಬೇಕಾಗಿತ್ತು. ಆದರೆ ಮೂರು ಮೂರು ಬಾರಿ ಒಂದೊಂದು ರೂಪಾಯಿ ಕಳುಹಿದ್ದಾರೆ. ಆ ಮೂರು ಮೂರು ಬಾರಿ ಕಳುಹಿಸಿದರೂ ಕೂಡ ಬರೀ ಒಂದು ರೂಪಾಯಿ ಟೆಸ್ಟಿಂಗ್ ದುಡ್ಡು ಬರುತ್ತದೆಯೇ ಹೊರತು, ಆಮೇಲೆ ಆ ಮನೆಗಳಿಗೆ ಬರಬೇಕಾಗಿರತಕ್ಕಂಥ ದುಡ್ಡು ಬರುತ್ತಿಲ್ಲ. ಇನ್ನೊಂದು ಬಹಳ ಮುಖ್ಯವಾದುದೇನೆಂದರೆ, ಇದೆಲ್ಲವೂ ರಾಜೀವ್ ಗಾಂಧಿ ವಸತಿ ನಿಗಮದಿಂದ coordination ಆಗುತ್ತಿರುವಂಥದ್ದು. ಜಿಲ್ಲೆಯ Chief Executive Officer ರವರಿಗೆ ತಾವು ಅಧಿಕಾರವನ್ನು ಕೊಟ್ಟಾಗ ಮಾತ್ರ ಇದನ್ನು ಏನಾದರೂ ಬದಲಾವಣೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಈಗಾಗಲೇ ಮನೆಗಳಿಗೆ ರೂ. 303.64 ಕೋಟಿಗಳು ಬಿಡುಗಡೆಯಾಗಬೇಕಾಗಿತ್ತು. ಆದರೆ ಕೇವಲ ರೂ. 59 ಕೋಟಿ ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆ. ಇನ್ನೂ ರೂ.244 ಕೋಟಿಗಳು ಬಿಡುಗಡೆಯಾಗಬೇಕಾಗಿದೆ. ಹಾಗಾಗಿ, ತಕ್ಷಣವೇ ಜಿಲ್ಲೆಯ Chief Executive Officer ರವರನ್ನು ಜೊತೆಗೂಡಿಸಿಕೊಳ್ಳಿ. ಏಕೆಂದರೆ ಸ್ಥಳೀಯವಾಗಿ ಇರತಕ್ಕಂಥ ಪಿ.ಡಿ.ಓ., ಹಾಗೂ ಕಾರ್ಯದರ್ಶಿಯವರಿಗೆ ಇವರ್ಯಾರಿಗೂ ಹೆಚ್ಚಿನ ಅಧಿಕಾರವಿಲ್ಲ. ಆ ನಿಗಮದಿಂದ ಬೇರ್ಪಡಿಸಿದರೆ ಮಾತ್ರ ನಾವು ಅವರಿಗೆ ನ್ಯಾಯ ಕೊಡುವುದಕ್ಕೆ ಸಾಧ್ಯ. ಹಾಗಾಗಿ, ಇದನ್ನು ತಕ್ಷಣವೇ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)(ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್.ಅರುಣ್‌ರವರು ಕೇಳಿದಂಥ ಪ್ರಶ್ನೆಗೆ ಸ್ಪಷ್ಟವಾದ ಉತ್ತರವನ್ನು ಕೊಡಲಾಗಿದೆ. ಆದರೆ ಅವರು ಏನು ಹೇಳುತ್ತಿದ್ದಾರೆಂದರೆ, ಪಿ.ಡಿ.ಓ.,ರವರು ಮಾಹಿತಿಯ ಕೊರತೆಯಿಂದಾಗಿ ಜಿ.ಪಿ.ಎಸ್., ನಲ್ಲಿ ಒಂದಷ್ಟು ಸಮಸ್ಯೆಗಳಾಗುತ್ತಿದೆ. ಅದರ ಬದಲಿಗೆ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ, ಅವಕಾಶ ಕೊಡಿ, ಇದರಿಂದ ಹೆಚ್ಚಿನ ಅನುಕೂಲವಾಗುತ್ತದೆಂದು ಹೇಳಿದ್ದಾರೆ. ಸುಮಾರು 37,252 ಜಿ.ಪಿ.ಎಸ್., ಅಳವಡಿಕೆ ಮಾಡಿ ಹಣ ಕೊಡಬೇಕಾದಂಥ ಮನೆಗಳನ್ನು ನಾವು ಈಗಾಗಲೇ ಗುರ್ತಿಸಿದ್ದೇವೆ. ಆದಾಗ್ಯೂ ಮಾನ್ಯ ಸದಸ್ಯರು ಹೇಳಿದಂತೆ, ಈಗಾಗಲೇ ರೂ.59 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಮತ್ತೊಮ್ಮೆ ಪುನರ್ ಪರಿಶೀಲನೆ ಮಾಡಿ, ಜಿ.ಪಿ.ಎಸ್.,ನ್ನು ಮತ್ತೊಮ್ಮೆ ಅಳವಡಿಸುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ. ಯಾರ್ಯಾರು ತಮ್ಮ ಮನೆಗೆ ಪಾಯ ಹಾಕಿಕೊಂಡು, ಗೋಡೆ ಕಟ್ಟಿಕೊಂಡು, ಛಾವಣಿ ಮಾಡಿ, ಇನ್ನು ಬಾಕಿ ಯಾರ್ಯಾರು ಇದ್ದಾರೋ ಅವರಿಗೆ ಹಣ ಬಿಡುಗಡೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ವರದಿ ತರಿಸಿಕೊಂಡು ಹಣ ಬಿಡುಗಡೆ ಮಾಡುವಂತಹ ಕೆಲಸವನ್ನು ಮಾಡುತ್ತೇವೆ. ಕೊನೆಯ ವ್ಯಕ್ತಿಗೂ ಕೂಡ ಹಣ ಪಾವತಿ ಮಾಡುವಂಥ ಜವಾಬ್ದಾರಿ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ನೀವು ಅವರ ಖಾತೆಗೆ ಒಂದು ರೂಪಾಯಿ ಹಾಕಿದ್ದೀರಿ ಎಂದು ಹೇಳಿದ್ದಾರೆ. ಆ ಬ್ಯಾಂಕ್ ಖಾತೆ ಅವರದ್ದೋ ಅಥವಾ ಬೇರೆಯವರದ್ದೋ ಎಂದು ದೃಢೀಕರಿಸುವುದಕ್ಕೋಸ್ಕರ ಒಂದು ರೂಪಾಯಿ ಹಾಕುವುದು ರೂಢಿಯಿದೆ. ಅದನ್ನೂ ಕೂಡ ಸಮರ್ಪಕವಾಗಿ ಮಾಡುತ್ತೇವೆ.

**ಶ್ರೀ ಡಿ.ಎಸ್.ಅರುಣ್:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಅವರ ಖಾತೆಗೆ ಟೆಸ್ಟಿಂಗ್ ಎಂದು ಒಂದು ರೂಪಾಯಿಯನ್ನು ಒಂದೇ ಬಾರಿ ಹಾಕಿದರೆ ಸಾಕು. ಮೂರು ಮೂರು ಬಾರಿ ಟೆಸ್ಟಿಂಗ್ ಮಾಡುತ್ತಿದ್ದಾರೆ. ಆ ಫಲಾನುಭವಿಗಳಿಗೆ ಮೂರು ಬಾರಿ ಒಂದೊಂದು ರೂಪಾಯಿ ಬಂದಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಹಾಗೇನಾದರೂ ಅವರ ಖಾತೆಗೆ ಒಂದೊಂದು ರೂಪಾಯಿ ಮೂರು ಬಾರಿ ಬಂದಿದ್ದರೆ, ಅದು ನೈಜತೆ ಇದ್ದರೆ ಅವರ ಖಾತೆಗೆ ಹಣ ಹಾಕುವಂಥ

ಕೆಲಸಗಳನ್ನು ಮಾಡುತ್ತೇವೆ. ಮತ್ತೆ ಅಗತ್ಯವಿದ್ದರೆ ಮಾನ್ಯ ಸದಸ್ಯರ ಜೊತೆ ರಾಜೀವ್ ಗಾಂಧಿ ವಸತಿ ನಿಗಮದ ಅಧಿಕಾರಿಗಳನ್ನು ಕರೆದು ಮಾತನಾಡಿ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಘೋಷಣೆಗಳನ್ನು ಕೂಗುತ್ತಿದ್ದರು)**

**ಪ್ರಶ್ನೆ ಸಂಖ್ಯೆ.153**

**(ಉತ್ತರ ಲಗತ್ತಿಸಿದೆ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ರಾಜ್ಯದಲ್ಲಿ ಬಗರ್ ಹುಕುಂ ಯೋಜನೆಯಡಿಯಲ್ಲಿ ಇದೂವರೆಗೂ ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ, ತಾಲ್ಲೂಕುವಾರು ವಿವರ ನೀಡುವಂತೆ ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು ಸಂಪೂರ್ಣವಾದ ಉತ್ತರವನ್ನು ಕೊಟ್ಟಿದ್ದಾರೆ. ಸದರಿ ಯೋಜನೆಯಲ್ಲಿ ಇಲ್ಲಿಯವರೆಗೂ ಎಷ್ಟು ಅರ್ಜಿಗಳು ಬಂದಿದ್ದವು, ಎಷ್ಟು ಅರ್ಜಿಗಳು ಇತ್ಯರ್ಥವಾಗಿವೆ, ಬಾಕಿ ಇರತಕ್ಕಂಥ ಅರ್ಜಿಗಳೆಷ್ಟು ಎಂದು ಕೇಳಿದ್ದಕ್ಕೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಉದಾಹರಣೆಗೆ ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು 8967 ಅರ್ಜಿಗಳನ್ನು ಸ್ವೀಕರಿದ್ದು, ಅದರಲ್ಲಿ 8389 ಅರ್ಜಿಗಳನ್ನು ವಿಲೇವಾರಿ ಮಾಡಿದ್ದು, ಇನ್ನೂ 578 ಅರ್ಜಿಗಳು ಬಾಕಿ ಇದೆಯೆಂದು ಉತ್ತರ ಕೊಟ್ಟಿದ್ದಾರೆ. ಉಳಿದಿರತಕ್ಕಂಥ ಅರ್ಜಿಗಳನ್ನು ಆದಷ್ಟು ಬೇಗನೆ ಇತ್ಯರ್ಥಪಡಿಸಬೇಕೆಂದು ಮಾನ್ಯ ಸಚಿವರಲ್ಲಿ ತಮ್ಮೂಲಕ ಮನವಿಯನ್ನು ಮಾಡುತ್ತಿದ್ದೇನೆ. ಇದರ ಜೊತೆಗೆ ಜಿಲ್ಲಾವಾರು ವಿವರಗಳನ್ನು ಅನುಬಂಧ-1, ಅನುಬಂಧ-2 ಮತ್ತು ಅನುಬಂಧ-3ರಲ್ಲಿ ಕೊಟ್ಟಿರತಕ್ಕಂಥ ಅಂಕಿ ಅಂಶಗಳಿಗೂ ಮತ್ತು ಇಲ್ಲಿ ಕೊಟ್ಟಿರತಕ್ಕಂಥ ಅರ್ಜಿಗಳ ವಿಲೇವಾರಿಯಲ್ಲೂ ಕೂಡ ಬಹಳ ವ್ಯತ್ಯಾಸ ಕಾಣುತ್ತಿದೆ. ಮಾನ್ಯ ಸಚಿವರು ದಯವಿಟ್ಟು ಅದನ್ನು ಪರಿಶೀಲಿಸಬೇಕೆಂದು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ನಮೂನೆ-3ರಲ್ಲಿ ಬಾಗಲಕೋಟೆಯಲ್ಲಿ 1217 ಅರ್ಜಿಗಳು ಬಂದಿದ್ದು, ಅವು ಇದುವರೆಗೂ ಕೂಡ ಯಾವುದೇ ಇತ್ಯರ್ಥವಾಗಿರುವುದಿಲ್ಲ. ತಕ್ಷಣವೇ ಅದನ್ನು ಇತ್ಯರ್ಥ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅದರ ಜೊತೆಗೆ ಸದರಿ ಅರ್ಜಿ ಸಲ್ಲಿಸಲು ಕಾಲಾವಕಾಶವನ್ನು ವಿಸ್ತರಿಸುವುದಕ್ಕೆ ಸರ್ಕಾರ ಏನಾದರೂ ದಿನಾಂಕವನ್ನು ನಿಗದಿಪಡಿಸುತ್ತದೆಯೇ? ಏಕೆಂದರೆ ಈಗಾಗಲೇ ನಿಗದಿಪಡಿಸಿದಂಥ ಅವಧಿ ಮುಗಿದಿದೆ. ಮತ್ತೆ ಬಗರ್ ಹುಕುಂ ಅರ್ಜಿಯನ್ನು ಹಾಕುವುದಕ್ಕೆ ಬಡವರಿಗೆ ಇನ್ನಷ್ಟು ಅವಕಾಶವನ್ನು ಮಾಡಿಕೊಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪನವರು ಕೇಳಿರತಕ್ಕಂಥ ಪ್ರಶ್ನೆಗೆ ನಾವು ಈಗಾಗಲೇ ಉತ್ತರವನ್ನು ಒದಗಿಸಿದ್ದೇವೆ.

ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು 8967 ಅರ್ಜಿಗಳು ಸ್ವೀಕರಿಸಲಾಗಿದೆ. ಅದರಲ್ಲಿ ಒಟ್ಟು 8389 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಇನ್ನೂ 578 ಅರ್ಜಿಗಳು ಬಾಕಿ ಇರುತ್ತದೆ. ಆ 578 ಅರ್ಜಿಗಳನ್ನೂ ಕೂಡ ಆದಷ್ಟು ಶೀಘ್ರವಾಗಿ ವಿಲೇವಾರಿ ಮಾಡುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಅದೇ ರೀತಿ ನಿಯಮ 1964 ಕಲಂ 94 (ಎ) ಅಡಿಯಲ್ಲಿ ನಮೂನೆ-57ರ ಅರ್ಜಿಯನ್ನು ವಿಸ್ತರಿಸಬೇಕೆಂದು ಕೇಳಿದ್ದಾರೆ. ಒಂದು ವರ್ಷಗಳ ಕಾಲ ಈ ಅರ್ಜಿಯನ್ನು ಹಾಕುವುದಕ್ಕೆ ರೈತರಿಗೆ ಅವಕಾಶ ಮಾಡಿಕೊಡುತ್ತಿದ್ದೇವೆ.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳು.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಆ ರೈತರು ಅರ್ಜಿ ಹಾಕಿ, ಮನವಿ ಮಾಡಿಕೊಳ್ಳುವುದಕ್ಕೆ ನಾವು ಅವಕಾಶ ಮಾಡಿಕೊಡುತ್ತೇವೆ.

**ಪ್ರಶ್ನೆ ಸಂಖ್ಯೆ.145**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರು ಸದನದಲ್ಲಿ ಉಪಸ್ಥಿತರಿಲ್ಲ, ಹಾಗಾಗಿ ಶ್ರೀ ಎನ್.ರವಿಕುಮಾರ್ ರವರ ತಡೆಹಿಡಿಯಲಾದ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದ ಕಾಂಗ್ರೇಸ್ ಪಕ್ಷದ ಮಾನ್ಯ ಸದಸ್ಯರುಗಳು ಘೋಷಣೆಗಳನ್ನು ಕೂಗುತ್ತಿದ್ದರು)**

**<u>ತಡೆಹಿಡಿಯಲಾದ ಪ್ರಶ್ನೆ ಸಂಖ್ಯೆ.46</u>**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈ ವಿಧವಾ . . .

**ಸಭಾಪತಿಯವರು:-** ಮಾನ್ಯ ಎನ್. ರವಿಕುಮಾರ್‌ರವರೇ, ತಾವು ಕುಳಿತುಕೊಳ್ಳಿ.

**ಶ್ರೀ ಎನ್.ರವಿಕುಮಾರ್:-** ಆಯಿತು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ನೀಡಲಾದ ಉತ್ತರಗಳ ಮಂಡನೆ:-**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 16ನೇ, ಫೆಬ್ರವರಿ 2022ರ ಸಮೂಹ-3ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 89 ಪ್ರಶ್ನೆಗಳ ಪೈಕಿ, 52 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:–** ಈಗ ಸದನವನ್ನು ನಾಳೆ ಬೆಳಗ್ಗೆ 10.30 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 4 ಗಂಟೆ 10 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 17ನೇ ಫೆಬ್ರವರಿ ಮಾಹೆ 2022ರ ಗುರುವಾರದಂದು ಬೆಳಗ್ಗೆ 10.30 ಗಂಟೆಗೆ ಸೇರಲು ತೀರ್ಮಾನಿಸಲಾಯಿತು)**

**<><><>**